
ಕಲ್ಯಾಣ ಕಿರಣ

ಡಿಸೆಂಬರ್-2007 ಬೆಲೆ- 10.00





ಲಿಂಗಾಯತ ಧರ್ಮಕ್ಕೆ ಸಂವಿಧಾನಾತ್ಮಕ ಮಾನ್ಯತೆ ನೀಡಬೇಕೆಂದು ಒತ್ತಾಯಿಸಿ ನವದೆಹಲಿಯ ಜಂತರ್-ಮಂತರ್ ಬಳಿ ಪ್ರತಿಭಟನಾ ಮೆರವಣಿಗೆ.





ಸಂಪುಟ-37 ಬಸವ ಶಕೆ-874 ಆಜೀವ ಸದಸ್ಯತ್ವ 1000 ರೂ.
ಸಂಚಿಕೆ-12 ಡಿಸೆಂಬರ್-2007 ವಾರ್ಷಿಕ ಚಂದಾ 100/- ರೂ.

★ ಬಸವ ಧರ್ಮದ ಕಿರಣವಾಗಲು ಬಾ ★

ಬಾ ಭಕ್ತ ಶರಣಾಗು ಹೊಂದು ಬಸವನ ಒಲುಮೆ
ಈ ಬಸವ ಮಹಾಮನೆಯು ದಿವ್ಯ ಸ್ಫೂರ್ತಿಯ ಚಿಲುಮೆ || ಪ ||

ಕೂಡಲ ಸಂಗಮನ ದಿವ್ಯ ಸನ್ನಿಧಿಯೊಳು
ಮಂತ್ರಧ್ಯಾನವ ಗೈದು ಹರಿಯುತಿಹಳೀ ಕೃಷ್ಣೆ
ಗುರು ಬಸವನ ಚರಣ ಭಕ್ತಿಯಿಂ ತೊಳೆಯುತ
ಮಲಪ್ರಭೆಯು ಸಾಗಿಹಳು ಓಂಕಾರ ಶ್ರುತಿ ಹಿಡಿದು || 1 ||

ಅಂಗವೆನೆ ಜೀವಾತ್ಮ ಲಿಂಗವೆನೆ ಪರಮಾತ್ಮ
ಲಿಂಗಾಂಗ ಸಮರಸವೆ ಜೀವನದ ಗುರಿಯು
ಬಸವ ಗೀತೆಯ ಸಾರ ಇದುವೆ ಆಗಿಹುದು
ಲಿಂಗದೇವನ ಎಡೆಗೆ ಕರೆದೊಯ್ಯುತಿಹುದು || 2 ||

ಕಲ್ಯಾಣ ಪ್ರಣತೆಯಲಿ ಭಕ್ತಿ ತೈಲವ ಉಂಡು
ಬಸವ ಜ್ಯೋತಿಯು ಅಂದು ಜನಮನವ ಬೆಳಗಿತು
ಸಂಗಮದ ಹಣತೆಯಲಿ ತ್ಯಾಗ ತೈಲವನೆರೆದು
ಬಸವ ಜ್ಯೋತಿಯ ಬೆಳಕ ಜಗಕ್ಕೆಲ್ಲ ಪಸರಿಸುವಾ || 3 ||

ಬಸವ ಕ್ರಾಂತಿಯ ದಿನದಿ ಸಂಗಮಕೆ ನೀ ಬಂದು
ಬಸವ ಸಾಗರದೊಳಗೆ ಮಿಂದು ಪುಳಕಿತನಾಗು
ಶರಣ ಮೇಳಕೆ ಬಂದು ಶರಣರೊಡನೆ ಆಡಿ
ಬಸವ ಧರ್ಮದ ಕಿರಣ ನೀನಾಗಿ ಸಾಗು || 4 ||

– ಮಾತಾಜಿ

---

1. ದಕ್ಷಿಣದ ಕೃಷ್ಣೆಗೆ ಕರೆವರಯ್ಯಾ ಜನ ನೆರೆವರಯ್ಯಾ
2. ಉತ್ತರ ದಕ್ಷಿಣ ಪೂರ್ವ ಪಶ್ಚಿಮ ಹರನಾಜ್ಞೆಯಿಂದ ಬಂತು
ಜರಿಯಲು ಬೇಡ । ಅರಿದು ನೋಡುವುದು
3. ಪರಿಧಾವಿಯೆಂಬ ಕಟ್ಟಳೆಗೆ ಉಳಿದವರು ಬರುವರು
ಒಬ್ಬರುಳಿಯದ ಹಾಗೆ ನೆರೆದು ಕೂಡುವರು
ಧರೆಯ ಭಕ್ತರಿಗಿನ್ನು ಅರಿಕೆ ಮಾಡುತಲಿ
ಬರೆದಿಟ್ಟ ಪತ್ರಗಳು ಜರಿಯಲು ಬೇಡ

– ಮಡಿವಾಳ ಮಾಚಿದೇವರ ಕಾಲಜ್ಞಾನ

ಕಿರಣಗನ್ನಡಿ

ಮುಖ ಪುಟ: ಬಸವ ಕಲ್ಯಾಣದಲ್ಲಿ ನಿರ್ಮಾಣವಾಗಲಿರುವ 108 ಅಡಿ ಬಸವಣ್ಣನವರ ಪುತ್ಥಳಿಯ ಸಮಗ್ರ ಚಿತ್ರ

ಹೊದ್ದಿಕೆಯ ನಾಲ್ಕನೆಯ ಪುಟ: 24 ಅಡಿ ಎತ್ತರದ ಪೀಠದ ಮೇಲೆ ನಿರ್ಮಾಣವಾಗುತ್ತಿರುವ ಮೂರ್ತಿಯ ಬೆನ್ನು ಹುರಿಯಂತಿರುವ ಶಾಫ್ಟ್

KALYANA KIRANA-Reg No.19988/70. Monthly Magazine Edited And Published by Pujya Mate Kasturidevi on behalf of Vishwakalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10, Printed By Padmashree Printers, Rajajinagar, B'lore

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ :
ದೂರವಾಣಿ: 23325335/23131476

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿನಗರ, ಬೆಂಗಳೂರು-560010



॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಕೂಡಲ ಸಂಗಮ ಪುಣ್ಯಕ್ಷೇತ್ರದಲ್ಲಿ ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ಇಪ್ಪತ್ತೊಂದನೆಯ

ಶರಣ ಮೇಳ

2008ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಲಿಂಗಾಯತ (ಬಸವ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರ ಜನವರಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟ ಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಇಪ್ಪತ್ತೊಂದನೆಯ ಶರಣ ಮೇಳವು 2008ರ ಜನವರಿ 11, 12, 13, 14ಮತ್ತು 15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಲಿಂಗ ಪೂಜೆ, ಗಣಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10 ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. [ಐದು ದಿನ ಭಾಗವಹಿಸಲು ಆಗದೆ ಇದವರು ಸಮುದಾಯ ಪ್ರಾರ್ಥನೆಯಲ್ಲಿ ಭಾಗವಹಿಸುವುದು ಕಡ್ಡಾಯ ವಿಧಿಯಾಗಿರುತ್ತದೆ.] ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40, 30, 20 ಮತ್ತು 10 ದಿವಸಗಳ 'ಶರಣ ವ್ರತ'ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗ ಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತಿದೆ. ದಿ. 11 ಮತ್ತು 12 ರಂದು ಧರ್ಮ ಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ-ಧರ್ಮಗಳಿಗೆ ಸಂಬಂಧಪಟ್ಟಂತೆ ಮುಕ್ತ ಚರ್ಚೆಗೆ ಅವಕಾಶವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದು ಯಾರು ಬೇಕಾದರೂ ಚಿಂತನ ಗೋಷ್ಠಿಯಲ್ಲಿ ಪಾಲ್ಗೊಳ್ಳಬಹುದು.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೆ, ಹೊರರಾಜ್ಯಗಳಿಂದಲೂ ಶರಣ ವ್ರತಿಗಳು ಆಗಮಿಸುವರು. ಜನವರಿ

ದಿ.10ನೆಯ ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾಗ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 5000 ರೂ. ಮತ್ತು ಮೇಲೆ ಕೊಟ್ಟವರು 4. ಹಿತೈಷಿಗಳು : 500 ರೂ.
2. ಪೋಷಕರು : 2000 ರೂ. ಮತ್ತು ಮೇಲೆ ಕೊಟ್ಟವರು. 5. ಸ್ವಾಗತ ಸಮಿತಿ ಸದಸ್ಯತ್ವ: 250 ರೂ.
3. ದಾನಿಗಳು: 1000 ರೂ. ಮತ್ತು ಮೇಲೆ ಕೊಟ್ಟವರು. 6. ಪ್ರತಿನಿಧಿ ಶುಲ್ಕ : 150ರೂ.

ಅನ್ನ ದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ ಕಾಣಿಕೆಯನ್ನು ಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/ 10000 ರೂಪಾಯಿಗಳ ಪುದುವಟ್ಟು (ಊ.ಈ.)ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣ ಮೇಳದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ-ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು ''ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ''ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ. ತೆಗೆಸುವವರು ಕೇವಲ State Bank of India, Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು.) ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ.ಯನ್ನಾಗಲಿ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.ಈಗ ಆನ್ ಲೈನ್ ಬ್ಯಾಂಕಿಂಗ್ ಆಗಿರುವುದರಿಂದ ಯಾವುದೇ ಎಸ್.ಬಿ.ಐ ಶಾಖೆಯಿಂದ ತ್ವರಿತವಾಗಿ ಕಡಿಮೆ ಖರ್ಚಿನಲ್ಲಿ ಹಣ ವರ್ಗಾಯಿಸಬಹುದು. ಅಕೌಂಟ್ ನಂಬರ್ C and I /10818354684 ಹಣ ಕಟ್ಟಿದ ಬಳಿಕ ನಮಗೆ ತಿಳಿಸಬೇಕು. (ಬಸವ ಧರ್ಮ ಪೀಠ)

ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧಗಯೆ ಧರ್ಮಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಪ್ರತಿಯೊಬ್ಬ ಬಸವ ಧರ್ಮಾನುಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕೂಲತೆ ಇದ್ದರೂ ಒಮ್ಮೆಯಾದರೂ ಶರಣ ಮೇಳದ (ಜನವರಿ 14 ರಂದು ನಡೆಯುವ) ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಿ, ಗಣಲಿಂಗ ದರ್ಶನ ಪಡೆದು ತನ್ನ ಅನುಯಾಯಿತ್ವ-ವನ್ನು ಸ್ಥಿರೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾಗನು. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಶರಣರ ಬರುವೆಮಗೆ ಪ್ರಾಣ ಜೀವಾಳ

ಶರಣ ಮೇಳ ಉತ್ಸವ ಸಮಿತಿ (ರಿ.)
ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
ದೂ : 080-23325335/23131476



ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ,
ಕೂಡಲ ಸಂಗಮ-587115
ತಾ-ಹುನಗುಂದ, ಜಿ-ಬಾಗಲಕೋಟ
ದೂ : 08351-268014/268007/268338

1. ಶರಣ ಮೇಳ - ಬಸವ ಧರ್ಮದ ಆಶಾಕಿರಣ

ಯಾವುದೇ ಧರ್ಮದ ಭವಿತವ್ಯವು ಕೇವಲ ಸಮ್ಮೇಳನ, ಜಾತ್ರೆಗಳಲ್ಲಿ ಇಲ್ಲ. ಅಲ್ಲಿ ಖಚಿತವಾದ ತಾತ್ವಿಕ ಸಂಸ್ಕಾರವು ಸಿಗುವುದಿಲ್ಲ. ಶಬರಿ ಮಲೈಗೆ ಅಯ್ಯಪ್ಪ ಸ್ವಾಮಿ ಭಕ್ತರು ಹೋಗುತ್ತಾರೆ. ಅಲ್ಲಿ ಕೇವಲ ಭಕ್ತಿಯ ಆವೇಶ ಇರುವುದೇ ವಿನಾ ಜ್ಞಾನಾಧಾರಿತ ತರಬೇತಿ ಇರುವುದಿಲ್ಲ. ಮತ್ತು ಯಾವುದೇ ಧಾರ್ಮಿಕ, ಸಾಮಾಜಿಕ ಸಂಘಟನೆಗೂ ಸಹಕಾರಿಯಾಗದು.

ಮುಸಲೀಮರ ಹಜ್ ನಿಜಕ್ಕೂ ಒಂದು ಉತ್ತಮ ಪರಿಕಲ್ಪನೆ, ಮೆಕ್ಕಾದಲ್ಲಿ ಮಾಡುವ ಕೆಲವು ಆಚರಣೆಗಳು ಒಂದು ಬಗೆಯ ಮೂಢ ನಂಬಿಕೆ ಎನಿಸುವುದಾದರೂ, ಪ್ರತಿಯೊಬ್ಬ ಮುಸಲೀಮನು ತನ್ನ ಜೀವಮಾನದಲ್ಲಿ ಒಮ್ಮೆಯಾದರೂ ತಮ್ಮ ಧರ್ಮಕ್ಷೇತ್ರ ಮೆಕ್ಕಾದ ಸಂದರ್ಶನ ಮಾಡಬೇಕು ಎನ್ನುವುದು. ಅಲ್ಲಿ ಇಂತಿಷ್ಟು ಬಾರಿ ನಮಾಜಿನಲ್ಲಿ ಭಾಗಿಯಾಗಿ ತನ್ನ ವ್ರತವನ್ನು ಪೂರ್ಣಗೊಳಿಸಬೇಕು ಎಂಬುದು; ಇಸ್ಲಾಂ ತಾನು ಜನಿಸಿದ ದೇಶದಿಂದ ಹೊರಹೋಗಿ ಹಬ್ಬುವುದರಿಂದ ಭೂಮಿ ಮೇಲಿರುವ ಎಲ್ಲ ರಾಷ್ಟ್ರಗಳಲ್ಲಿನ ಮುಸಲೀಮರು ಒಂದೆಡೆ ಸೇರಬೇಕು ಹಜ್ ಮೂಲಕ ಎಂಬ, ಬಹಳಷ್ಟು ಹಿಂದೆಯೇ ಇಬ್ರಾಹಿಂ ಎಂಬ ಮಹಾತ್ಮ ಕಲ್ಪಿಸಿಕೊಂಡ ಪರಿಕಲ್ಪನೆ ನಿಜಕ್ಕೂ ಅಭಿನಂದನಾರ್ಹ.

ಜೊತೆಗೆ, ನಿರಂತರವಾಗಿ ತಮ್ಮ ಧರ್ಮದ ಸಂಪರ್ಕ ಮತ್ತು ಸಂಸ್ಕಾರದಲ್ಲಿ ಇರುವ ಮುಸಲೀಮರು ಹಜ್‌ಗೆ ಹೋಗುವ ಮುನ್ನ ವ್ರತಧಾರಿಗಳಾಗಿ ಕುರಾನ್ ಪಠಣ ಮಾಡುವುದು, ಜಪ ಕೈಗೊಳ್ಳುವುದು ಯಾರಾದರೂ ಮೆಚ್ಚಿಕೊಳ್ಳಬೇಕಾದ ಸಂಗತಿ. ಹಜ್ ಯಾತ್ರೆ, ಮೆಕ್ಕಾ ಸಂದರ್ಶನ ಕೇವಲ ಮುಸಲೀಮರಿಗೆ ಮಾತ್ರ ಲಭ್ಯವಿರುವುದರಿಂದ ಒಬ್ಬ ಕ್ರೈಸ್ತ ಧರ್ಮಾನುಯಾಯಿ ಬರಹಗಾರ ಇಸ್ಲಾಂ ದೀಕ್ಷೆ ಪಡೆದು ಹಜ್‌ಗೆ ಹೋಗಿ ಅಲ್ಲಿ ನಡೆಯುವ ಬೃಹತ್ ಸಮಾವೇಶ, ಸಹೋದರ ಭಾವ ಕಂಡು ಬೆರಗಾಗಿ ಜಗತ್ತಿನ ಒಂದು ಅದ್ಭುತ ಎಂದು ಉದ್ಗರಿಸಿ, ಪುನಃ ತನ್ನ ದೇಶಕ್ಕೆ ಬಂದು ಕ್ರೈಸ್ತ ಧರ್ಮಕ್ಕೆ ವಾಪಸ್ಸಾಗಿ ಹಜ್ ಬಗ್ಗೆ ಪುಸ್ತಕ ಬರೆದಿದ್ದಾನೆ. ಉಡುವ ಬಟ್ಟೆಯಲ್ಲಿ ಏಕರೂಪತೆ, ಲಕ್ಷಾಂತರ ಜನ ಸೇರಿ ಮಾಡುವ ನಮಾಜ್ ಹಜ್‌ನ ವಿಶೇಷ. ಹಜ್ ಬಗ್ಗೆ ಒಂದು ಪುಸ್ತಕ ಓದಿದಾಗಲೇ ನನಗೆ ಅಂಥ ಒಂದು ಬಸವ ಧರ್ಮೀಯರ ಸಮಾವೇಶ ನಡೆಸುವ ಬಗ್ಗೆ ಹಂಬಲ ಮೂಡಿತ್ತು. ಅದು ಕಾರ್ಯ ರೂಪಕ್ಕೆ ಬರಲು 1988ರ ವರೆಗೆ ಸಮಯ ತೆಗೆದುಕೊಂಡಿತು. ಈ ನಿರ್ಣಯಕ್ಕೆ ಪೋಷಕವಾದುದು ಪಂಢರಾಪುರದ ವಾರಕರಿ ಸಮಾವೇಶ. 1987ರಲ್ಲಿ ಬಾಗಲಕೋಟೆಯಲ್ಲಿ ಪ್ರವಚನ ಆದುದು ಕೂಡಲ ಸಂಗಮದಲ್ಲಿ ಜಾಗ ತೆಗೆದುಕೊಂಡದ್ದು ಶರಣ ಮೇಳದ ಪರಿಕಲ್ಪನೆಗೆ ಸ್ಪಷ್ಟ ರೂಪಕೊಟ್ಟಿತು. ಇದಕ್ಕೆ ಆದಿ ಶರಣರ ಸಂಕಲ್ಪವೂ ಇದೆ.

ದಕ್ಷಿಣದ ಕೃಷ್ಣೆಗೆ ಕರೆವರಯ್ಯ ಜನ ನೆರೆವರಯ್ಯ
ಎನ್ನುತ್ತದೆ ಮಡಿವಾಳ ಮಾಚಿದೇವರ ಕಾಲಜ್ಞಾನ ವಚನ.

ಬಸವ ಧರ್ಮದಲ್ಲಿ ಆಸಕ್ತಿಯುಳ್ಳವರು, ಶರಣ ಸಂಸ್ಕೃತಿಯನ್ನು ಬೆಳಸಿಕೊಳ್ಳಬೇಕು ಎನ್ನುವವರು ಶರಣ ಮೇಳದಲ್ಲಿ ಭಾಗಿಯಾಗುವುದು ತಮ್ಮ ಕರ್ತವ್ಯ ಎಂದು ಭಾವಿಸಬೇಕು. ಲಿಂಗಾಯತ ಸಮಾಜದಲ್ಲಿ ವಿಧಾಯಕ ಶಕ್ತಿಗಳಿಂಗಿಂತಲೂ ವಿಚ್ಛಿದ್ರಕಾರಿ ಶಕ್ತಿಗಳೇ ಹೆಚ್ಚು ಕೆಲಸ ಮಾಡುವುದರಿಂದ, ಸಮಷ್ಟಿ ಹಿತಕ್ಕಿಂತಲೂ ವೈಯಕ್ತಿಕ ರಾಗದ್ವೇಷ, ಮದ-ಮತ್ಸರಗಳೇ ಹೆಚ್ಚು ಕೆಲಸ ಮಾಡುವುದರಿಂದ, ಸಾಂಘಿಕವಾಗಿ ಬೆಳೆಯಬೇಕು ಎನ್ನುವವರಿಗಿಂತಲೂ ವೈಯಕ್ತಿಕವಾಗಿ ಬೆಳೆಯಬೇಕು ಎಂಬುವವರೇ ಹೆಚ್ಚಿಗೆ ಇರುವುದರಿಂದ ಈ ದೋಷ ಅಥವಾ ಕೊರತೆಯನ್ನು ಅರಿತು ನಾವು ಪರಿಹಾರ ಹುಡುಕಬೇಕಾಗಿದೆ.

ಕೇವಲ ಧರ್ಮಕ್ಕೆ ಮಾತ್ರವಲ್ಲ ಸಮಾಜಕ್ಕೆ ಸಂಕಷ್ಟಗಳು ಒದಗಿ ಬರುತ್ತವೆ. ಉದಾತ್ತ ಉದ್ದೇಶದಿಂದ ಆದಿ ಶರಣರು ಕೊಟ್ಟ ಕೆಲವು ಸಂಹಿತೆಗಳು ತುಂಬಾ ಚೆನ್ನಾಗಿದ್ದರೂ ಬದಲಾದ ಪರಿಸರಕ್ಕೆ ಅನುಗುಣವಾಗಿ ಕೆಲವು ಸುಧಾರಣೆಗಳು, ತಿದ್ದುಪಡಿಗಳು ಅಗತ್ಯವಿರುತ್ತವೆ. ಇವನ್ನು ಯಾರು ಮಾಡಬೇಕು? ಸಮಾಜದ ಧಾರ್ಮಿಕ ನಾಯಕರುಗಳಾದ ಮಠಾಧೀಶರು, ಜಂಗಮರು ಮಾಡಬೇಕು. ಆದರೆ ಅವರು ಈ ಬಗ್ಗೆ ಚಿಂತನೆಯನ್ನೇ ಮಾಡುವ ಲಕ್ಷಣ ಕಾಣುತ್ತಿಲ್ಲ. ಎಲ್ಲರೂ ತಮ್ಮ ತಮ್ಮ ಮಠಗಳ ಶ್ರೇಯೋಭಿವೃದ್ಧಿ, ಪ್ರಗತಿ, ಆರ್ಥಿಕ ಬಲವೃದ್ಧಿ, ಕೀರ್ತಿ ಸಂಪಾದನೆಯಲ್ಲಿ ನಿರತರೇ ವಿನಾ ಇಡೀ ಸಮಾಜ ಎತ್ತ ಸಾಗಿದೆ ಎಂಬ ಬಗ್ಗೆ ಸಂಕಟವನ್ನೇ ಪಡುತ್ತಿಲ್ಲ. ಆದ್ದರಿಂದ ಜನರೇ ತಮ್ಮ ಧಾರ್ಮಿಕ

ಹಿತಕ್ಕಾಗಿ ಚಿಂತನೆ ಮಾಡಬೇಕಾಗಿದೆ; ಸಂಘಟಿತರಾಗಬೇಕಾಗಿದೆ. ಕ್ರೈಸ್ತ ಸಮಾಜದಲ್ಲಿ ಬಿಷಪ್, ಪಾದ್ರಿಗಳು ಮುಸ್ಲಿಂ ಸಮಾಜದಲ್ಲಿ ಮುಲ್ಲಾ, ಇಮಾಂಗಳು ಸದಾ ಜಾಗೃತರಾಗಿ, ಅತ್ಯಂತ ಹೊಣೆಗಾರಿಕೆಯಿಂದ ಕಾರ್ಯ ಮಾಡುತ್ತಾರೆ. ಈ ದಿಶೆಯಲ್ಲಿ ಸಿಖ್ ಸಮಾಜ ಅತ್ಯಂತ ಜಾಗೃತ ಮತ್ತು ಸಂಘಟಿತ ಸಮಾಜವಾಗಿ ತೋರಿ ಬರುತ್ತದೆ. ಮತ್ತು ಜನರು ಸ್ವಾಭಾವಿಕವಾಗಿ ಶ್ರದ್ಧಾಳುಗಳಾಗಿದ್ದಾರೆ, ಧರ್ಮ ನಿಷ್ಠರಾಗಿದ್ದಾರೆ, ಅಷ್ಟೇ ಸಹೃದಯರಾಗಿದ್ದಾರೆ.

ಒಮ್ಮೆ ನಾವು ಮಹಾರಾಷ್ಟ್ರದಲ್ಲಿ ಹೆದ್ದಾರಿ ಮೇಲೆ ಬರುತ್ತಿದ್ದೆವು. ರಾತ್ರಿ 12 ದಾಟಿತ್ತು ವಾಹನ ಕೆಟ್ಟಿತು. ಹೆದ್ದಾರಿ ಪಕ್ಕದಲ್ಲಿ ಒಂದು ಜೈನ ಮಂದಿರ ಮತ್ತು ವಸತಿ ಗೃಹವಿತ್ತು. ಹೋಗಿ ವಿಚಾರಿಸಿದರೆ ಆ ಪಂಥದ ಜೈನರಲ್ಲದವರಿಗೆ ಕೊಡುವುದಿಲ್ಲ ಎಂದು ಹೇಳಿದರು. (ಎಲ್ಲರೂ ಹಾಗೆ ಮಾಡರು. ಅಲ್ಲಮ ಗಿರಿಯ ಅಡಿಯಲ್ಲಿ ಒಂದು ಬಹುದೊಡ್ಡ ಜೈನ್ ಆಶ್ರಮವಿದೆ. ಅವರು ಸಂತೋಷದಿಂದ ಬೇರೆಯವರಿಗೂ ಕೊಡುತ್ತಾರೆ.) ಆದರೆ ಸಿಖ್ಖರು ಹಾಗಲ್ಲ. ಎಲ್ಲ ಜನರಿಗೂ ಕೊಡುವುದಲ್ಲದೆ ವಾಸ್ತವ್ಯ ಮಾಡಿದವರಿಗೆ ಬಹಳ ಉಪಚಾರ ಮಾಡುತ್ತಾರೆ. ದೊಡ್ಡ ದೊಡ್ಡ ಶ್ರೀಮಂತರು ಬಂದು ದಿನದ ಕೆಲವು ಸಮಯ ನಿಂತು ಸೇವಾಕಾರ್ಯ ಮಾಡುತ್ತಾರೆ. ಲಿಂಗಾಯತರು ಮಾತ್ರ ಬಹುಪಾಲು ಜನ ಅವರ ಸೇವೆಯನ್ನು ಇತರರು ಮಾಡಬೇಕೆಂದು ನಿರೀಕ್ಷಿಸುತ್ತಾರೆ. ಇದು ಶರಣ ಮೇಳ, (ದೆಹಲಿ) ಸಮ್ಮೇಳನ ಮಾಡುವ ನಮಗೆ ಅನುಭವಕ್ಕೆ ಬಂದಿದೆ. ವಚನ ಸಾಹಿತ್ಯ ಓದಿ ಬರೀ ಬೌದ್ಧಿಕ ಪಟುತ್ವ ಬೆಳೆದರೆ ಸಾಲದು ಅದು ಕಲಿಸುವ ಸದ್ಭಾವ, ದಾಸೋಹ ಪ್ರಜ್ಞೆ ಸಹ ಬೆಳೆಯಬೇಕಾಗಿದೆ.

ನಿನ್ನೆ ಬೆಂಗಳೂರಿನಲ್ಲಿ ಒಬ್ಬ ಲಿಂಗಾಯತರ ಮನೆಯ ಗೃಹ ಪ್ರವೇಶವಿತ್ತು. ನಮ್ಮ ಸಂಸ್ಥೆಯ ಜಂಗಮ ಮೂರ್ತಿ ಪೂಜ್ಯ ಮಾತೆ ಜ್ಞಾನೇಶ್ವರಿ ಹೋಗಿದ್ದರು. ಬಾಗಿಲ ಮುಂದೆ ಕುಂಬಳಕಾಯಿ ಒಡೆಯಲಿಕ್ಕೆ ಸಿದ್ಧ ಮಾಡಿಟ್ಟದ್ದೇ ಅಲ್ಲದೆ ಗೋ ಮೂತ್ರ ತಂದಿದ್ದೀರಾ ಎಂದು ಮನೆ ಮಾಲಿಕರು ಕೇಳಿದರಂತೆ. ಏಕೆ ಎಂದಾಗ, "ಹಿಂದೆ ನಮ್ಮ ಇನ್ನೊಬ್ಬರ ಮನೆ ಪ್ರವೇಶಕ್ಕೆ ಒಬ್ಬರು ಸ್ವಾಮಿಗಳನ್ನು ಕರೆಸಿದ್ದರು. ಅವರು ಬರುವಾಗ ತಾವೇ ಗೋ ಮೂತ್ರ ತಂದು ಮನೆಗೆಲ್ಲ ಸಿಂಪಡಿಸಿ ಮನೆಯನ್ನು ಶುದ್ಧಿ ಮಾಡಿದರು ಎಂದರಂತೆ. ಆಗ ಮಾತೆ ಜ್ಞಾನೇಶ್ವರಿಯವರು, ಅದೆಲ್ಲ ಹಾಕಬಾರದು. ಗುರು -ಲಿಂಗ -ಜಂಗಮ ನಮ್ಮ ಪೂಜಾ ವಸ್ತುಗಳು; ಇವುಗಳ ಕರುಣೋದಕ ಹಾಕಿ ನಾವು ದೈವೀಕರಿಸುತ್ತೇವೆ. ಕುಂಬಳಕಾಯಿ ಒಡೆದು ಬಾಗಿಲ ಮುಂದೆ ಚೆಲ್ಲಬೇಡಿರಿ. ಅದನ್ನು ಆಶೀರ್ವದಿಸಿ ಕೊಡುತ್ತೇನೆ. ನಂತರ ಪ್ರಸಾದಕ್ಕೆ ಬಳಸಿಕೊಳ್ಳಿರಿ ಎಂದು ಪ್ರವಚನ ಮಾಡಿದ ಮೇಲೆ ಅವರು ಸಂತೋಷ ಪಟ್ಟು, "ನಮಗೆ ಯಾರೂ ಹೇಳಿರಲಿಲ್ಲ" ಎಂದರಂತೆ. ನಮ್ಮ ಕೆಲವು ಸ್ವಾಮಿಗಳಿಗೆ ಗುರು -ಬಸವಣ್ಣ, ಇಷ್ಟಲಿಂಗ, ಜಂಗಮಕ್ಕಿಂತಲೂ ಹಸುವಿನಂತಹ ಪ್ರಾಣಿಯ ಮೂತ್ರವೇ ಘನವಾಯಿತಲ್ಲ, ಈ ಅಜ್ಞಾನಕ್ಕೆ ಏನೆನ್ನಬೇಕು ?!

ಈ ಎಲ್ಲ ದೃಷ್ಟಿಯಿಂದ ಇಂದು ಧರ್ಮಾಸಕ್ತರು ಗಂಭೀರವಾಗಿ ಚಿಂತನೆ ಮಾಡಬೇಕಾಗಿದೆ. ಕೇಂದ್ರ ಸಂಸ್ಥೆಯಾದ ಬಸವ ಧರ್ಮ ಪೀಠ, ವಿಶ್ವಕಲ್ಯಾಣ ಮಿಷನ್‌ಗಳ ನಿರಂತರ ಸಂಪರ್ಕದಲ್ಲಿ ಇರುವುದೇ ಅಲ್ಲದೆ ತಪ್ಪದೆ ಶರಣ ಮೇಳ, ಕಲ್ಯಾಣ ಪರ್ವಗಳಿಗೆ ಬರುತ್ತಿರಬೇಕು. ಸಾಧ್ಯವಾದಷ್ಟು ದಿ.11ರ ಚಿಂತನ ಗೋಷ್ಠಿಗಳನ್ನು ತಪ್ಪಿಸಬಾರದು ಎಂಬ ಪ್ರಜ್ಞೆ ಮೂಡಬೇಕಾಗಿದೆ. ಕಾರಣಾಂತರಗಳಿಂದ ಸಂಸ್ಥೆಯನ್ನು ತ್ಯಜಿಸಿ ಹೋದವರು ತಮ್ಮ ಹಿತಾಸಕ್ತಿಯ ಸಲುವಾಗಿ ಏನೇ ಹೇಳಿ ಮನಸ್ಸು ಕೆಡಿಸುತ್ತಲಿರಲಿ, ತಮ್ಮ ಪಾಡಿಗೆ ತಾವು ಶರಣ ಬಂಧುಗಳು ಶರಣ ಮೇಳ, ಕಲ್ಯಾಣ ಪರ್ವಗಳಲ್ಲಿ ಭಾಗಿಗಳಾಗಬೇಕು. ಮನಸ್ಸು ವಿಚಲಿತಗೊಳಿಸಿಕೊಂಡ ಅರೆ ಭಕ್ತರಿಗೆ ಕಾಣಿಕೆ ಕೊಡಲು ಮನಸ್ಸು ಇರಲಿಕ್ಕಿಲ್ಲ, ನಮಗೆ ಕಾಣಿಸಿ ಕೊಳ್ಳಲಿಕ್ಕೆ ಇಷ್ಟವಿರಲಿಕ್ಕಿಲ್ಲ; ಚಿಂತೆಯಿಲ್ಲ, ನಿರಂತರವಾಗಿ ಹರಿಯುವ ಶರಣ ಮೇಳದ ಜ್ಞಾನ ತರಂಗಿಣಿಯಲ್ಲಿನ ಜ್ಞಾನವನ್ನು ತಮ್ಮ ಮತಿಯ ಪಾತ್ರೆಗೆ ತುಂಬಿಕೊಂಡು ಹೋಗಲು ಏಕೆ ಹಿಂಜರಿಯಬೇಕು? ಏಕೆಂದರೆ ಶರಣ ಮೇಳ ಬಸವ ಧರ್ಮದ ಏಕೈಕ ಆಶಾ ಕಿರಣ! ಅದು ಶರಣರಿಂದ ಶರಣರಿಗಾಗಿ ಶರಣರದು!!

2. ಕರ್ನಾಟಕದ ರಾಜಕೀಯ ನಾಟಕ

ನಿಮಿಷದ ನಿಮಿಷಂ ಬೋ ಕ್ಷಣದೊಳಗರ್ಧಂ ಬೋ
ಕಣ್ಣುಮುಚ್ಚಿ ಬಿಚ್ಚುವೈಸು ಬೇಗಂ ಬೋ
ಸಂಸಾರದಾಗುಂ ಬೋ! ಸಂಸಾರದೋಗುಂ ಬೋ
ಸಂಸಾರದೊಪ್ಪಂ ಬೋ! ಲಿಂಗದೇವಾ,
ನೀ ಮಾಡಿದ ಮಾಯಂ ಬೋ ಅಭ್ರಚ್ಛಾಯಂ ಬೋ - ಬ.ವ.ದೀ. 170

ಈ ನಿಮಿಷದ್ದು ಇನ್ನೊಂದು ನಿಮಿಷಕ್ಕೆ ಇರದು, ಒಂದು ಕ್ಷಣದಲ್ಲಿ, ಅರ್ಧ ಕ್ಷಣದಲ್ಲಿ ಸಹ ಬದಲಾಗಬಹುದು, ಅಷ್ಟೇ ಏಕೆ ಕಣ್ಣಿನ ರೆಪ್ಪೆ ಮುಚ್ಚಿ ತೆಗೆಯುವಷ್ಟರಲ್ಲಿ ಬದಲಾಗಬಹುದು. ಸಂಸಾರ ಅಷ್ಟು ಕ್ಷಣಿಕ ಎನ್ನುತ್ತಾರೆ ಧರ್ಮಪಿತ ಬಸವಣ್ಣನವರು. ಸಂಸಾರ ಎನ್ನುವ ಜಾಗದಲ್ಲಿ ರಾಜಕೀಯ ಎಂದು ಬರೆದರೆ ಸೂಕ್ತವಾದೀತೇನೊ ! ಇನ್ನೂ ಅರ್ಥವತ್ತಾಗಬೇಕಾದರೆ ಶ್ರೀ ದೇವೇಗೌಡರ ರಾಜಕೀಯ ಮಾಯೆ, ಚಲಿಸುವ ಮೋಡದ ನೆರಳಿನಂತೆ ಎನ್ನಬಹುದು.

ಆಡಿದ ಮಾತು, ಕೊಟ್ಟ ಭಾಷೆ, ಅಧಿಕೃತವಾಗಿ ರಾಜ್ಯಪಾಲರಿಗೆ ಸಲ್ಲಿಸಿದ ಪ್ರಮಾಣ ಪತ್ರ, ರಾಷ್ಟ್ರಪತಿಗಳ ಮುಂದೆ ಪ್ರದರ್ಶಿಸಿದ ಶಾಸಕರ ಪ್ರದರ್ಶನ - ಯಾವುದಕ್ಕೂ ಕಾಸಿನ ಬೆಲೆಯೂ ಇಲ್ಲವಾಯಿತು. ಪತ್ರಿಕೆಗಳಲ್ಲಿ ಬರುವ ರಾಜಕೀಯ ಚದುರಂಗದಾಟ, ಟಿ.ವಿ. ಸಂದರ್ಶಗಳು ಜನರಿಗೆ ಮನರಂಜನೆ ನೀಡಿದವು ಎಂದು ಒಂದು ಪತ್ರಿಕೆ ಬರೆದಿತ್ತು. ಮನರಂಜನೆಯಲ್ಲ ಮನೋವೇದನೆ ನೀಡಿದವು. ಅತಿವೃಷ್ಟಿಯಿಂದ, ಪ್ರವಾಹದಿಂದ ಸಂಕಷ್ಟಕ್ಕೊಳಗಾಗಿ ಉತ್ತರ ಕರ್ನಾಟಕ ಅನೇಕ ಊರುಗಳವರು ಬೀದಿಗೆ ಬಿದ್ದಿದ್ದಾರೆ, ನಿರ್ವಸಿತರಾಗಿದ್ದಾರೆ. ಅವರ ಆಕ್ರಂದನ ಶ್ರೀ ದೇವೇಗೌಡರ ಕಿವಿಗೆ ಕೇಳಲಿಲ್ಲ, ಕಣ್ಣಿಗೆ ಬೀಳಲಿಲ್ಲ, ಹೃದಯ ತಟ್ಟಲಿಲ್ಲ. ಮಕ್ಕಳಿಗೆ ಅಧಿಕಾರ ಸಿಗಬೇಕೆಂಬ ಏಕೈಕ ಆಕಾಂಕ್ಷೆಯಿಂದ ಸರ್ಕಾರ ರಚನೆಯಾಗದೆ ರಾಷ್ಟ್ರಪತಿ ಆಳಿಕೆ ಬರುವಂತೆ ಮಾಡಿದರು. ಚುನಾಯಿತ ಸರ್ಕಾರ, ಮಂತ್ರಿ ಮಂಡಳ ಇದ್ದರೆ ಜನ ಹೇಗಾದರೂ ಕೆಲಸ ಮಾಡಿಸಿಕೊಳ್ಳಬಹುದು. ವಿಧಾನ ಸಭೆಯಲ್ಲಿ ಚರ್ಚಿಸಬಹುದು. ಈಗ ಯಾವುದಕ್ಕೂ ಅವಕಾಶವಿಲ್ಲದಂತಾಯಿತು. ಅಧಿಕಾರಿಗಳಲ್ಲಿ ಕಳಕಳಿ ಇರುವುದಿಲ್ಲ. ಹೆಚ್ಚಿನ ಜನ ಅವರ ಸಂಪಾದನೆಯಲ್ಲೇ ಅವರು ಆಸಕ್ತರಾಗಿ ಇರುತ್ತಾರೆ. ಹೀಗಾಗಿ ಜನರ ಸಂಕಷ್ಟವನ್ನು ಕೇಳುವವರಾರು ?

ಎಲ್ಲ ಪಕ್ಷಗಳವರು ಪರಸ್ಪರ ಬೈದಾಡುವುದನ್ನು ನೋಡಿದಾಗ. ಅಸಹ್ಯವೆನಿಸುತ್ತದೆ. ರಾಜಕೀಯದಲ್ಲಿ ಕನಿಷ್ಟ ಮಟ್ಟದ ನೀತಿ, ನಿಯತ್ತು ಇಲ್ಲವಲ್ಲ ಎದು ಪ್ರಾಜ್ಞರಿಗೆ ವಿಷಾದವೆನಿಸುತ್ತದೆ. ಈಸೋಪನ ಕಥೆಯಲ್ಲಿ ಬರುವಂತೆ, ನರಿಯು ಕಬ್ಬು ತಿಂದು ಹೊಟ್ಟೆ ತುಂಬಿದ ತಕ್ಷಣ ಬೊಬ್ಬಿಟ್ಟು ಇನ್ನೂ ತಿನ್ನುತ್ತಿದ್ದ ಒಂಟೆಗೆ ತೊಂದರೆ ಕೊಟ್ಟು ಮಿತ್ರ ದ್ರೋಹ ಮಾಡಿದಂತೆ ಶ್ರೀ ಕುಮಾರಸ್ವಾಮಿಯವರು ವಚನ ಕೊಟ್ಟಂತೆ ಶ್ರೀ ಯಡೆಯೂರಪ್ಪನವರಿಗೆ ಮುಖ್ಯಮಂತ್ರಿ ಅಧಿಕಾರ ಹಸ್ತಾಂತರಿಸದೆ ತಮ್ಮ ಅವಧಿ ಮುಗಿಯುತ್ತಿದ್ದಂತೆಯೇ ಬೊಬ್ಬೆ ಇಡತೊಡಗಿದರು. ಪುನಃ ತಾವಾಗಿಯೇ ಕರೆದು ಸರ್ಕಾರ ರಚಿಸಲು ಬೆಂಬಲಿಸುವುದಾಗಿ ಹೇಳಿದರು. ಇಲ್ಲಿ ರಾಜ್ಯಪಾಲರಿಗೆ ಪತ್ರ ಕೊಡುತ್ತಲೇ ಅತ್ತ ಎಂ. ಪಿ. ಪ್ರಕಾಶರನ್ನು ಕಳಿಸಿ ಕಾಂಗ್ರೆಸ್ ಸಖ್ಯಕ್ಕೆ ಪ್ರಯತ್ನಿಸಿದರು. ಧರ್ಮಪಿತರ ಒಂದು ವಚನ ಎಷ್ಟು ಚೆನ್ನಾಗಿ ಅನ್ವಯವಾಗುತ್ತದೆ ನೋಡಿರಿ.

ಅವಳ(ನ) ವಚನ ಬೆಲ್ಲದಂತೆ ಹೃದಯದಲ್ಲಿಪ್ಪುದು ನಂಜು ಕಂಡಯ್ಯ !
ಕಂಗಳಲ್ಲೊಬ್ಬನ ಕರೆವಳು (ರು), ಮನದಲ್ಲೊಬ್ಬನ ನೆನೆವಳು (ರು)
ಲಿಂಗದೇವ ಕೇಳಯ್ಯಾ,
ಮಾನಸಗಳ್ಳೆಯ (ಳ್ಳರ) ನಂಬದಿರಯ್ಯಾ !

ಹೇಗಿದ್ದರೂ ಒಮ್ಮೆ ನಿರಾಕರಿಸಿದ್ದರು, ಪುನಃ ಸಖ್ಯ ಬೆಳೆಸುವ ಅಗತ್ಯವೇನಿತು ? ನಿಜಕ್ಕೂ ಈ ರಾಜಕೀಯ ಪ್ರಹಸನ ಎಲ್ಲರಿಗೂ ಅಸಹ್ಯ ತರಿಸಿದೆ.

ಇಂದಿನ (30-11-2007) ಪತ್ರಿಕೆಗಳಲ್ಲಿ, ಲಿಂಗಾಯತ ಮಠಾಧೀಶರು ರಾಜಕೀಯದಲ್ಲಿ ಹಸ್ತಕ್ಷೇಪ ಮಾಡಬಾರದಾಗಿ ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾತ್ತು ಶ್ರೀ ಕುಮಾರಸ್ವಾಮಿಯವರು ತಮ್ಮ ತಮ್ಮ ಪಕ್ಷದ ಸಭೆಗಳಲ್ಲಿ ಹೇಳಿದರೆಂದು, ಶ್ರೀ ಕುಮಾರ ಸ್ವಾಮಿಯವರು, ಪೂಜ್ಯ ಸಿದ್ದಗಂಗಾ ಸ್ವಾಮಿಗಳ ಹೆಸರನ್ನು ಪ್ರಸ್ತಾಪಿಸಿದ್ದಾರೆ. ರಾಜಕಾರಣಿಗಳು ಏನೇ ಅನ್ಯಾಯ, ಅಕ್ರಮ ಮಾಡಿದರೂ ಅದನ್ನು ಎತ್ತಿ ತೋರಿಸದೆ ಮೌನವಾಗಿ ಸಹಿಸಿಕೊಂಡಿರಬೇಕೆಂಬುದು ಅವರ ಆಶಯವೇನೋ. ಅಕ್ಟೋಬರ್, ನವೆಂಬರ್ ತಿಂಗಳಲ್ಲಿ ನಡೆದ ರಾಜಕೀಯ ಡೊಂಬರಾಟ ನೋಡಿ ಜನರು ಧರ್ಮ, ಜಾತಿ, ಪಕ್ಷ ಭೇದವಿಲ್ಲದೆ ಅಸಹ್ಯ ಪಟ್ಟುಕೊಂಡಿರುವುದನ್ನು ಕಾಣಬಹುದು ಇನ್ನಾದರೂ ಶ್ರೀ ದೇವೇಗೌಡರು ನಿಯತ್ತಿನ ರಾಜಕಾರಣ ನಡೆಸುವರೇನೋ ಕಾದು ನೋಡಬೇಕು. ಮುಂದೆ ಏನೇ ಆಗಲಿ, ಇಡೀ ಭಾರತದ ತುಂಬ ವಿಧಾಯಕ ರೀತಿಯಲ್ಲಿ ಕರ್ನಾಟಕದ ಹೆಸರು ಪ್ರಚಾರವಾಗದೆ ವಿಡಂಬನಾತ್ಮಕ ರೀತಿಯಲ್ಲಿ (ಅಪ) ಪ್ರಚಾರ ಪಡೆಯುವಂತಾದುದು ಶ್ರೀ ದೇವೇಗೌಡರು, ಶ್ರೀ ಕುಮಾರಸ್ವಾಮಿ, ಶ್ರೀ ರೇವಣ್ಣನವರ ಕುಹಕ ಕಾರ್ಯತಂತ್ರದ ಶೈಲಿಯಿಂದ ಎಂಬುದು ಕನ್ನಡಿಗರೆಲ್ಲರಿಗೆ ನೋವಿನ ಸಂಗತಿ !

3. ಶ್ರೀ ಕೃಷ್ಣ ಪೂಜೆಯ ಅನರ್ಹತೆ
ಗೊಡ್ಡು ಸಂಪ್ರದಾಯಕ್ಕೆ ಪೂರ್ಣ ವಿರಾಮ ಅಗತ್ಯ

ಉಡುಪಿಯ ಮಾಧ್ವ ಸಂಪ್ರದಾಯದ ಶ್ರೀ ಕೃಷ್ಣ ದೇವಾಲಯದಲ್ಲ ಪೂಜೆಗಾಗಿ 2 ವರ್ಷಗಳಿಗೆ ಒಮ್ಮೆ ಪರ್ಯಾಯ ವ್ಯವಸ್ಥೆ ಇದ್ದು. ಅಷ್ಟ ಮಠಗಳವರು ಸರತಿಯ ಮೇಲೆ ಪೀಠಾರೋಹಣ ಮಾಡುತ್ತಾರೆ, 16 ವರ್ಷಗಳಿಗೆ ಒಮ್ಮೆ ಒಬ್ಬರಿಗೆ ಅವಕಾಶ ದೊರೆಯುತ್ತದೆ. ಇದೇ ಜನವರಿ 18 ರಂದು ಅಷ್ಟ ಮಠಗಳಲ್ಲಿ ಒಂದಾದ ಪುತ್ತಿಗೆ ಮಠದ ಶ್ರೀ ಸುಗುಣೇಂದ್ರ ತೀರ್ಥರ ಸರತಿ ಬರುತ್ತಿದೆ. ಎರಡು ವರ್ಷಗಳ ಮೊದಲೇ ಪರ್ಯಾಯ ಪೀಠಾರೋಹಣಕ್ಕೆ ನಿಶ್ಚಯಿಸಲ್ಪಟ್ಟ ಅವರು ವ್ಯಾಪಕ ಸಂಚಾರ ಮಾಡಿ ಅದಕ್ಕೆ ಸಿದ್ಧತೆ ಸಹ ಮಾಡಿಕೊಂಡಿದ್ದಾರೆ.

ಈ ಬಗ್ಗೆ ಒಂದು ವಿವಾದವೆದ್ದಿದ್ದು; ಮಾಧ್ವ ಸಂಪ್ರದಾಯದ ಪ್ರಕಾರ ಸಮುದ್ರೋಲ್ಲಂಘನ ಮಾಡಬಾರದಂತೆ; ಹಾಗೆ ಮಾಡಿ ವಿದೇಶಕ್ಕೆ ಹೋಗಿ ಬಂದಿರುವ ಕಾರಣ ಶ್ರೀ ಸುಗುಣೇಂದ್ರ ತೀರ್ಥರು ಶ್ರೀ ಕೃಷ್ಣ ಪೂಜೆಗೆ ಅರ್ಹರಲ್ಲ ಎಂದು ಶ್ರೀ ಪೇಜಾವರ ಮಠಾಧೀಶರ ನೇತೃತ್ವದಲ್ಲಿ ಕೆಲವರು ಆಕ್ಷೇಪವೆತ್ತಿದ್ದಾರೆ. ಈ ಬಗ್ಗೆ ಪ್ರತಿ ನಿತ್ಯವೂ ಪತ್ರಿಕೆಗಳಲ್ಲಿ ಚರ್ಚೆ ನಡೆಯುತ್ತಿದೆ.

ಮಾಧ್ವ ಸಂಪ್ರದಾಯದವರ ನಂಬಿಕೆ ಎಷ್ಟು ಹಾಸ್ಯಾಸ್ಪದ ಮತ್ತು ಬಾಲಿಶ. ಅಷ್ಟ ಮಠಾಧೀಶರ ಪೈಕಿ ಪ್ರಗತಿ ಪರರೆಂದು ಭಾವಿಸಿದ್ದ, ದಲಿತರ ಕೇರಿಗಳಿಗೆ ಹೋಗಿ ಬಂದು (ನಂತರ ಸ್ನಾನ ಮಾಡಿ) ಕ್ರಾಂತಿಕಾರಿಗಳೆನಿಸಿದ್ದ ಪೇಜಾವರ ಮಠಾಧೀಶರು ಇದೇ ಸಂಕುಚಿತ ವಿಚಾರದ ದಾಟಿಯಲ್ಲಿ ಸಾಗಿರುವುದು ಅಚ್ಚರಿಯನ್ನು ಉಂಟು ಮಾಡುತ್ತದೆ. ವಿದೇಶಿ ಧರ್ಮಗಳಾದ ಇಸ್ಲಾಂ, ಕ್ರೈಸ್ತಗಳ ಅನುಯಾಯಿಗಳು ಪೈಪೋಟಿಯ ಮೇಲೆ ಇತರರನ್ನೂ ತಮ್ಮ ಧರ್ಮಗಳಿಗೆ ಸೆಳೆದುಕೊಳ್ಳಲು ಸ್ಪರ್ಧೆ ನಡೆಸುತ್ತಿರುವಾಗ ಮಾಧ್ವ ಮಠಗಳವರು ಇಷ್ಟು ಸೀಮಿತವಾಗಿ ಆಲೋಚಿಸುವುದು ಆಶ್ಚರ್ಯಕರ. ವಿದೇಶಕ್ಕೆ ಹೋದರೇನಂತೆ ತನ್ನ ಆಚಾರ - ವಿಚಾರಗಳ ಶುದ್ಧಿಯನ್ನು ಕಾಪಾಡಿಕೊಂಡು ಧರ್ಮ ಪ್ರಚಾರ ಮಾಡುವುದು ಅಭಿನಂದನಾರ್ಹವಲ್ಲವೇ ? ಇವರುಗಳು ಪ್ರಾಣದೇವರು ಎಂದು ಪೂಜಿಸುವ ಆಂಜನೇಯ ಭಾರತ ಮತ್ತು ಶ್ರೀಲಂಕಾದ ಮಧ್ಯದ ಸಮುದ್ರವನ್ನು ಈಜಿ ದಾಟಲಿಲ್ಲವೆ ? ಸ್ವತಃ ಶ್ರೀರಾಮನು ರಾವಣನನ್ನು ವಧಿಸಿ ಸೀತೆಯನ್ನು ಬಿಡಿಸಿಕೊಂಡು ಬರಲು ಸಮುದ್ರವನ್ನು ದಾಟಲಿಲ್ಲವೆ ? ಸಮುದ್ರ ದಾಟಿ ಅಮೆರಿಕಾ ಪ್ರವಾಸವನ್ನು ಅದೂ ಮೋಜು ಮಜಕ್ಕಾಗಿ ಮಾಡದೆ ತಮ್ಮ ಧಾರ್ಮಿಕ ಪ್ರಚಾರಕ್ಕಾಗಿ ಮಾಡಿದ ಪುತ್ತಿಗೆ ಶ್ರೀಗಳು ಶ್ರೀ ಕೃಷ್ಣ ಪೂಜೆಗೆ ಅರ್ಹರಲ್ಲ ಎಂಬ ಅಭಿಪ್ರಾಯ ಅಜ್ಞಾನಯುಕ್ತವಾದುದು.

ಹಿಂದೆ ಶಾಸ್ತ್ರಗಳನ್ನೂ ರಚಿಸುವಾಗ ಗುರುಗಳ ಮಠಾಧೀಶರ ಸಂಚಾರ ಅತ್ಯಂತ ಸೀಮಿತವಾಗಿತ್ತು. ಈಗ ಇಡೀ ಭೂಮಿಯೇ ಸಂಕುಚಿತಗೊಂಡಿದೆ. ಧಾರ್ಮಿಕ ಸಂದೇಶಗಳು ಮಾನವ ಕುಲಕೋಟಿಗೆ ಅಗತ್ಯವಾಗಿರುವಾಗ ಇಂಥ ಗೊಡ್ಡು ಸಂಪ್ರದಾಯಗಳನ್ನು ಪಾಲಿಸುವುದು ಸೂಕ್ತವಲ್ಲ. ಕೇವಲ ವಿದೇಶ ಪ್ರವಾಸದಿಂದ ಯಾರೂ ಅಪವಿತ್ರರಾಗುವುದಿಲ್ಲ. ಪೂಜ್ಯ ಪುತ್ತಿಗೆ ಶ್ರೀಗಳು ಧೈರ್ಯವಾಗಿ ಪರ್ಯಾಯ ಪೀಠಾರೋಹಣ ಮಾಡಲಿ, ಪೂಜಾ ಕೈಂಕರ್ಯಗಳನ್ನು ನೆರವೇರಿಸಲಿ; ಇದಕ್ಕೆ ಎಲ್ಲ ವಿಚಾರ ಶೀಲರ ಬೆಂಬಲವಿದೆ.

4. ತಿದ್ದುಪಡಿಗಳು - ಸುಧಾರಣೆಗಳು

ಕೆಂಪು ಬಣ್ಣದ ಕುಂಕುಮವು ರಕ್ತ ಲಾಂಛನವೆಂದು, ಶಕ್ತಿ ದೇವತೆಯ ಕುರುಹೆಂದು ಲಿಂಗಾಯತ ಧರ್ಮದ ಸಂವಿಧಾನವಾದ ವಚನ ಸಾಹಿತ್ಯವು ಕುಂಕುಮಧಾರಣೆಯನ್ನು ನಿಷೇಧಿಸಿದೆ. ಅದೇ ರೀತಿ ಹಸಿರು ಬಣ್ಣದ ಹಚ್ಚೆ ಚುಚ್ಚಿಸಿಕೊಳ್ಳುವುದನ್ನೂ ನಿಷೇಧಿಸಿರುವುದಲ್ಲದೆ, ಪರಮ ಪಾವನವಾದ ಶಿವನ ಚಿದ್ಬೆಳಗಾದ ವಿಭೂತಿಯ ಮೇಲೆ ರಕ್ತ ಲಾಂಛನವಾದ ಕುಂಕುಮವನ್ನು ಇಡುವುದು ಅಪರಾಧವೆಂದು ಹೇಳುತ್ತದೆ. ಈ ಮಾತನ್ನು ಹೇಳಿದಾಗ ವಚನ ಸಾಹಿತ್ಯ ನಿಷ್ಠರಾದ ಶರಣರು ಒಪ್ಪಿಕೊಂಡು ಪಾಲಿಸುತ್ತಾರೆ.

ಆದರೆ ಬಹುಪಾಲು ಮಹಿಳೆಯರು ಕುಂಕುಮಧಾರಣೆ ಬಿಡಲು ನಿರಾಕರಿಸುತ್ತಾರೆ. ಬರಿ ಹಣೆಯಲ್ಲಿರುವುದು ಅಮಂಗಲ ಎಂದು ಭಾವಿಸುತ್ತಾರೆ. ಏಕದೇವೋಪಾಸನೆ ಮಾಡುವ ಧೈರ್ಯ ಬೆಳೆಸಿಕೊಂಡವರು, ಲಿಂಗದೇವ ತತ್ತ್ವವನ್ನು ಅರಗಿಸಿಕೊಂಡವರು ಸಹಿತ ಕುಂಕುಮಧಾರಣೆಯ ವಿಷಯದಲ್ಲಿ ಹಿಂಜರಿಯುತ್ತಾರೆ. ಸಿನಿಮಾ ನಟನಟಿಯರನ್ನು ಅನುಕರಿಸುವ ಫ್ಯಾಷನ್ ಗೊಂಬೆಗಳು ಇಂದು ಬರೀ ಹಣೆಯಲ್ಲಿರುತ್ತಾರೆ. ಅಂದ ಮಾತ್ರಕ್ಕೆ ಅದೊಂದೇ ಕಾರಣಕ್ಕೆ ಅವರನ್ನು ಶರಣೆಯರು ಎನ್ನಲು ಆಗುವುದೆ ?

ಹಿಂದು ಪರಿಸರದಲ್ಲಿರುವ ಲಿಂಗಾಯತ ಮಹಿಳೆಯರು ಕುಂಕುಮಧಾರಣೆಯನ್ನು ತಮ್ಮ ಅನಿವಾರ್ಯ ಆಚರಣೆಯನ್ನಾಗಿ ಮಾಡಿಕೊಂಡಿದ್ದಾರೆ. ಈಗದು (Beauty Spot). ಈ ದಿಶೆಯಲ್ಲಿ ಚಿಂತನೆ

ಮಾಡಿದಾಗ 12ನೆಯ ಶತಮಾನದಲ್ಲಿ ಶರಣರು ಮಾಡುತ್ತಿದ್ದ ಆಚರಣೆಗಳಲ್ಲಿ, ಮೂಲ ಸಿದ್ಧಾಂತಕ್ಕೆ ಚ್ಯುತಿ ತರದಂತೆ ಕೆಲವು ಸುಧಾರಣೆಗಳು (Reformations) ತಿದ್ದುಪಡಿಗಳು (Amendments) ಅಗತ್ಯವಾಗಿವೆ. ಉದಾಹರಣೆಗೆ ತ್ರಿಕಾಲ ಮಾಡುವ ಇಷ್ಟಲಿಂಗಾರ್ಚನೆ, ಜಂಗಮ ಪಾದೋದಕ ಸ್ವೀಕಾರ, ಕುಂಕುಮಧಾರಣೆ ಮುಂತಾದುವು. ಮಲ್ಲಿಕಾರ್ಜುನಪ್ಪನವರು, "ಅಧಿಕೃತವಾಗಿ ಒಪ್ಪಿಗೆ ನೀಡುವುದಾಗಲಿ, ಪತ್ರಿಕೆಯಲ್ಲಿ ಬರೆಯುವುದಾಗಲಿ, ಪ್ರವಚನದಲ್ಲಿ ಹೇಳುವುದಾಗಲಿ ಮಾಡಿದರೆ ಇನ್ನೂ ಸಲಿಗೆ ಸಿಕ್ಕಿ ಲಿಂಗಾಯತ ಧರ್ಮದ ಅಧಿಕೃತ ಅವನತಿಗೆ ಕಾರಣವಾಗುತ್ತದೆ" ಎಂದು ಬರೆದಿದ್ದಾರೆ.

ಕೆಲವು ಆಚರಣೆಗಳಿಂದ ಲಿಂಗಾಯತ ಧರ್ಮದ ಮೂಲಸಿದ್ಧಾಂತಕ್ಕೆ ಚ್ಯುತಿ ಬಂದು ಈ ಧರ್ಮದ ಅವನತಿಗೆ ಕಾರಣವಾಗುತ್ತದೆ. ಉದಾಹರಣೆಗೆ ಒಳಪಂಗಡಗಳ ಭೇದ, ಗದ್ದುಗೆಗಳ ಬಲದ ಮೇಲೆ ಧರ್ಮಗುರು ಶ್ರದ್ಧೆಯನ್ನು ಕಡಿಮೆ ಮಾಡಿ ಸ್ಥಾನಿಕ ಪಂಥ (Loco Cult) ಬೆಳೆಸುವುದು, ಜಂಗಮತ್ವವನ್ನು ಹುಟ್ಟಿಗೆ, ಜಾತಿಗೆ ಸೀಮಿತಗೊಳಿಸುವುದು ಮುಂತಾದುವು. ಕುಂಕುಮಧಾರಣೆ, ಕೇಶ ವಿನ್ಯಾಸ, ಬಟ್ಟೆ ತೊಡುವುದು ಇಂಥವು ಧರ್ಮದ ಮೂಲಸಿದ್ಧಾಂತಕ್ಕೆ ಧಕ್ಕೆ ತರುವುದಿಲ್ಲ. ಇನ್ನು ನಾವು ಚರ್ಚಿಸದೆ ಪಲಾಯನವಾದ ಪಠಿಸುವುದು ಸಾಧ್ಯವಿಲ್ಲ. ಜನರ ಸಂದೇಹಗಳಿಗೆ, ಪ್ರಶ್ನೆಗಳಿಗೆ ಉತ್ತರವನ್ನು ಕೊಡಲೇ ಬೇಕಾಗುತ್ತದೆ. ಕೊಡಬೇಕಾದರೆ ಈ ಬಗ್ಗೆ ಚರ್ಚೆ ಮಾಡಲೇ ಬೇಕಾಗುತ್ತದೆ.

ಹಿಂದುಗಳು, ಲಿಂಗಾಯತ, ಜೈನ ಮಹಿಳೆಯರು ಕುಂಕುಮದ ಬೊಟ್ಟನ್ನು ಇಡುವುದು ಸ್ವಾಭಾವಿಕ ಆಚರಣೆಯಾಗಿದೆ. ಇಸ್ಲಾಂ, ಕ್ರೈಸ್ತ ಧರ್ಮಗಳು ಇದರ ಕಡು ವಿರೋಧಿಗಳು. ಆದರೆ ಕೆಳವರ್ಗದ, ದಲಿತ ಮಹಿಳೆಯರು ಕುಂಕುಮ ಧಾರಣೆ ಇಲ್ಲದಿದ್ದರೆ ಕ್ರೈಸ್ತ ಮತಕ್ಕೆ ಆಕರ್ಷಿತರಾಗುವುದಿಲ್ಲ ಎಂದು ಕ್ರೈಸ್ತ ಮುಖಂಡರು ಕೆಲವೊಂದು ಆಚರಣೆಗಳಲ್ಲಿ ಬದಲಾವಣೆ ತಂದುಕೊಂಡಿದ್ದಾರೆ.

1. ಕುಂಕುಮ ಧಾರಣೆಗೆ ಮಹಿಳೆಯರಿಗೆ ಅನುಮತಿ.
2. ಹೆಸರನ್ನಿಡುವುದರಲ್ಲಿ ಭಾರತೀಯ ಸಂಸ್ಕೃತಿಯ ಹೆಸರನ್ನು ಇಡುವುದು.
3. ಕ್ರಿಸ್ತನ ಆರಾಧನೆಯಲ್ಲಿ ಆರತಿ.

ಇತ್ಯಾದಿ. ಈ ಬದಲಾವಣೆ ಜನರನ್ನು ಆಕರ್ಷಿಸುವುದಕ್ಕಾಗಿ. ಇದರ ಅಗತ್ಯ ಮತ್ತು ಅನಿವಾರ್ಯತೆಯನ್ನು ಅರಿತು ನಾವೂ ಮಹಿಳೆಯರ ಕುಂಕುಮಧಾರಣೆಗೆ ಆಕ್ಷೇಪ ಮಾಡದಿರುವುದು ಒಳ್ಳೆಯದು.

ಸದ್ಯದಲ್ಲಿ ಬೇಸರ ತರಿಸುತ್ತಿರುವ ಸಂಗತಿ ಎಂದರೆ ಮಹಿಳೆಯ ಕುಂಕುಮ ಧಾರಣೆಗಿಂತ ಮಿಗಿಲಾಗಿ ಗಂಡಸರು ಹಣೆ ಮೇಲೆ ಕುಂಕುಮ ಬಳಿದು ಕೊಳ್ಳುತ್ತಿರುವುದು. ಶ್ರೀ ಎಡೆಯೂರಪ್ಪನಂತಹವರು ಮಹಿಳೆಯರಂತೆ ಗುಂಡಗೆ ಕುಂಕುಮ ಹಚ್ಚಿಕೊಂಡರೆ ಕೆಲವರು ಮಾರಿ ಮುಂದೆ ಕಡಿಯುವ ಕೋಣಕ್ಕೆ ಬಳಿದಂತೆ ಹಣೆಗೆ ದೊಡ್ಡದಾಗಿ ಬಡಿದು ಕೊಳ್ಳುತ್ತಾರೆ. ಮದುವೆಗಳಲ್ಲಿ ವರನಿಗೂ ಉದ್ದಕ್ಕೆ ಬಳಿಯುತ್ತಾರೆ. ಲಿಂಗಾಯತರು ತಮ್ಮ ಸೌಮ್ಯವೂ ಸಾತ್ವಿಕವೂ ಆದ ಶರಣ ಸಂಸ್ಕೃತಿ ಬಿಟ್ಟು ಬಿಡುತ್ತಿರುವುದು ಕಳವಳಕಾರಿಯಾಗಿದೆ. ವಿಭೂತಿ ಮತ್ತು ಗಂಧ ಅಷ್ಟವಿಧಾರ್ಚನೆಯ ಸಾಮಗ್ರಿಗಳಲ್ಲಿ ಬರುತ್ತವೆ. ಆದ್ದರಿಂದ ಪುರುಷರು ಅವನ್ನು ಮಾತ್ರ ಹಣೆಯಲ್ಲಿ ಧರಿಸಬೇಕು. ಮಹಿಳೆಯರಿಗೆ ವಿಭೂತಿ, ಗಂಧದೊಡನೆ ಕುಂಕುಮಕ್ಕೆ ಪರವಾನಗಿ ಕೊಡಬಹುದು. ಶರಣರ ಆದೇಶಕ್ಕೆ ಈ ತಿದ್ದುಪಡಿ ತರಬಹುದಾದರೂ ಕುಂಕುಮ ಧಾರಣೆಯು ಶರಣ ಸಂಸ್ಕೃತಿಗೆ ಹೊರತು ಎಂಬುದನ್ನು ಹೇಳುತ್ತಿರಬೇಕು. ಭಕ್ತ ಸ್ಥಲದಲ್ಲಿರುವವರಿಗೆ ರಿಯಾಯಿತಿ ಇದ್ದರೂ, ಮುಂದಿನ ಸ್ಥಲಕ್ಕೆ ಹೋಗುವ ಶ್ರದ್ಧೆಯುಳ್ಳ ಲಿಂಗಾಯತರು ಮಹೇಶ್ವರ ಸ್ಥಲವಲ್ಲಾದರೂ ಬಿಟ್ಟು ಬಿಡುತ್ತಾರೆ. ರಿಯಾಯಿತಿ ಅಥವಾ ತಿದ್ದುಪಡಿಯ ನಿಯಮದ ಪ್ರಕಾರ ಕುಂಕುಮ ಧರಿಸಿದರೂ ಅದು ಅತ್ಯಂತ ಕೆಂಪು ಬಣ್ಣ - ರಕ್ತ ವರ್ಣದ್ದು ಇರಬಾರದು ಮತ್ತು ಅಗಲವಾಗಿ ತೀರಾ ದೊಡ್ಡದಾಗಿಯೂ ಇರಬಾರದು.

ಇನ್ನೂ ಒಂದು ಸಮಸ್ಯೆ ನನ್ನನ್ನು ಕಾಡುತ್ತಲಿದೆ. ವಚನ ಶಾಸ್ತ್ರದ ಆದೇಶದ ಪ್ರಕಾರ ಅನ್ಯ ದೇವತಾರ್ಚನೆ ಮತ್ತು ಸ್ಥಾವರಲಿಂಗದ ಅರ್ಚನೆ ನಿಷಿದ್ಧ. ಎಷ್ಟೋ ಶಿವ ದೇವಾಲಯಗಳು ಲಿಂಗಾಯತರ ಆಡಳಿತದಲ್ಲಿವೆ ಮತ್ತು ಮಾನಸಿಕವಾಗಿ ಶಿವನೊಡನೆ ಅನನ್ಯ ಸಂಬಂಧವನ್ನು ಜನರು ಹೊಂದಿದ್ದಾರೆ. ಯೋಗಿರಾಜ ಶಿವನ ಬಗ್ಗೆ ಅಪಾರ ಭಕ್ತಿ, ಗೌರವ, ಅಭಿಮಾನವಿದೆ. ಅಂಥ ಉಪಾಸನೆ ಹೇಗೆ ಬಿಡುವುದು ಎಂಬ ಸಂದಿಗ್ಧಕ್ಕೆ ಒಳಗಾಗುವುದೇ ಅಲ್ಲದೆ ಸ್ಥಾವರಲಿಂಗೋಪಾಸನೆ ಬಿಡಲಾರದೆ ವಚನ ಸಾಹಿತ್ಯವನ್ನೇ ಕೈ ಬಿಡುತ್ತಾರೆ. ಬಸವ ತತ್ತ್ವ ಎಂದರೆ ಭಯ ಪಡುತ್ತಾರೆ. ಕೆಲವು ಕಡೆ ಧರ್ಮಗುರು ಬಸವಣ್ಣನವರನ್ನು ದ್ವೇಷಿಸುತ್ತಾರೆ. ಹೀಗಾಗಿ ಅಪ್ಪಟ ಬಸವ ಪಥಿಕರು ಮತ್ತು ಶೈವಾಚಾರ ಮಾರ್ಗಿಗಳಾದ ಲಿಂಗಾಯತರು (ವೀರಶೈವರು) ಎಂದು ಎರಡು ಪ್ರತ್ಯೇಕ ಗುಂಪುಗಳಾಗುತ್ತಿವೆ. ಶಿವನ ಮೇಲಿರುವ ಭಕ್ತಿಯನ್ನೂ ಭಾವನಾತ್ಮಕವಾಗಿ

ತೆಗೆದುಹಾಕಲು ಬಹಳ ಜನಕ್ಕೆ ಸಾಧ್ಯವಾಗುತ್ತಿಲ್ಲ ಮತ್ತು ತೆಗೆದುಹಾಕಲೂ ಬಾರದು ಎಂದು ನನ್ನ ಅಭಿಪ್ರಾಯ. ಶಿವಭಕ್ತಿ ನಾಶವಾದರೆ ಆ ಜಾಗದಲ್ಲಿ ವೈಷ್ಣವ ಸಂಸ್ಕೃತಿ ಬೆಳೆಯುತ್ತದೆ. ಉದಾಹರಣೆಗೆ ಕುರುಬರು, ಇವರು ಮೂಲತಃ ಶಿವಭಕ್ತರು, ಬೀರೇಶ್ವರ, ಮೈಲಾರ ಲಿಂಗೇಶ್ವರ, ರೇವಣ ಸಿದ್ದೇಶ್ವರ ಇವರ ಆರಾಧ್ಯ ದೈವಗಳು; ಹೆಸರುಗಳೆಲ್ಲ ಸಾಮಾನ್ಯವಾಗಿ ಶೈವ ಸಂಸ್ಕೃತಿಯವು ಆಗಿರುತ್ತಿದ್ದವು. ಕನಕದಾಸರು ವೈಷ್ಣವ ಮಾರ್ಗವನ್ನು ಹಿಡಿದುದರಿಂದ ಬಹಳ ಜನ ಕುರುಬರು ವೈಷ್ಣವ ಸಂಸ್ಕೃತಿಯತ್ತ ವಾಲತೊಡಗಿದ್ದಾರೆ. ಇಷ್ಟಲಿಂಗಧಾರಿಗಳಿಗೆ ಏಕದೇವೋಪಾಸನೆ ಹೇಳುವಾಗ ಸ್ಥಾವರ ಲಿಂಗಾರ್ಚನೆ ಕುರಿತು ಖಂಡಿಸಿದಾಗ, ಲಿಂಗಾಯತರು, ಲಿಂಗಾಯತೇತರರು ಶಿವ ಸಂಸ್ಕೃತಿಯನ್ನು ಬಿಟ್ಟು ವೈಷ್ಣವ ಸಂಸ್ಕೃತಿಯ ಪ್ರಭಾವಕ್ಕೆ ಬೀಳಬಹುದು. ಇಡೀ ಭಾರತದಲ್ಲಿ ಹಾಸುಹೊಕ್ಕಾಗಿರುವ ಶಿವ ಸಂಸ್ಕೃತಿ ಈಗಾಗಲೇ ಶಿಥಿಲಗೊಳ್ಳುತ್ತಿರುವುದು ಆಲೋಚನಾರ್ಹ.

ಈ ಹಿನ್ನೆಲೆಯಲ್ಲಿ ಕೂಡ ಬಹಳಷ್ಟು ಚಿಂತನೆಯನ್ನು ಮಾಡಬೇಕಾಗಿದೆ. ಷಟ್‌ಸ್ಥಲ ಎಂಬ ಆರು ಹಂತಗಳ ಮೂಲಕ ಮನಸ್ಸನ್ನು ತಾತ್ತ್ವಿಕವಾಗಿ ಗಟ್ಟಿಗೊಳಿಸುವ ಬಸವಾದಿ ಪ್ರಮಥರ ಚಿಂತನ ಶೈಲಿ ಗಮನಾರ್ಹ.

ಭಕ್ತನೆನಿಸುವೆನಯ್ಯಾ ಮೆಲ್ಲ ಮೆಲ್ಲನೆ
ಯುಕ್ತನೆನಿಸುವೆನಯ್ಯಾ ಮೆಲ್ಲ ಮೆಲ್ಲನೆ
ಶರಣನೆನಿಸುವೆನಯ್ಯಾ ಮೆಲ್ಲ ಮೆಲ್ಲನೆ
ಎಡಹು ಕುಳಿಗಳ ದಾಂಟಿ ಬರಬರ ಲಿಂಗೈಕ್ಯನೆನಿಸುವೆನಯ್ಯಾ
ಲಿಂಗದೇವಾ, ನಿಮ್ಮಿಂದ ಅಧಿಕ ನೆನಿಸುವೆನಯ್ಯಾ. - ಬ.ವ.ದೀ. 888

ಮನೋವಿಜ್ಞಾನಿಯಾದ ಬಸವಣ್ಣನವರಿಗೆ ಜನರ ಮನೋದೌರ್ಬಲ್ಯ - ಸಾಂಪ್ರದಾಯಿಕ ನಂಬಿಕೆಗಳನ್ನು ಬಿಡಲಾಗದ್ದು, ಚೆನ್ನಾಗಿ ಗೊತ್ತಿತ್ತು. ಹೀಗಾಗಿ ಮೆಲ್ಲ ಮೆಲ್ಲನೆ ಹಂತ ಹಂತವಾಗಿ ಸುಧಾರಣೆಗೊಳ್ಳಲು ಅವಕಾಶ ನೀಡುತ್ತಾರೆ. ಒಂದು ಮಟ್ಟಕ್ಕೆ ಏರಿದ ಮೇಲೆ, ಎಡಹು ಕುಳಿಗಳ ದಾಂಟಿ ಬರಬರ ಲಿಂಗೈಕ್ಯ ಸ್ಥಲವನ್ನು ತಲುಪಲು ಸಾಧ್ಯ ಎಂಬುದನ್ನೂ ಧರ್ಮಪಿತರು ಅರಿತಿದ್ದರು.

ಆದ್ದರಿಂದ ಲಿಂಗಧಾರಣೆಯಿಂದ ಭವಿತನ ಕಳೆದು ಭಕ್ತರಾದ ಮೇಲೆ ಸ್ವಲ್ಪ ರಿಯಾಯಿತಿ ಕೊಟ್ಟು, ನಿರಂತರವಾಗಿ ತತ್ತ್ವಗಳನ್ನು ಬೋಧಿಸುತ್ತ, ಮಹೇಶ್ವರ ಸ್ಥಲಕ್ಕೆ ತಾತ್ತ್ವಿಕ ಶುದ್ಧಿ ಪಡೆದು ಮೇಲೇರಿ ಎಂದು ಹೇಳಬೇಕು. ಹೀಗೆ ಹೇಳದಿದ್ದರೆ ಲಿಂಗಾಯತರೇ ಸ್ವಧರ್ಮವನ್ನು ನಿರ್ಲಕ್ಷಿಸಿ ಮೂಢ ಮಾರ್ಗಗಳಲ್ಲೇ ಶಾಶ್ವತವಾಗಿ ಉಳಿಯುವ ಸಂಭವವಿದೆ. (ಪುಟ 34ರಲ್ಲಿ ಮುದ್ರಣಗೊಂಡ ಶರಣ. ಸು.ಮಲ್ಲಿಕಾರ್ಜುನಪ್ಪನವರ ಪತ್ರಕ್ಕೆ ಉತ್ತರ. ಇನ್ನು ಕೆಲವು ವಿಷಯಗಳಿಗೆ ಮುಂದಿನ ಸಂಚಿಕೆಯಲ್ಲಿ ಉತ್ತರಿಸಲಾಗುವುದು.)

5. ಗಣಪತಿಯಪ್ಪನವರಿಗೆ ಹೃತ್ಪೂರ್ವಕ ಆಹ್ವಾನ

(ಒಂದು ಪತ್ರ) 3-12-2007

ಆತ್ಮೀಯ ಶರಣರಾದ ಗಣಪತಿಯಪ್ಪ ಅವರಿಗೆ ಹೃತ್ಪೂರ್ವಕ ಶುಭಾಹಾರೈಕೆಗಳು.

ನಿಮ್ಮ ವಿಚಾರ ಶೀಲ ಪತ್ರವನ್ನು ಪ್ರಜಾವಾಣಿಯ ವಾಚಕರ ವಾಣಿ ವಿಭಾಗದಲ್ಲಿ (ದಿ.17-11-2007) ಓದಿ, ಸಂತೋಷವಾಯಿತು. ಕಲ್ಯಾಣ ಕಿರಣವನ್ನು ಕಳಿಸುತ್ತಿದ್ದೇವೆ. ತಲುಪುತ್ತಿರಬಹುದೆಂದು ನಂಬುತ್ತೇವೆ. ಬಹಳ ವರ್ಷಗಳ ಮೇಲೆ ನೀವು ಮಿಥಿಕ್ ಸೊಸೈಟಿಯಲ್ಲಿ ಭೇಟಿಯಾದಿರಿ, ಕಂಡು ಸಂತೋಷವಾಯಿತು.

ಲಿಂಗಾಯತರು ಹಿಂದುಗಳಲ್ಲ ಎಂಬ ಲೇಖನವನ್ನು ನವೆಂಬರ್ ಕಲ್ಯಾಣ ಕಿರಣದಲ್ಲಿ ಬರೆಯಲಾಗಿದೆ. ಶೂದ್ರ ಮತ್ತು ಪಂಚಮರಾದ ಅಸ್ಪೃಶ್ಯರು ದ್ವಿಜ ಪ್ರಧಾನಾರಿತ ಹಿಂದು ವ್ಯವಸ್ಥೆಯಲ್ಲಿ ತಮ್ಮನ್ನು ಹಿಂದು ಎಂದು ಕರೆದುಕೊಳ್ಳುವುದು (One sided love) ಒಮ್ಮುಖ ಪ್ರೀತಿ. ಇದನ್ನು ನೀವು ಎಳೆ ಎಳೆಯಾಗಿ ಬಿಚ್ಚಿಟ್ಟಿದ್ದೀರಿ. ಶ್ರೀ ದೇ. ಜವರೇಗೌಡರು ಇದೇ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ನಾವು - ನೀವೆಲ್ಲ ಸಮಾನ ಮನಸ್ಕರೆ.

ಮುಂದಿನ ಪ್ರಶ್ನೆ, ಪ್ರತಿ ವ್ಯಕ್ತಿಗೆ ಧರ್ಮದ ಆಸರೆ ಬೇಕು. ಅಂತೆಯೇ ಅಧಿಕಾರ, ಅಂತಸ್ತು, ಹಣ ಎಲ್ಲ ಇದ್ದರೂ ಸಂತೃಪ್ತಿ ಕಾಣದೆ ಡಾ|| ಬಾಬಾ ಸಾಹೇಬ್ ಅಂಬೇಡ್ಕರ್ ಧರ್ಮಾಂತರ ಮಾಡಿದರು. ಹೀಗಿರುವಾಗ ಯಾವ ಧರ್ಮವನ್ನು ಸ್ವೀಕರಿಸಬೇಕು ಎಂಬುದು ಮುಂದಿನ ಪ್ರಶ್ನೆ. ಬೌದ್ಧ - ಜೈನ, ಇಸ್ಲಾಂ - ಕ್ರೈಸ್ತ ಈ ಎಲ್ಲ ಧರ್ಮಗಳ ನೇತಾರರು ತಮ್ಮದು ಶ್ರೇಷ್ಠವೆಂದು, ತಾವು ಸ್ವಾಗತಿಸಲು

ಸಿದ್ಧವೆಂದು ಆಹ್ವಾನಿಸಬಹುದು. ಚಿಂತನೆ ಮಾಡುವ ಸ್ವಾತಂತ್ರ್ಯ ನಿಮ್ಮದು. ಈ ಹಿನ್ನೆಲೆಯಲ್ಲಿ ನಿಮ್ಮ ಮನೋಭಾವ ಅಭಿರುಚಿಗೆ ಹೊಂದುವಂಥದು ಬಸವ ಧರ್ಮ. ಗಾಂಧಿವಾದದ ಪಥದಲ್ಲಿ ಸಾಗಿ ಬಂದಿರುವ ಮತ್ತು ವೈಚಾರಿಕತೆಯ ಹಿನ್ನೆಲೆ ರೂಢಿಸಿಕೊಂಡಿರುವ ನಿಮಗೆ ಬಸವ ಪ್ರಣೀತ ಲಿಂಗಾಯತ ಧರ್ಮವು ಅತ್ಯಂತ ಸೂಕ್ತ. ಪೂಜ್ಯ ಶ್ರೀ ಲಿಂಗಾನಂದ ಅಪ್ಪಾಜಿಯವ ಪ್ರವಚನ ಕೇಳಿರುವ ನೀವು ಬಸವ ತತ್ವದ ಆಳ ಅಗಲಗಳನ್ನು ಅರ್ಥ ಮಾಡಿಕೊಂಡಿದ್ದೀರಿ.

ಇನ್ನು ಉತ್ತರಿಸಬೇಕಾದ ಒಂದು ಪ್ರಶ್ನೆ ಉಳಿಯುತ್ತದೆ. ಬಹುಪಾಲು ಲಿಂಗಾಯತರು ತಮ್ಮ ಧರ್ಮಗುರು ಬಸವಣ್ಣನವರ ಆಶಯಕ್ಕೆ ಅನುಗುಣವಾಗಿ ನಡೆಯದೆ ಮಡಿವಂತಿಕೆ, ಜಾತೀಯತೆ, ಮೂಢ ನಂಬಿಕೆ, ಬಹುದೇವತೋಪಾಸನೆ ಮುಂತಾದವುಗಳ ಆಗರವಾಗಿದ್ದಾರೆ. ಇವರು ಹೊಸದಾಗಿ ಬರುವವರನ್ನು ಆತ್ಮೀಯವಾಗಿ ಸ್ವಾಗತಿಸಿ, ಇಂಬಿಟ್ಟುಕೊಳ್ಳಬಹುದೆ ? ನಾವು ಆತ್ಮ ವಿಶ್ವಾಸದಿಂದ ಹೇಳಬಲ್ಲೆವು. ಸುಮಾರು 800 ವರ್ಷ ಕಾಲ ತಮ್ಮ ಧರ್ಮದ ಸಂವಿಧಾನವಾದ ವಚನ ಸಾಹಿತ್ಯ ಸಂಪರ್ಕದಿಂದ ದೂರವಿದ್ದು, ವೈದಿಕ - ಹಿಂದು ಧರ್ಮವನ್ನೇ ತಮ್ಮ ಧರ್ಮವನ್ನಾಗಿ ತಿಳಿದು ಲಿಂಗಾಯತ ಸಮಾಜ ಸಂಕುಚಿತ ಮನೋಭಾವ ಹೊಂದಿದ್ದು ನಿಜವಾದರೂ, ವಚನ ಸಾಹಿತ್ಯದ ಅಭ್ಯಾಸ, ಅಧ್ಯಯನದಿಂದ ಬದಲಾಗುತ್ತಿದೆ. ನಮ್ಮ ರಾಷ್ಟ್ರೀಯ ಬಸವ ದಳದವರಂತೂ ದೀಕ್ಷೆ ಹೊಂದಿ ಬಂದವರನ್ನು ಅತ್ಯಂತ ಆತ್ಮೀಯವಾಗಿ ಬರಮಾಡಿಕೊಳ್ಳುತ್ತಿದ್ದಾರೆ.

ನನಗನ್ನಿಸುತ್ತಿದೆ ಹಳೆಯ ಲಿಂಗಾಯತರ ವಿಷಯ ಅತ್ತಲಿರಲಿ, ವಿಚಾರಶೀಲರು ಬಸವ ಧರ್ಮವನ್ನು ಹೆಚ್ಚು ಹೆಚ್ಚಾಗಿ ಪ್ರವೇಶಿಸಿ ಹೊಸ ರಕ್ತವನ್ನು ನೀಡಿ ತನ್ಮೂಲಕ ಹೊಸ ಶಕ್ತಿಯನ್ನು ಕೊಡಬೇಕು. ಹೇಗೆ ಹೊಳೆಯ ನೀರು ಯಾರ ಸೊತ್ತು ಆಗದೆ ತುಂಬಿಕೊಳ್ಳುವವರ ಆಸ್ತಿಯೋ ಹಾಗೆ ಬಸವ ಧರ್ಮವು ಎಲ್ಲರ ಹಕ್ಕು. ವಿಶ್ವಗುರು ಬಸವಣ್ಣನವರ ಸಂದೇಶಗಳು ನಮ್ಮ ದೇಶಕ್ಕೆ ಅತ್ಯಗತ್ಯ. ಅವು ಕೇವಲ ಪುಸ್ತಕದಲ್ಲಿ ಬೀಜಗಳೋಪಾದಿಯಲ್ಲಿ ಉಳಿಯದೆ ರಾಷ್ಟ್ರದ ಭೂಮಿಯಲ್ಲಿ ಬೆಳೆಯಾಗಿ ಬೆಳೆದು ಕಲ್ಯಾಣ ರಾಜ್ಯ ನಿರ್ಮಾಣವಾಗಬೇಕಾಗಿದೆ. ಲಿಂಗಾಯತ ಸಮಾಜದ ಕೂಪ ಮಂಡೂಕ ಪ್ರವೃತ್ತಿಯ ಸಿಡುಕು ಮುಖದಿಂದ ಬೇಸರಗೊಳ್ಳದೆ, ನಿರಾಶರಾಗಿ ಹಿಂದೆ ಸರಿಯದೆ, ಮಾತೃ ಹೃದಯಿ ಬಸವಣ್ಣನವರ ಮಂದಸ್ಮಿತ ಮುಖಕ್ಕೆ ಆಕರ್ಷಿತರಾಗಿ ಬರಬೇಕಾಗಿದೆ. ಅದಕ್ಕಾಗಿ ನಿಮಗೆ ಹೃತ್ಪೂರ್ವಕ ಆಹ್ವಾನ. ಇನ್ನು ಏನೇ ಸಂದೇಹಗಳಿದ್ದರೂ ಚರ್ಚೆಗೆ ಸಿದ್ಧ. ಹೆಚ್ಚಿನ ವಿಷಯವಿಲ್ಲ. ಉತ್ತರದ ನಿರೀಕ್ಷೆಯಲ್ಲಿರುತ್ತೇನೆ.

ಶರಣ. ಗಣಪತಿಯಪ್ಪ ಅವರ
ಪತ್ರಕ್ಕಾಗಿ 33ನೇ ಪುಟ ನೋಡಿರಿ

ಶುಭಹಾರೈಕೆಗಳೊಡನೆ
ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಕೂಡಲ ಸಂಗಮ

21ನೇ ಶರಣ ಮೇಳದಲ್ಲಿ 'ವಚನ ದುಂದುಭಿ' ಕಾರ್ಯಕ್ರಮ.

ವಚನ ದುಂದುಭಿ ಧಾರ್ಮಿಕ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಭಾಗಿಗಳಾಗುವವರು, ಒಂದೊಂದು ರಾ.ಬ.ದಳದಿಂದ 5 ಜನರ ತಂಡವನ್ನು ಮಾಡಿಕೊಂಡು ಭಾಗವಹಿಸಬೇಕು. ಪ್ರಶ್ನೋತ್ತರಗಳಿಗಾಗಿ ಸುಯಿಧಾನ ಸುಗ್ರಂಥ ಮಾಲೆಯ **ವಚನ ದುಂದುಭಿ** ಎನ್ನುವ ಪುಸ್ತಕವನ್ನು ನೋಡಬಹುದು. ಅದೇ ಪುಸ್ತಕದಿಂದ ಹಾಗು ಕಲ್ಯಾಣ ಕಿರಣದಲ್ಲಿ ಈವರಗೆ ಪ್ರಕಟವಾದ ಪ್ರಶ್ನೆಗಳಿಂದಲೇ ಈ ಸ್ಪರ್ಧೆಯಲ್ಲಿ ಪ್ರಶ್ನೆಗಳನ್ನು ಕೇಳಲಾಗುವುದು. ಪುಸ್ತಕವು ಎಲ್ಲಾ ಬಸವ ಮಂಟಪಗಳಲ್ಲಿ ದೊರೆಯುವುದಲ್ಲದೆ, 50 ರೂಗಳ ಮನಿಯಾರ್ಡರ್ ಅನ್ನು ಬೆಂಗಳೂರು ಬಸವ ಮಂಟಪದ ವಿಳಾಸಕ್ಕೆ ಕಳುಹಿಸಿದರೂ ಪುಸ್ತಕವನ್ನು ಕಳುಹಿಸಿಕೊಡಲಾಗುವುದು. ಪ್ರಥಮ ಬಹುಮಾನ ವಿಜೇತರಿಗೆ **ವಚನ ದುಂದುಭಿ** ಸಂಚಾರಿ ಕಪ್, ಫಲಕ ಹಾಗು ಪ್ರಶಸ್ತಿ ಪತ್ರಗಳನ್ನು ನೀಡಲಾಗುವುದು. ದ್ವಿತೀಯ ಹಾಗು ತೃತೀಯ ಬಹುಮಾನ ಪಡೆದವರಿಗೆ ಫಲಕ ಹಾಗು ಪ್ರಶಸ್ತಿ ಪತ್ರಗಳನ್ನು ನೀಡಲಾಗುವುದು. ಈ ವರ್ಷದಿಂದ ಬೆಂಗಳೂರು ರಾ.ಬ.ದಳದ ವತಿಯಿಂದ ಹಣದ ರೂಪದಲ್ಲಿಯೂ ಬಹುಮಾನಗಳನ್ನು ಕೊಡಲು ನಿರ್ಧರಿಸಲಾಗಿದೆ. ಪ್ರಥಮ ಬಹುಮಾನ 1000/-, ದ್ವಿತೀಯ ಬಹುಮಾನ 750/- ಹಾಗು ತೃತೀಯ ಬಹುಮಾನ 500 ರೂಗಳನ್ನೊಳಗೊಂಡಿರುತ್ತದೆ. ಆದಕ್ಕಾಗಿ ಈ ಸಲ ಹೆಚ್ಚಿನ ತಂಡಗಳು ಸ್ಪರ್ಧೆಯಲ್ಲಿ ಭಾಗಿಗಳಾಗಬೇಕೆಂದು ಕೋರುತ್ತೇವೆ. ಬೆಂಗಳೂರು ರಾ.ಬ.ದಳದವರಿಂದ ನಡೆಸಿಕೊಡಲಾಗುವ ಈ ಕಾರ್ಯಕ್ರಮವು 12.01.2008ರಂದು ಮಧ್ಯಾಹ್ನ 3-30ರಿಂದ 6-00 ಗಂಟೆಯವರೆಗೆ ನಡೆಯುತ್ತದೆ.

ಲಿಂಗಾಯತರು ಹಿಂದುಗಳಲ್ಲ ಭಾಗ -2

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

-ಮಾತಾಜಿ

1. ಹಿಂದು ಧರ್ಮಕ್ಕೆ ಸ್ಥಾಪಕ ಗುರುವಿಲ್ಲ

ಬೌದ್ಧ ಧರ್ಮಕ್ಕೆ ಬುದ್ಧ, ಜೈನ್ ಧರ್ಮಕ್ಕೆ (ಕಡೆಯ ತೀರ್ಥಂಕರರಾದ) ಮಹಾವೀರ, ಸಿಖ್ ಧರ್ಮಕ್ಕೆ ಗುರುನಾನಕ್, ಕ್ರೈಸ್ತ ಧರ್ಮಕ್ಕೆ ಏಸು ಕ್ರಿಸ್ತ, ಇಸ್ಲಾಂ ಧರ್ಮಕ್ಕೆ (ಕಡೆಯ ಪ್ರವಾದಿ) ಮೊಹಮ್ಮದ್ ಪೈಗಂಬರರು ಸ್ಥಾಪಕ ಗುರು ಎಂದು ಖ್ಯಾತವಾದಂತೆ ಹಿಂದು ಧರ್ಮಕ್ಕೆ ಒಬ್ಬ ಸ್ಥಾಪಕ ಗುರುವಿಲ್ಲ. ಲಿಂಗಾಯತ ಧರ್ಮದ ಸ್ಥಾಪಕ ಗುರು 12ನೆಯ ಶತಮಾನದಲ್ಲಿ ಆಗಿ ಹೋದ ವಿಶ್ವಗುರು ಬಸವಣ್ಣನವರು (1134-1196). ಇದನ್ನು ಬಸವಣ್ಣನವರ ಸಮಕಾಲೀನರಾದಿಯಾಗಿ ನಂತರದ ಶರಣ ಪರಂಪರೆಯ ಎಲ್ಲರೂ ಒಪ್ಪಿದ್ದಾರೆ.

ಆದಿಯಲ್ಲಿ ನೀನೇ ಗುರುವಾದ ಕಾರಣ, ನಿನ್ನಿಂದ ಹುಟ್ಟಿತ್ತು ಲಿಂಗ.
ಆದಿಯಲ್ಲಿ ನೀನೇ ಲಿಂಗವಾದ ಕಾರಣ, ನಿನ್ನಿಂದ ಹುಟ್ಟಿತ್ತು ಜಂಗಮ.
ಆದಿಯಲ್ಲಿ ನೀನೇ ಜಂಗಮವಾದ ಕಾರಣ, ನಿನ್ನಿಂದ ಹುಟ್ಟಿತ್ತು ಪ್ರಸಾದ.
ಆದಿಯಲ್ಲಿ ನೀನೇ ಪ್ರಸಾದಿಯಾದ ಕಾರಣ, ನಿನ್ನಿಂದ ಹುಟ್ಟಿತ್ತು ಪಾದೋದಕ.
ಇಂತೀ ಗುರು ಲಿಂಗ ಜಂಗಮ ಪ್ರಸಾದ ಪಾದೋದಕ ಸ್ವರೂಪ
ನೀನೆಯಾದ ಕಾರಣ, ಜಂಗಮ ಪ್ರಾಣಿಯಾಗಿ ಸದಾಚಾರಿಯಾದೆ.
ಅದು ಕಾರಣ, ನೀನೆ ಸರ್ವಾಚಾರ ಸಂಪನ್ನನಾಗಿ
ಪೂರ್ವಾಚಾರಿ ನೀನೆಯಾದ ಕಾರಣ. - ಪ್ರಭುದೇವರು

2. ನಾಸ್ತಿಕರು, ನಿರೀಶ್ವರವಾದಿಗಳು, ಸೇಶ್ವರವಾದಿಗಳು

ಹಿಂದು ಧರ್ಮದಲ್ಲಿ ಸಾಂಖ್ಯ (ಮತ್ತು ಅದರ ಆಚಾರ ವಿಭಾಗವಾದ ಯೋಗದವ)ರು, ವೈಶೇಷಿಕರು, ಪೂರ್ವ ಮೀಮಾಂಸಕರು ನಿರೀಶ್ವರವಾದಿಗಳು, ಅಂದರೆ ಒಬ್ಬ ಸೃಷ್ಟಿ ಕರ್ತನನ್ನು ಒಪ್ಪದವರು; ಚಾರ್ವಾಕರು ನಾಸ್ತಿಕರು. ಲಿಂಗಾಯತ ಧರ್ಮವು ಸೇಶ್ವರವಾದಿ ಧರ್ಮ (Theistic Religion). ಸೃಷ್ಟಿಕರ್ತ ಲಿಂಗದೇವನು ಈ ಧರ್ಮದ ಜೀವಾಳ, ಹಾಸು ಹೊಕ್ಕು. ಲಿಂಗಾಂಗ ಸಾಮರಸ್ಯವೇ ಇದರ ಗುರಿ. ಲಿಂಗವೆಂದರೆ ಬ್ರಹ್ಮಾಂಡಗತ ಚೈತನ್ಯ ಪರಮಾತ್ಮ, ಅಂಗವೆಂದರೆ ಪಿಂಡಾಂಡಗತ ಚೈತನ್ಯವಾದ ಜೀವಾತ್ಮ. ಇವೆರಡರ ಸಮ್ಮಿಲನವೇ ಲಿಂಗಾಂಗ ಸಾಮರಸ್ಯ. ದೇವನು ಇದ್ದಾನೆ ಎಂಬುದು ಪರಮ ಸತ್ಯ; ದೇವನು ಒಬ್ಬನೇ ಎನ್ನುವುದು ಸ್ಪಷ್ಟ ನಿಲುವು.

1. ಅಮೂಲ್ಯನು ಅಪ್ರಮಾಣನು ಅಗೋಚರ ಲಿಂಗ
ಆದಿ ಮಧ್ಯಾವಸಾನಗಳಿಲ್ಲದ ಸ್ವತಂತ್ರ ಲಿಂಗ
ನಿತ್ಯ ನಿರ್ಮಳ ಲಿಂಗ;
ಅಯೋನಿ ಸಂಭವನಯ್ಯ ನಮ್ಮ ಲಿಂಗದೇವರು

2. ಇಬ್ಬರು ಮೂವರು ದೇವರೆಂದು ಉಬ್ಬಿ ಮಾತನಾಡಬೇಡ
ದೇವನೊಬ್ಬನೆ ಕಾಣಿರೊ, ಇಬ್ಬರೆಂಬುದು ಹುಸಿ ನೋಡಾ!
ಲಿಂಗದೇವರಲ್ಲದೆ ಇಲ್ಲವೆಂದಿತ್ತು ವೇದ.

3. ನಿನ್ನರಿಕೆಯ ನರಕವೆ ಮೋಕ್ಷ ನೋಡಯ್ಯಾ,
ನಿನ್ನನರಿಯದ ಮುಕ್ತಿಯೇ ನರಕ ಕಂಡಯ್ಯಾ,
ನೀನೊಲ್ಲದ ಸುಖವೆ ದುಃಖ ಕಂಡಯ್ಯಾ,
ನೀನೊಲಿದ ದುಃಖವೆ ಪರಮ ಸುಖ ಕಂಡಯ್ಯಾ,
ಚನ್ನಮಲ್ಲಿಕಾರ್ಜುನಾ, (ಮಹಾದೇವಿ ಅಕ್ಕ ಪ್ರಿಯ ಲಿಂಗದೇವಾ)
ನೀ ಕಟ್ಟಿ ಕೆಡಹಿದ ಬಂಧನವೆ ನಿರ್ಬಂಧವೆಂದಿಪ್ಪೆನು!

4. ಗಟ್ಟಿದುಪ್ಪ ತಿಳಿದುಪ್ಪಕ್ಕೆ ಹಂಗುಂಟೆ ಅಯ್ಯಾ?
ದೀಪಕ್ಕೆ ದೀಪ್ತಿಗೆ ಭೇದವುಂಟೆ ಅಯ್ಯಾ?

ಅಂಗಕ್ಕೆ ಆತ್ಮಂಗೆ ಭಿನ್ನವುಂಟೆ ಅಯ್ಯಾ?
ಎನ್ನಂಗವನು ಶ್ರೀಗುರು ಮಂತ್ರವ ಮಾಡಿ ತೋರಿದನಾಗಿ,
ಸಾವಯವಕ್ಕೂ ನಿರವಯವಕ್ಕೂ ಭಿನ್ನವಿಲ್ಲವಯ್ಯಾ.
ಚನ್ನಮಲ್ಲಿಕಾರ್ಜುನನ, (ಮಹಾದೇವಿ ಅಕ್ಕ ಪ್ರಿಯ ಲಿಂಗದೇವರ)
ಬೆರೆಸಿ ಮತಿಗೆಟ್ಟವಳ ಏತಕ್ಕೆ ನುಡಿಸುವಿರಯ್ಯಾ?

3. ಹಿಂದು ಧರ್ಮಕ್ಕೆ ವೇದಾಗಮಗಳೇ ಪರಮ ಪ್ರಮಾಣ

ಹಿಂದು ಧರ್ಮಕ್ಕೆ ವೇದಾಗಮ, ಸ್ಮೃತಿ -ಶೃತಿ, ಬ್ರಹ್ಮ ಸೂತ್ರ - ಭಗವದ್ಗೀತೆಗಳೇ ಪರಮ ಪ್ರಮಾಣ. ಈ ಶಾಸ್ತ್ರದಾಸ್ಯವನ್ನು ನಿರಾಕರಿಸಿ ಧರ್ಮಗುರು ಬಸವಣ್ಣನವರು ವೇದಾಗಮ, ಶೃತಿ -ಸ್ಮೃತಿಗಳನ್ನೇ ಪರೀಕ್ಷೆಗೆ ಒಡ್ಡಿದರು. ಇವೆಲ್ಲಕ್ಕಿಂತ ಮಿಗಿಲು ಅನುಭವ ಮತ್ತು ಅನುಭಾವ ಪ್ರಮಾಣ ಎಂದು ಸಾರಿ ಹೇಳಿದರು. ಪರ್ಯಾಯವಾಗಿ ವಚನ ಶಾಸ್ತ್ರ ಸಂಹಿತೆಯನ್ನು ಕೊಟ್ಟರು. ವಚನ ಶಾಸ್ತ್ರವೇ ಇಂದು ಲಿಂಗಾಯತ ಧರ್ಮಕ್ಕೆ ಆಧಾರ.

1. ಹಾಲ ತೊರೆಗೆ ಬೆಲ್ಲದ ಕೆಸರು, ಸಕ್ಕರೆಯ ಮಳಲು
ತವರಾಜದ ನೊರೆ ತೆರೆಯಂತೆ ಆದ್ಯರ ವಚನವಿರಲು,
ಬೇರೆ ಬಾವಿಯ ತೋಡಿ, ಉಪ್ಪನೀರನುಂಬುವನ ವಿಧಿಯಂತೆ
ಆಯಿತ್ತೆನ್ನ ಮತಿ, ಲಿಂಗದೇವಾ
ನಿಮ್ಮ ವಚನಂಗಳ ಕೇಳದೆ ಅನ್ಯ ಪುರಾಣಂಗಳ ಕೇಳಿ ಕೆಟ್ಟೆನಯ್ಯಾ.

2. ವೇದಂಗಳ ಹಿಂದೆ ಹರಿಯದಿರು ಹರಿಯದಿರು
ಶಾಸ್ತ್ರಂಗಳ ಹಿಂದೆ ಸುಳಿಯದಿರು, ಸುಳಿಯದಿರು
ಪುರಾಣಂಗಳ ಹಿಂದೆ ಬಳಲದಿರು, ಬಳಲದಿರು
ಸೌರಾಷ್ಟ್ರ ಸೋಮೇಶ್ವರನ ಕೈಪಿಡಿ,
ಶಬ್ದ ಜಾಲಂಗಳಿಗೆ, ಬಳಲದಿರು, ಬಳಲದಿರು.

3. ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ
ತರ್ಕದ ಬೆನ್ನ ಬಾರನೆತ್ತುವೆ
ಆಗಮದ ಮೂಗ ಕೊಯಿವೆ ನೋಡಯ್ಯಾ,
ಮಹಾದಾನಿ ಲಿಂಗದೇವಾ,
ಮಾದಾರ ಚನ್ನಯ್ಯನ ಮನೆಯ ಮಗ ನಾನಯ್ಯಾ.

4. ನಾದದ ಬಲದಿಂದ ವೇದಂಗಳಾದವಲ್ಲದೆ, ವೇದ ಸ್ವಯಂಭುವಲ್ಲ ನಿಲ್ಲು.
ಮಾತಿನ ಬಲದಿಂದ ಶಾಸ್ತ್ರಂಗಳಾದವಲ್ಲದೆ, ಶಾಸ್ತ್ರ ಸ್ವಯಂಭುವಲ್ಲ ನಿಲ್ಲು.
ಪಾಷಾಣದ ಬಲದಿಂದ ಸಮಯಂಗಳಾದವಲ್ಲದೆ, ಸಮಯ ಸ್ವಯಂಭುವಲ್ಲ ನಿಲ್ಲು.
ಇಂತೀ ಮಾತಿನ ಬಣಬೆಯ ಮುಂದಿಟ್ಟುಕೊಂಡು ಆತನ ಕಂಡಿಹೆನೆಂದಡೆ, ಆತನತ್ಯತಿಷ್ಠದ್ದಶಾಂಗುಲ.
ಆತನೆಂತು ಸಿಲುಕುವನೆಂದಾತ ಅಂಬಿಗರ ಚೌಡಯ್ಯ.

ಜಗತ್ತಿನ ಎಲ್ಲ ಧರ್ಮಗಳಿಗೂ ತಮ್ಮದೇ ಆದ ಧರ್ಮಗ್ರಂಥಗಳಿವೆ. ಕ್ರಿಶ್ಚಿಯನ್ನರಿಗೆ ಬೈಬಲ್, ಮುಸ್ಲೀಮರಿಗೆ ಕುರಾನ್, ಸಿಖ್ಖರಿಗೆ ಗ್ರಂಥ ಸಾಹೇಬ್, ಬೌದ್ಧರಿಗೆ ತ್ರಿಪೀಟಕ, ಪಾರ್ಸಿಗಳಿಗೆ ಜೆಂಡ್ ಅವಸ್ಥಾ ಇರುವಂತೆ ವೈದಿಕರಿಗೆ ವೇದಗಳಿವೆ. ಈ ಎಲ್ಲ ಧರ್ಮಾನುಯಾಯಿಗಳನ್ನು ಅವರ ಆಚಾರಗಳನ್ನು ಕುರಿತು ಏಕೆ ಹೇಗೆ ಮಾಡುತ್ತೀರಿ? ಎಂದು ಪ್ರಶ್ನಿಸಿದಾಗ ತಮ್ಮ ಧರ್ಮಗ್ರಂಥ ಹೀಗೆ ಹೇಳುತ್ತದೆ ಎಂದು ಉತ್ತರಿಸುವರು. ಅದೇ ರೀತಿ ಹಿಂದುಗಳು ತಮ್ಮ ಆಚರಣೆಗಳ ವಿಚಾರಣೆಗೆ ವೇದ, ಆಗಮ, ಗೀತೆ, ಪುರಾಣಗಳತ್ತ ಕೈ ತೋರಿಸುವರು. ಲಿಂಗಾಯತರು ಮಾರ್ಗದರ್ಶಿಯಾಗಿ ಇಟ್ಟುಕೊಳ್ಳಬೇಕಾದುದು ವಚನ ಸಾಹಿತ್ಯವನ್ನು. ಇದೇ ಲಿಂಗಾಯತರ ಆಚಾರ -ವಿಚಾರ -ಸಂಸ್ಕಾರಗಳನ್ನು ನಿಯಂತ್ರಿಸಬೇಕಾದ ಕೈಪಿಡಿ.

ಶ್ರೀ ಮರುಳು ಶಂಕರ ದೇವರು ಹೇಳುತ್ತಾರೆ:

ಬಸವಣ್ಣ ನಡೆದುದೇ ಮಾರ್ಗ, ನುಡಿದುದೇ ವೇದ

ಶ್ರೀ ಸಿದ್ಧರಾಮೇಶ್ವರರು ಹೇಳುತ್ತಾರೆ.

ಎಮ್ಮ ವಚನದೊಂದು ಪಾರಾಯಣಕ್ಕೆ
ವ್ಯಾಸದೊಂದು ಪುರಾಣ ಸಮಬಾರದಯ್ಯಾ
ಎಮ್ಮ ವಚನದ ನೂರೆಂಟರಧ್ಯಯನಕ್ಕೆ
ಶತರುದ್ರೀಯ ಯಾಗ ಸಮಬಾರದಯ್ಯಾ
ಎಮ್ಮ ವಚನದೊಂದು ಪಾರಾಯಣಕ್ಕೆ
ಗಾಯತ್ರಿ ಲಕ್ಷ ಜಪ ಸಮ ಬಾರದಯ್ಯಾ
ಕಪಿಲ ಸಿದ್ಧಮಲ್ಲಿಕಾರ್ಜುನ

ಚಾರ್ವಾಕರು, ಜೈನರು, ಬೌದ್ಧರು. ಸಿಖ್ಖರು, ವೇದ ಪ್ರಾಮಾಣ್ಯವನ್ನು ನಿರಾಕರಿಸಿದುದರಿಂದ ಅವರು ವೈದಿಕರಲ್ಲ ಎನ್ನಲಾಗುತ್ತಿದೆ.

ಒಮ್ಮೆ ಗುಜರಾತಿನ ಸ್ವಾಮಿ ನಾರಾಯಣ ಪಂಥದವರು ತಾವು ಅಹಿಂದು ಪಂಥವೆಂದು ಅಲ್ಪಸಂಖ್ಯಾತರೆಂದು ಮನ್ನಣೆ ಪಡೆಯಲು 1966ರಲ್ಲಿ ಸುಪ್ರೀಂ ಕೋರ್ಟ್ ಮೆಟ್ಟಲನ್ನು ಹತ್ತಿದರು. ಆದರೆ ಆಗಿನ ಮುಖ್ಯ ನ್ಯಾಯಾಧೀಶರಾಗಿದ್ದ ಮಾನ್ಯ ಶ್ರೀ ಪಿ.ಬಿ.ಗಜೇಂದ್ರ ಗಡಕರ್ ಅವರ ಅಧ್ಯಕ್ಷತೆಯಲ್ಲಿ ತೀರ್ಪು ಹೊರಬಂದಿತು. ತೀರ್ಪಿನ ಸಾರಾಂಶವೇನೆಂದರೆ "ವೇದಗಳನ್ನು ಭಕ್ತಿ - ಶ್ರದ್ಧೆಗಳಿಂದ ಮಾನ್ಯ ಮಾಡುವುದು, ಬಹುದೇವತೋಪಾಸನೆಯಲ್ಲಿ ನಂಬಿಕೆ ಇಡುವುದು, ಮೋಕ್ಷ ಸಾಧನೆಗೆ ಹಲವಾರು ಮಾರ್ಗಗಳಿವೆ ಎಂದು ಒಪ್ಪಿಕೊಳ್ಳುವುದೇ ಹಿಂದು ಧರ್ಮದ ಲಕ್ಷಣಗಳು ಎಂಬ ತಿಲಕರ ಅಭಿಪ್ರಾಯದ ಆಧಾರದ ಮೇಲೆ ಸ್ವಾಮಿ ನಾರಾಯಣ ಪಂಥದವರು ವೈದಿಕ ಆಚರಣೆಗಳನ್ನು ಮಾಡುವುದರಿಂದ ಅವರು ಹಿಂದುಗಳೇ ಎಂದು ತೀರ್ಪು ನೀಡಲಾಯಿತು. ಇದೇ ರೀತಿ ಕಲಕತ್ತಾದ ರಾಮಕೃಷ್ಣಾಶ್ರಮ -ದವರೂ ಪ್ರಯತ್ನಿಸಿ ಸೋತರು. ಈ ಎರಡೂ ಪಂಥಗಳವರು ಹಿಂದು ದೇವತೆಗಳ ಪೂಜೆ ಮಾಡುವವರು, ವೇದಾಗಮಗಳನ್ನು ಒಪ್ಪುವವರು, ಹೋಮ - ಹವನ -ಯಜ್ಞ ಕಾರ್ಯಗಳಲ್ಲಿ ಆಸಕ್ತರು. ಅಂದಾಗ ಇವರು ಅಹಿಂದುಗಳು ಹೇಗಾಗುವರು?

ಲಿಂಗಾಯತ ಧರ್ಮವು ವೇದ ಪ್ರಾಮಾಣ್ಯವನ್ನು ಮನ್ನಿಸದೆ, ಹೋಮ ಹವನಾದಿಗಳನ್ನು ತಿರಸ್ಕರಿಸುವ, ಏಕದೇವ- ಇಷ್ಟಲಿಂಗ ಉಪಾಸಕ ಧರ್ಮವಾದ್ದರಿಂದ ಸ್ಪಷ್ಟವಾಗಿ ಅಹಿಂದು ಧರ್ಮ ಎನ್ನಿಸಿಕೊಳ್ಳುವುದು.

4. ಚತುರ್ವರ್ಣಗಳನ್ನು ನಂಬುತ್ತದೆ.

ಹಿಂದು ಸಮಾಜ ಶಾಸ್ತ್ರವು ಚತುರ್ವರ್ಣ ಮತ್ತು ಚತುರಾಶ್ರಮ ವ್ಯವಸ್ಥೆಯನ್ನು ಪ್ರತಿಪಾದಿಸುತ್ತದೆ. ಇದರ ಪ್ರಕಾರ ಸಮಾಜದಲ್ಲಿ ವರ್ಣಾಧಾರಿತ ವಿಭಾಗಗಳು ನಾಲ್ಕು, ಬ್ರಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ. ಈ ನಾಲ್ಕು ವರ್ಣಗಳಿಂದ ಹೊರಗಿರುವವನು ಪಂಚಮ ವರ್ಣೀಯನಾದ ಅಸ್ಪೃಶ್ಯ.

ಋಗ್ ವೇದದಲ್ಲಿ ಬರುವ ಪುರುಷ ಸೂಕ್ತದಲ್ಲಿ ದೇವರ ತಲೆಯಿಂದ ಬ್ರಾಹ್ಮಣನ ಉತ್ಪತ್ತಿ, ಭುಜದಿಂದ ಕ್ಷತ್ರಿಯನ ಉತ್ಪತ್ತಿ, ತೊಡೆಯಿಂದ ವೈಶ್ಯನ, ಪಾದದಿಂದ ಶೂದ್ರನ ಉತ್ಪತ್ತಿ ಎಂದು ಹೇಳಲಾಗಿದೆ. ವೇದಾಧ್ಯಯನ, ಅದರ ಆಧಾರದ ಮೇಲೆ ಧಾರ್ಮಿಕ ಪೌರೋಹಿತ್ಯ ನಡೆಸುವ ಅಧಿಕಾರ ಪಡೆದ ಬ್ರಾಹ್ಮಣ ಸರ್ವಶ್ರೇಷ್ಠ; ದೇಶ ರಕ್ಷಣೆಗೆ ಬಾಹುಬಲ ಪರಾಕ್ರಮದಿಂದ ಹೋರಾಡುವ ಕ್ಷತ್ರಿಯ ಬ್ರಾಹ್ಮಣನಿಗಿಂತ ಕೆಳಗೆ, ವ್ಯಾಪಾರ ವೃತ್ತಿಯ ವೈಶ್ಯ ಇನ್ನೂ ಕೆಳಗೆ, ದಾಸ್ಯ ವೃತ್ತಿಯನ್ನು ಮಾಡುವ ಶರೀರ ಶ್ರಮದಾಧಾರಿತ ಕೆಲಸಗಳನ್ನು ಮಾಡುವ ಶೂದ್ರ ಎಲ್ಲರಿಗಿಂತಲೂ ಕೆಳಗೆ. ಇವನಿಗೆ ವೇದಾಧ್ಯಯನಕ್ಕೆ ಅವಕಾಶವಿಲ್ಲ, ಉಪನಯನ -ಯಜ್ಞೋಪವೀತ ಧಾರಣೆ ಇಲ್ಲ. ಚತುರ್ವರ್ಣ ಕಕ್ಷೆಯಿಂದ ಹೊರಗಿರುವ ದಲಿತರು ಎಲ್ಲ ರೀತಿಯ ಧಾರ್ಮಿಕ ಹಾಗೂ ಸಾಮಾಜಿಕ ಹಕ್ಕುಗಳಿಂದ ಪೂರ್ಣ ವಂಚಿತರು. ಕ್ಷತ್ರಿಯ ವಿಶ್ವಾಮಿತ್ರ ಬ್ರಹ್ಮಜ್ಞಾನಿ ಎಂಬ ಬಿರುದು ಪಡೆಯಲು ಸರ್ವ ಸಾಹಸ ಮಾಡಿದನಾದರೂ ಅದು ಸಿದ್ಧಿಸದಂತೆ ತಡೆಯಲಾಯಿತು ಎಂಬುದು ಗಮನಾರ್ಹ. ಪರಸ್ಪರ ವೈರುದ್ಧ್ಯಗಳಿಂದ ಕೂಡಿದ ಹಿಂದು ಸಮಾಜದಲ್ಲಿ ಕ್ಷತ್ರಿಯರಾದ ರಾಮ, ಕೃಷ್ಣರೇ ದೈವತ್ವವನ್ನು ಹೊಂದಿದರು ಎಂಬುದು ಅಷ್ಟೇ ಸೋಜಿಗದ ಸಂಗತಿ.

ಆಶ್ರಮಗಳು ನಾಲ್ಕು ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸನ್ಯಾಸ. ಬ್ರಾಹ್ಮಣ ವರ್ಣೀಯನಿಗೆ ಈ ನಾಲ್ಕು ಲಭ್ಯ. ಕ್ಷತ್ರಿಯನಿಗೆ ಮೊದಲ ಮೂರು, ವೈಶ್ಯನಿಗೆ ಮೊದಲ ಎರಡು, ಶೂದ್ರನಿಗೆ ಕೇವಲ

ಗೃಹಸ್ಥ ಮಾತ್ರ. ಬ್ರಹ್ಮಚರ್ಯದಲ್ಲಿ ವಿದ್ಯಾರ್ಜನೆ, ಗ್ರಾಹಸ್ಥ್ಯದಲ್ಲಿ ಸಂತಾನೋತ್ಪತ್ತಿ, ವಾನಪ್ರಸ್ಥದಲ್ಲಿ ನಿರ್ಲಿಪ್ತತೆ ಹೊಂದಿ ಅಧ್ಯಯನ ಮಾಡಬೇಕು. ಸನ್ಯಾಸದಲ್ಲಿ ಕಾಡಿಗೆ ಹೋಗಿ ಜ್ಞಾನ ಸಾಧನೆ ಮಾಡಬೇಕು. ಬಸವಾದಿ ಪ್ರಮಥರು ಈ ವಿಭಜನೆಯನ್ನು ಟೀಕಿಸಿದರು. ಹುಟ್ಟಿನಿಂದ ಯಾರೂ ಶ್ರೇಷ್ಠ -ಕನಿಷ್ಠರಾಗರು ಎಂದರಲ್ಲದೆ ಎಲ್ಲರಿಗೂ ವಿದ್ಯಾರ್ಜನೆ ಮತ್ತು ಜ್ಞಾನ ಸಾಧನೆಗೆ ಅವಕಾಶ ಮಾಡಿಕೊಟ್ಟರು. ಮಾನವ -ಶರಣ ಎಂಬ ಎರಡೇ ವರ್ಗೀಕರಣ ಮಾಡಿದರು. ಮರೆವಿನ ಅಜ್ಞಾನಿ ಮಾನವ, ಅರಿವಿನ ಸುಜ್ಞಾನಿ ಶರಣ ಎಂದು ನುಡಿದು ಮರೆದ ಮಾನವ ಅರಿದ ಸುಜ್ಞಾನಿಯಾಗಲು ಅವಕಾಶ ಮಾಡಿಕೊಟ್ಟರು. ಲಿಂಗಾಯತ ಸಮಾಜದಲ್ಲಿ ವರ್ಣ ಮತ್ತು ಆಶ್ರಮ ಪಾಲನೆ ಇಲ್ಲವೇ ಇಲ್ಲ.

"ಚತುರ್ವರ್ಣ ವ್ಯವಸ್ಥೆಯನ್ನು ದೇವರಿಂದ ನಿರ್ಮಾಣವಾದುದು. ಇದನ್ನು ಬದಲಾಯಿಸಲು ಬರದು; ಬದಲಾಯಿಸಲು ಎಳೆಸಿದರೆ ಅದು ದೈವ ದ್ರೋಹ. ಇದನ್ನು ನಂಬಿ ಪಾಲಿಸುವವರೇ ಹಿಂದುಗಳು." ಎಂಬುದು ಕೆಲವರ ದೃಢ ವಿಶ್ವಾಸದ ವ್ಯಾಖ್ಯೆ. ಇದಕ್ಕೆ ಸನಾತನಿಗಳು ಕೊಡುವ ಮುಖ್ಯವಾದವೆಂದರೆ, ಚಾತುರ್ವರ್ಣಂ ಮಯಾ ಸೃಷ್ಟ ಎಂದು ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನೇ ಹೇಳಿದ್ದಾನೆ. ಹೀಗೆ ಪರಮಾತ್ಮನೇ ಹೇಳಿದ್ದಾನೆಂದ ಮೇಲೆ, ನಾವು ಅದನ್ನು ದೇವಶಾಸನವೆಂದು ನಂಬಬೇಕು. ಈ ವ್ಯಾಖ್ಯೆಯ ಪ್ರಕಾರ ಚತುರ್ವರ್ಣ ವ್ಯವಸ್ಥೆಯನ್ನು ದೇವ ನಿರ್ಮಿತವೆಂದೊಪ್ಪದ ಅವೈದಿಕ ಧರ್ಮಗಳೆಲ್ಲ ಹಿಂದೂ ಕಕ್ಷೆಯಿಂದ ಹೊರಗಾಗಬೇಕಾಗುವುದು.

ಅತಿವರ್ಣಾಶ್ರಮ ಸಮಾಜಶಾಸ್ತ್ರವನ್ನು ಪ್ರತಿಪಾದಿಸುವ ಲಿಂಗಾಯತ ಧರ್ಮವೇ ಮುಂತಾದ ಈ ಅವೈದಿಕ ಮತಗಳಾವುವೂ ಈ ವ್ಯವಸ್ಥೆಯನ್ನು ದೇವ ನಿರ್ಮಿತವೆಂದೊಪ್ಪದೆ ಮಾನವ ಕಲ್ಪಿತ ಎನ್ನುವವು. ಭಗವದ್ಗೀತೆಯಲ್ಲಿ ಈ ಶ್ಲೋಕದಲ್ಲಿ ಎಂತಹ ಗೊಂದಲ ತುಂಬಿದೆ ಎಂಬುದನ್ನಿಲ್ಲಿ ನೋಡೋಣ. "ಚತುರ್ವರ್ಣಗಳು ನನ್ನಿಂದ (ಶ್ರೀಕೃಷ್ಣನಿಂದ) ಗುಣಕರ್ಮ ಗಳ ಆಧಾರದ ಮೇಲೆ ನಿರ್ಮಿತವಾಗಿವೆ." ಎಂದು ಶ್ರೀ ಕೃಷ್ಣ (ಪ್ರಾಮಾಣಿಕವಾಗಿಯೆ) ಹೇಳಿದ್ದಾನೆ. ಇದನ್ನು ಅಪರಿವರ್ತನೀಯ ವ್ಯವಸ್ಥೆಯನ್ನಾಗಿ ಭದ್ರಗೊಳಿಸಲು ಶ್ರೀ ಕೃಷ್ಣನನ್ನು ಜಗನ್ನಿಯಾಮಕ ಕರ್ತನೆಂದು ಮಾಡಿ ಅತಾರ್ಕಿಕವಾದ ತರ್ಕದ ಬಲದಿಂದ ಇದನ್ನು ಸಾಧಿಸುವ ವಿಶೇಷ ನೋಡಿರಿ.

ಶ್ರೀ ಕೃಷ್ಣನು ಚತುರ್ವರ್ಣ ವ್ಯವಸ್ಥೆಯನ್ನು ಮಾಡಿದ. ಶ್ರೀಕೃಷ್ಣನು ದೇವರು. ಆದ್ದರಿಂದ ದೇವರು ಚತುರ್ವರ್ಣ ವ್ಯವಸ್ಥೆಯನ್ನು ಮಾಡಿದ. ಇದೊಂದು ವಿಚಿತ್ರ ತರ್ಕ. ಶ್ರೀಕೃಷ್ಣನು ದೇವರು ಎಂಬ ಉಕ್ತಿಯನ್ನು ಮಧ್ಯ ತರುವಲ್ಲೇ ಒಂದು ದೊಡ್ಡ ತಾರ್ಕಿಕ ದೋಷ ಸಂಭವಿಸುತ್ತಿದೆ. ಶ್ರೀ ಕೃಷ್ಣನು ಇದನ್ನು ಗಟ್ಟಿಗೊಳಿಸಿರಬಹುದು. ನಮಗಿದು ಸಂಬಂಧವಿಲ್ಲ ಎಂಬುದು ಅವೈದಿಕ ಧರ್ಮಗಳ ದೃಷ್ಟಿ ಕೋನ. ಇದನ್ನು ದೇವರು ಅಂದರೆ ಕರ್ತನು ಮಾಡಿರುವನೆ? ಸಾಧ್ಯವಿಲ್ಲ. ವರ್ಣ ಮತ್ತು ಜಾತಿ ವ್ಯವಸ್ಥೆಯು ದೇವರಿಂದ ನಿರ್ಮಾಣವಾಗಿಲ್ಲ.

1. ಯಾವುದೇ ದೇವ ನಿರ್ಮಿತವಿದ್ದುದು ಎಲ್ಲ ಕಡೆ ಒಂದೇ ತರಹ ಇರುತ್ತದೆ. ಹೆಣ್ಣು -ಗಂಡು ದೇವರು ಮಾಡಿದ ಜಾತಿಗಳು. ಎಲ್ಲ ದೇಶದಲ್ಲೂ ಹೆಣ್ಣು ಹೆಣ್ಣೇ, ಗಂಡು ಗಂಡೇ! ಪಕ್ಷಿಗಳು ಖೇಚರ ಪ್ರಾಣಿಗಳು; ಮೀನು ಜಲಚರ, ಹಸು ಎಮ್ಮೆ ಮುಂತಾದವು ಭೂಚರ. ಎಲ್ಲ ದೇಶದಲ್ಲಿಯೂ ಇದೇ ವ್ಯವಸ್ಥೆ. ಹಾಗಾದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರು ಎಲ್ಲಾ ದೇಶಗಳಲ್ಲಿ ಏಕಿಲ್ಲ? ಈ ವಿಭಜನೆ ದೇವ ನಿರ್ಮಿತವೇ ಆಗಿದ್ದರೆ ಎಲ್ಲ ಕಡೆ ಹೀಗೇ ಇರಬೇಕಾಗಿತ್ತು.

2. ದೇವ ನಿರ್ಮಿತವಾದ ಭಿನ್ನ ಜಾತಿಗಳ ಪ್ರಾಣಿಗಳು ಪರಸ್ಪರ ಸಂಗವನ್ನು ಮಾಡವು. ಮಾಡಿದರೂ ಸಂತಾನೋತ್ಪತ್ತಿಯಾಗದು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರ ಸ್ತ್ರೀ -ಪುರುಷರು ಸಂಸಾರ ಮಾಡಿದರೆ ಅವರಿಗೆ ಸಂತಾನವಾಗದೆ? ಆದ ಪ್ರಸಂಗಗಳು ಬೇಕಾದಷ್ಟಿವೆ.

3. ದೇವ ನಿರ್ಮಿತ ಜಾತಿಗಳಾದ ಗಿಳಿ, ಕಾಗೆ, ಗುಬ್ಬಿ, ಹುಲಿ, ಕರಡಿಗಳನ್ನು ಯಾವುದೇ ಸಂಸ್ಕಾರದಿಂದ ಬದಲು ಮಾಡಲು ಬರದು. ಆದರೆ ಮಾನವರನ್ನು ಧರ್ಮ ಸಂಸ್ಕಾರದಿಂದ ಬದಲು ಮಾಡಿ ಪೂರ್ವಾಶ್ರಯವನ್ನು ಕಳೆಯಲು ಸಾಧ್ಯವಿದೆ. ಧರ್ಮ ಸಂಸ್ಕಾರದಿಂದ ಅಸ್ಪೃಶ್ಯನ ಅಸ್ಪೃಶ್ಯತೆ, ಶೂದ್ರನ ಶೂದ್ರತ್ವ ನಿರಸನವಾಗುವುವು.

ಅತಿ ವರ್ಣಾಶ್ರಮ ಸಮಾಜ ವ್ಯವಸ್ಥೆಯನ್ನು ಒಪ್ಪುವ, ಪ್ರತಿಪಾದಿಸುವ ಅವೈದಿಕ ಧರ್ಮಗಳು ಮಾನವ -ಶರಣ, ಭವಿ - ಭಕ್ತ, ಬದ್ಧ-ಬುದ್ಧ, ಅಜ್ಞಾನಿ - ಸುಜ್ಞಾನಿ ಎಂಬ ಎರಡೇ ವರ್ಗವನ್ನು ಮಾಡುವವು; ಅದೂ ಆಚಾರ -ಅರಿವು-ಅನುಭಾವಗಳ ತಳಹದಿಯ ಮೇಲೆ, ಹುಟ್ಟಿನ ಮೇಲಲ್ಲ.

ಹೊಲೆಗಂಡಲ್ಲದೆ ಪಿಂಡದ ನೆಲೆಗೆ ಆಶ್ರಯವಿಲ್ಲ

ಜಲ ಬಿಂದುವಿನ ವ್ಯವಹಾರ ಒಂದೆ
ಆಸೆಯಾಮಿಷ ರೋಷ ಹರುಷ ವಿಷಯಾದಿಗಳೆಲ್ಲ ಒಂದೆ.
ಸಪ್ತಧಾತು ಸಮಂ ಪಿಂಡಂ ಸಮಯೋನಿ ಸಮುದ್ಭವಂ
ಆತ್ಮ ಜೀವ ಸಮಾಯುಕ್ತಂ ವರ್ಣಾನಾಂ ಕಿಂ ಪ್ರಯೋಜನಂ?
ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ
ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ
ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ?
ಇದು ಕಾರಣ ಲಿಂಗದೇವಾ;
ಲಿಂಗಸ್ಥಲವನರಿದವನೇ ಕುಲಜನು.

ಎಲ್ಲರ ಪಿಂಡೋತ್ಪತ್ತಿಯು ಒಂದೇ ಬಗೆಯಲ್ಲಿ, ಹುಟ್ಟುವ ರೀತಿಯೂ ಒಂದೇ ಬಗೆಯದು, ಹುಟ್ಟಿ ಬಂದಾನಂತರ ಶಾರೀರಿಕ -ಮಾನಸಿಕ ಚಟುವಟಿಕೆಗಳೂ ಒಂದೇ ತರಹ. ಅಂದಾಗ ವರ್ಣ ವ್ಯವಸ್ಥೆಗೆ ಅರ್ಥವೆಲ್ಲಿದೆ? ಕಾಸುವವನು ಕಮ್ಮಾರ, ಬಟ್ಟೆ ತೊಳೆಯುವವನು ಮಡಿವಾಳ, ನೇದವ ನೇಕಾರ, ವೇದವನೋದುವವ ಬ್ರಹ್ಮಜ್ಞಾನಿ. ಯಾರಾದರೂ ಅನೈಸರ್ಗಿಕವಾಗಿ ಹುಟ್ಟುವದುಂಟೆ? ಪರಮಾತ್ಮನನ್ನು ಅರಿತವನೇ ಕುಲ ಶ್ರೇಷ್ಠನು. ಹೀಗೆ ಎಲ್ಲರೂ ಸಮಾನವಾಗಿ ಹುಟ್ಟುವ ಕಾರಣ ಯಾರೂ ಹುಟ್ಟಿನಿಂದಲೇ ಮೇಲಲ್ಲ - ಕೀಳಲ್ಲ; ಅವರ ಸಾಧನೆಯಿಂದಲೇ ಅವರಿಗೆ ಶ್ರೇಷ್ಠತ್ವ ಪ್ರಾಪ್ತಿ. ವ್ಯಕ್ತಿಯು ಯಾವುದೇ ಜಾತಿಯಲ್ಲಿ ಹುಟ್ಟಿದರೂ ಸತ್‌ಸಂಕಲ್ಪದಿಂದ, ಸಾಧನೆಯಿಂದ ಉತ್ತುಂಗ ನಿಲುವನ್ನು ಹೊಂದಬಲ್ಲ.

ಗುರು ಬಸವಣ್ಣನವರು ವರ್ಣಾಶ್ರಮ ಭೇದವಿಲ್ಲದೆ ಎಲ್ಲರಿಗೂ ಧರ್ಮದ ಮಹಾದ್ವಾರವನ್ನು ತೆರೆದುದರಿಂದ ತಮ್ಮ ಬದುಕನ್ನು ದೈವೀಕರಿಸಿಕೊಳ್ಳಲು ಎಲ್ಲ ವರ್ಣೀಯರಿಗೂ ಸಾಧ್ಯವಾಯಿತು. ಅನುಭವ ಮಂಟಪದ ಶರಣರಲ್ಲಿ ಶೂದ್ರ ಮತ್ತು ಪಂಚಮ ವರ್ಣೀಯರೇ ಹೆಚ್ಚು ಸಂಖ್ಯೆಯಲ್ಲಿ ಇರುವುದನ್ನು ಕಾಣಬಹುದು. ಮೇಲ್ಜಾತಿ ವರ್ಗದವರು ನಂತರವೇ ಪ್ರವೇಶ ಮಾಡಿದ್ದಾರೆ. ಲಿಂಗೀ ಬ್ರಾಹ್ಮಣರ ಪ್ರವೇಶವಾದ ಮೇಲೆಯೇ ಲಿಂಗಾಯತ ಧರ್ಮದ ಜನ್ಮಸಿದ್ಧ ಪ್ರಖರತೆ ದುರ್ಬಲಗೊಂಡಿರಲೂ ಸಾಕು.

ಲಿಂಗಾಯತರು ಹಿಂದುಗಳು ಎನ್ನುವವರು ಒಂದು ಪ್ರಶ್ನೆಗೆ ಉತ್ತರ ಕೊಡಲು ಹೊಣೆಗಾರ -ರಾಗುತ್ತಾರೆ. ಸನಾತನ ವೈದಿಕ ಧರ್ಮದ ಪ್ರಕಾರ ಜನ್ಮನಾ ಜಾಯತೇ ಶೂದ್ರಃ ಸಂಸ್ಕಾರತ್ ದ್ವಿಜ ಉಚ್ಯತೆ! ಹುಟ್ಟಿನಿಂದ ಎಲ್ಲರೂ ಶೂದ್ರರು. ದ್ವಿಜ ಸಂಸ್ಕಾರದ ಬಳಿಕ ಅವರು ದ್ವಿಜರಾಗುತ್ತಾರೆ. ದ್ವಿಜರನ್ನು ಮಾಡುವುದು ಜನಿವಾರ ಧಾರಣೆ ಮತ್ತು ಗಾಯತ್ರಿ ಮಂತ್ರೋಪದೇಶ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೆ ಇವು ಉಂಟು. ಶೂದ್ರರಿಗೆ ಇಲ್ಲ. ಲಿಂಗಾಯತರು ಹಿಂದುಗಳು ಎಂದರೆ ಆಗ ಜನಿವಾರ ಧಾರಣೆ, ಉಪನಯನ, ಗಾಯತ್ರಿ ಮಂತ್ರೋಪದೇಶವಿಲ್ಲದ ಕಾರಣ ಅವರು ಶೂದ್ರ ವರ್ಣದಲ್ಲಿ ಸೇರ ಬೇಕಾಗುವುದು. ಒಂದು ಸ್ವತಂತ್ರ ಧರ್ಮಾನುಯಾಯಿಗಳಾದ ಶರಣರನ್ನು ಹಿಂದು ಧರ್ಮದೊಳಕ್ಕೆ ಸೇರಿಸಿ ಶೂದ್ರ ವರ್ಣೀಯರ ಸ್ಥಾನದಲ್ಲಿ ಇಡುವ ಡಾ|| ಚಿದಾನಂದ ಮೂರ್ತಿಯಂಥವರ ಪ್ರಯತ್ನವು ಹಾಸ್ಯಾಸ್ಪದ. ಒಕ್ಕಲಿಗರು, ಕುರುಬರು, ಕುಂಬಾರರು, ಮಡಿವಾಳರು, ಇತ್ಯಾದಿ ಇತ್ಯಾದಿ ಶ್ರಮಿಕ ವರ್ಗಗಳು ಶೂದ್ರ ವರ್ಣೀಯರಾಗಿ ಉಳಿದು ಧಾರ್ಮಿಕ ಹಕ್ಕುಗಳಿಂದ ವಂಚಿತರಾಗಿರುವುದು ಅನಿವಾರ್ಯ ಸತ್ಯವಾಗಿದೆ.

5. ದ್ವಿಜರಿಗೆ ಮಾತ್ರ ಉಪನಯನ

ವೈದಿಕ (ಹಿಂದು) ಧರ್ಮದ ಮುಖ್ಯ ಸಂಸ್ಕಾರವಾದ ಉಪನಯನವು ಕೇವಲ ದ್ವಿಜವರ್ಣಗಳವರಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೆ ಮಾತ್ರ ಉಂಟು. ಉಪನಯನದ ಮುಖ್ಯ ವಿಧಿ ಎಂದರೆ ಯಜ್ಞೋಪವೀತ ಧಾರಣೆ ಮತ್ತು ಗಾಯತ್ರಿ ಮಂತ್ರೋಪದೇಶ. ಮೂರು ವರ್ಣಗಳವರಿಗೆ ಮಾತ್ರ ಈ ದ್ವಿಜ ಸಂಸ್ಕಾರ ಉಂಟು. ಚತುರ್ವರ್ಣೀಯರಾದ ಶೂದ್ರರು ಮತ್ತು ಪಂಚಮ ವರ್ಣೀಯರಾದ ಅಸ್ಪೃಶ್ಯರಿಗೆ ದ್ವಿಜ ಸಂಸ್ಕಾರವಿಲ್ಲ. ಎಲ್ಲ ವರ್ಣಗಳ ಮಹಿಳೆಯರನ್ನು ಶೂದ್ರರು ಎಂದು ಪರಿಗಣಿಸಲಾಗುವುದು. ಅವರಿಗೆ ಸಹ ದ್ವಿಜ ಸಂಸ್ಕಾರವಿಲ್ಲ.

ಲಿಂಗಾಯತ ಧರ್ಮವು ಕೇವಲ ಭವಿ -ಭಕ್ತ, ಮಾನವ -ಶರಣ ಎಂಬ ಎರಡೇ ಎರಡು ವರ್ಗಗಳನ್ನು ಮಾಡುತ್ತದೆ. ಭವಿಯು ಸಂಸ್ಕರದಿಂದ ಭಕ್ತನಾಗುವನು. ಮರೆವಿನ ಮಾನವನು ಅರಿವು -ಅನುಭಾವಗಳಿಂದ ಶರಣನಾಗುವನು. ಹುಟ್ಟುತ್ತ ಎಲ್ಲರೂ ಮಾನವರಾಗಿ ಹುಟ್ಟುವರು, ಸಂಸ್ಕಾರ ಅರಿವು-ಅನುಭಾವಗಳಿಂದ ಶರಣರಾಗುವರು.

ಉಂಬ ಬಟ್ಟಲು ಬೇರೆ ಕಂಚಲ್ಲ; ಕಾಂಬ ದರ್ಪಣ ಬೇರೆ ಕಂಚಲ್ಲ
ಭಾಂಡ ಒಂದೇ ಭಾಜನ ಬೇರೆ ; ಬೆಳಗೇ ಕನ್ನಡಿ ಎನಿಸಿಹುದಯ್ಯ
ಅರಿದೊಡೆ ಶರಣ ಮರೆದೊಡೆ ಮಾನವ
ಮರೆಯದೆ ಪೂಜಿಸು ಲಿಂಗದೇವನ

ವೈದಿಕ ಹಿಂದು ಧರ್ಮದಲ್ಲಿ ಹಿಂದುಯೇತರರನ್ನು ಒಳಗೆ ಬರಮಾಡಿಕೊಳ್ಳಲು ದೀಕ್ಷಾ ಸಂಸ್ಕಾರ ಎಂಬ ಬಾಗಿಲೇ ಇಲ್ಲ. ಹೀಗಾಗಿ ಮತಾಂತರಗೊಂಡು ಅನೇಕ ಜನರು ಹೊರಗೆ ಹೋಗುತ್ತಾರೆ. ಸ್ವಯಂ ಪ್ರೇರಣೆಯಿಂದ ಹಿಂದು ಧರ್ಮದೊಳಕ್ಕೆ ಬರುತ್ತೇವೆ ಎನ್ನುವ ಹಿಂದುಯೇತರರು ಒಳಗೆ ಬರಲು ಅವಕಾಶವೇ ಇಲ್ಲ. ಹೊರಗೆ ಹೋದ ಮತಾಂತರಿಗಳು ಸಹ ಪುನಃ ಮಾತೃಧರ್ಮಕ್ಕೆ ಬರುತ್ತೇವೆ ಎಂದರೆ ಅದಕ್ಕೂ ಅವಕಾಶವಿಲ್ಲ.

ಲಿಂಗಾಯತ ಧರ್ಮದ ಸಂಸ್ಕಾರ ಇಷ್ಟಲಿಂಗ ದೀಕ್ಷೆ, ಇದು ಎಲ್ಲರಿಗೂ ಲಭ್ಯ. ಗುರುಗಳು ಇಷ್ಟಲಿಂಗವನ್ನು ನೀಡಿ ಮಂತ್ರೋಪದೇಶ ಮಾಡಿ, ಧರ್ಮದೊಳಕ್ಕೆ ಸ್ವೀಕರಿಸುವರು. ಜಾತಿ ಮತ ಪಂಥ ಧರ್ಮ ಲಿಂಗ ಭೇದವಿಲ್ಲದೆ ಎಲ್ಲ ಮಾನವರಿಗೂ ಇದು ಲಭ್ಯವಿದೆ. ದೀಕ್ಷೆಯ ನಂತರ ಎಲ್ಲರೂ ಸಮಾನರು ಎಂಬ ಭಾವವಿದೆ.

6. ಸ್ತ್ರೀಯರಿಗೆ ಉಪನಯನವಿಲ್ಲ

ಎಲ್ಲ ವರ್ಣಗಳ ಸ್ತ್ರೀಯರನ್ನು ಶೂದ್ರರೆಂದೇ ಪರಿಗಣಿಸಲಾಗಿದೆ. ಶೂದ್ರ ಪುರುಷರಿಗೆ ಉಪನಯನವನ್ನು ನಿರಾಕರಿಸಿದಂತೆ ಸ್ತ್ರೀಯರಿಗೆ ಶೂದ್ರರೆಂದು ಕರೆದು ಉಪನಯನ ನಿರಾಕರಿಸಲಾಗಿದೆ. ಶ್ರೀ ದಯಾನಂದ ಸರಸ್ವತಿಯವರು ಸುಧಾರಣೆ ತರಲು ಬಯಸಿದರು, ವೇದಗಳ ಕಾಲದಲ್ಲಿ ಮಹಿಳೆಯರಿಗೆ ಉಪನಯನದ ಮೂಲಕ ಯಜ್ಞೋಪವೀತವನ್ನು ನೀಡಲಾಗುತ್ತಿತ್ತು ಎಂದು ಹೇಳಿ ಅವರು ಮಹಿಳೆಯರಿಗೆ ಮತ್ತು ಶೂದ್ರ ವರ್ಣೀಯ ಪುರುಷರಿಗೆ ಸಹ ಉಪನಯನದ ಅವಕಾಶವನ್ನು ಕಲ್ಪಿಸಿದರಾದರೂ ಸಂಪ್ರದಾಯವಾದಿಗಳನ್ನು ಅವರು ಎದುರು ಹಾಕಿಕೊಳ್ಳಬೇಕಾಯಿತು. ಮತ್ತು ಈ ಚಳುವಳಿ ಬಲಗೊಂಡು ಬೆಳೆಯಲೇ ಇಲ್ಲ.

ಮಹಿಳೆಯು ಮಾನಸಿಕ ರಜೋಕ್ರಿಯೆಗೆ ಒಳಗಾಗುವಳು ಎಂಬ ಕಾರಣದಿಂದ ಸ್ತ್ರೀಗೆ ಉಪನಯನ ಮಾಡಲಾಗುತ್ತಿಲ್ಲ; ಆಕೆಯನ್ನು ಎರಡನೆಯ ದರ್ಜೆಯ ಪ್ರಜೆಯನ್ನಾಗಿ ಕಾಣಲಾಗುತ್ತಿದೆ. ಬ್ರಹ್ಮಸೂತ್ರಕ್ಕೆ ಭಾಷ್ಯಗಳನ್ನು ಬರೆದಿರುವ ಆಚಾರ್ಯರುಗಳಾದ ಶಂಕರ, ರಾಮಾನುಜ ಮತ್ತು ಮಧ್ವರು ಶೂದ್ರರಿಗೆ ಮೋಕ್ಷವಿಲ್ಲ ಎಂಬುದನ್ನು ಪ್ರತಿಪಾದಿಸಿದರು.

ಶೂದ್ರರಿಗೂ ಸ್ತ್ರೀಯರಿಗೂ ಮೋಕ್ಷವಿಲ್ಲ,
ಏಕೆಂದರೆ, ಅವರಿಗೆ ಉಪನಯನವಿಲ್ಲ
ಯಜ್ಞಯಾಗಾದಿಗಳನ್ನು ಮಾಡುವ ಅಧಿಕಾರವಿಲ್ಲ
ಏಕೆಂದರೆ ಅವರಿಗೆ ಉಪನಯನವಿಲ್ಲ
(ಬಾದರಾಯಣನ ಬ್ರಹ್ಮಸೂತ್ರಗಳು. I iii ಸೂತ್ರಗಳು 34-38)

ಇದರಲ್ಲಿ ಸೂತ್ರ 38, ಮನುಸ್ಮೃತಿ ಮುಂತಾದ ಸ್ಮೃತಿಗಳಲ್ಲಿ ಶೂದ್ರರಿಗೆ ವೇದ ಶ್ರವಣ - ಅಧ್ಯಯನ - ಅರ್ಥಗಳನ್ನು ನಿಷೇಧಿಸಿರುವುದರಿಂದ ಅವರಿಗೆ ಬ್ರಹ್ಮವಿದ್ಯೆಯಿಲ್ಲ.

7. ಹಿಂದು ಧರ್ಮ -ಬಹುದೇವತೋಪಾಸನೆ

ಇಡೀ ಜಗತ್ತಿನಲ್ಲಿ ಬಹುದೇವತೋಪಾಸನೆ ಆಚರಿಸುವ ಧರ್ಮ ಹಿಂದು ಮಾತ್ರ. ಪುರಾತನ ಗ್ರೀಕ್ ದೇಶ ಅರಬ್ ದೇಶ ಮುಂತಾದಲ್ಲಿ ಬುಡಕಟ್ಟು ದೇವರುಗಳ ಉಪಾಸನೆ ಬಹು ಹಿಂದಿನ ಕಾಲದಲ್ಲಿ ಇದ್ದಿತಾದರೂ ಕ್ರೈಸ್ತ, ಇಸ್ಲಾಂ ಧರ್ಮಗಳು ಹಬ್ಬಿದ ನಂತರ ವಿವಿಧ ಆಕಾರಗಳ ಅನೇಕ ದೇವತೆಗಳ ಪೂಜೆ ನಿಂತು ಒಬ್ಬ ದೇವನ ಪರಿಕಲ್ಪನೆ ಬಂದಿತು. ನಂತರ ಕೇವಲ ಒಬ್ಬನೇ ದೇವನ ಆರಾಧನೆ ಮಾತ್ರ ಉಳಿದು ಬಹುದೇವತೆಗಳ ಉಪಾಸನೆ ನಿಂತು ಹೋಯಿತು. ಆದರೆ ಹಿಂದು ಧರ್ಮದಲ್ಲಿ ಏಕದೇವನ ಪರಿಕಲ್ಪನೆ ಉಪನಿಷತ್ತುಗಳ ಕಾಲದಲ್ಲೇ ರೂಪುಗೊಂಡರೂ ಸಹ ಅದು ಬೆಳೆದು, ದೃಢಗೊಳ್ಳದೆ ಕೇವಲ ಬಹು ದೇವತೋಪಾಸನೆಯೇ ಬೆಳೆದು ಬಲಗೊಂಡು, ಕಳೆ ಜಾಸ್ತಿಯಾದಾಗ ಬೆಳೆಯು ನಾಶವಾಗುವಂತೆ ಮೂಢ ನಂಬಿಕೆಗಳ ಸಂತೆಯ ಮಧ್ಯೆ ನಿಜವಾದ ದೇವರ ಪರಿಕಲ್ಪನೆಯೇ ಜನರ ಮನದಿಂದ ಮರೆಯಾಯಿತು.

ಹಿಂದುಗಳಲ್ಲಿರುವ ಉಪಾಸ್ಯವಸ್ತುಗಳನ್ನು 9 ಪ್ರಕಾರವಾಗಿ ವಿಂಗಡಿಸಬಹುದು.

1. ಭೂತ ಪ್ರೇತಗಳ ಪೂಜೆ

2. ಪೌರಾಣಿಕ ದೇವತೆಗಳ ಪೂಜೆ
3. ಪಂಚಭೂತಗಳ ಪೂಜೆ
4. ಗಿಡಮರಗಳ ಪೂಜೆ
5. ಪ್ರಾಣಿಗಳ ಪೂಜೆ
6. ಪ್ರೇತಾತ್ಮಗಳ ಪೂಜೆ
7. ಗುರು (ಸಂತರ) ಪೂಜೆ
8. ವಿಭೂತಿ ಪೂಜೆ
9. ದೇವ ಪೂಜೆ

ಅತ್ಯಂತ ಕೆಳಮಟ್ಟದ, ಭಯಾಧಾರಿತವಾದ ಭೂತ ಪ್ರೇತಗಳ ಪೂಜೆಯನ್ನು ಮಾಡಲಾಗುವುದು; ಅವುಗಳಿಗೆ ಕೋಳಿ, ಕುರಿ ಮುಂತಾದುವನ್ನು ಬಲಿ ಕೊಡುವ ಕ್ಷುದ್ರ ಆಚರಣೆಗಳು ಹಿಂದು ಧರ್ಮದಲ್ಲಿವೆ.

ಕಾಲ್ಪನಿಕ ಪೌರಾಣಿಕ ದೇವತೆಗಳ ಸಂತೆಯಂತೂ ಲೆಕ್ಕಕ್ಕೇ ಸಿಗದು. ನವ ಗ್ರಹಗಳು, ಲಕ್ಷ್ಮಿ ಸರಸ್ವತಿಯಂತಹ ದೇವತೆಗಳು ಶುದ್ಧ ಕಾಲ್ಪನಿಕ. ಇನ್ನು ಕೆಲವು ದೇವತೆಗಳನ್ನು ಒಂದು ಕಾಲದಲ್ಲಿ ಅವರು ಐತಿಹಾಸಿಕವಾಗಿ ಇದ್ದಿರಬಹುದು ಎಂದು ನಂಬಿದರೂ ಅವುಗಳ ಚರಿತ್ರೆ ಅತ್ಯಂತ ಕೀಳುಮಟ್ಟದ್ದು. ಉದಾ: ಇಂದ್ರ, ತುಳಸಿ ಪೂಜೆಯ ಹಿಂದಿರುವ ವಿಷ್ಣುವಿನ ಚರಿತ್ರೆ.

ಹಿಂದು ಧರ್ಮದಲ್ಲಿ ಎರಡು ಬಗೆಯ ಆಚರಣೆಗಳುಂಟು. 1. ವೇದ ಆಗಮ ಮುಂತಾದ ಶಾಸ್ತ್ರಿಯ ಕೃತಿಗಳಿಂದ ಬಳುವಳಿಯಾಗಿ ಪಡೆದ ಶಾಸ್ತ್ರೀಯ (Classical) ಆಚರಣೆಗಳು. 2. ಬುಡಕಟ್ಟು (Tribes) ಮತ್ತು ಬಣ (Clans) ಗಳಿಂದ ಪಡೆದ ಕ್ಷುದ್ರ (Petty) ಆಚರಣೆಗಳು. ಉದಾಹರಣೆಗೆ: ಹೋಮ-ಹವನ ಶಾಸ್ತ್ರೀಯ ಆಚರಣೆಯಾದರೆ ಗಿಡ ಮರ ಬಳ್ಳಿಗಳ ಪೂಜೆ ಬಣಾಚರಣೆ. ಈ ಎರಡನ್ನೂ ಲಿಂಗಾಯತ ಧರ್ಮವು ನಿಷೇಧಿಸಿದೆ. ಅಗ್ನಿ ಪೂಜೆ, ಅಗ್ನಿ ಸಾಕ್ಷಿ, ಇವೆಲ್ಲವನ್ನು ದೂರವಿಡಲಾಗಿದೆ. ಅದೇ ರೀತಿ ತುಳಸಿ-ಬಿಲ್ವ, ಆಲದ ಮರ-ಅರಳಿ ಗಿಡ, ಎಕ್ಕೆ-ಬನ್ನಿಗಿಡ ಮುಂತಾದ ಗಿಡಮರ ಪೂಜೆಗಳನ್ನು ನಿರಾಕರಿಸಲಾಗಿದೆ. ಹಿಂದುಗಳಲ್ಲಿ ಬಹು ಶ್ರದ್ಧೆಯಿಂದ ಮಾಡುವ ಗೋವು, ನಾಗ, ಇಲಿ, ಕೋತಿ, ಆನೆ ಮುಂತಾದ ಪ್ರಾಣಿಗಳ ಪೂಜೆಯನ್ನು ಲಿಂಗಾಯತ ಧರ್ಮದಲ್ಲಿ ನಿಷೇಧಿಸಲಾಗಿದೆ.

ಹಿಂದುಗಳಲ್ಲಿ ಬಹಳ ಪ್ರಚಲಿತವಿರುವುದು ಪ್ರೇತಾತ್ಮ ಪೂಜೆ ಅರ್ಥಾತ್ ಪಿತೃ ಪೂಜೆ. ಹಿಂದೆ ಸತ್ತು ಹೋದವರಿಗೆಲ್ಲ ಸ್ವರ್ಗ ಸಿಗಲಿ ಎಂದು ಪುಣ್ಯ ತಿಥಿ, ಪಿಂಡದಾನ ಮಾಡುವ ಪರಿಪಾಠ ಉಂಟು. ಪಿತೃ ಪಕ್ಷ ಎಂಬ ವಿಶೇಷ ಸಮಯವನ್ನು ಅದಕ್ಕಾಗಿ ನಿಗದಿ ಮಾಡಿದ್ದು ಆಗ ವಿಶೇಷ ಶ್ರಾದ್ಧಾದಿ ವಿಧಿಗಳನ್ನು ಮಾಡಲಾಗುವುದು. ಗ್ರಾಮೀಣ ಭಾಷೆಯಲ್ಲಿ ಹಿರೇರ ಹಬ್ಬ ಎಂದು ಕರೆದು ಆಚರಿಸುವರು. ಇವೆಲ್ಲವನ್ನೂ ಲಿಂಗಾಯತ ಧರ್ಮವು ನಿಷೇಧಿಸಿದೆ.

ವೈಚಾರಿಕ ಧರ್ಮವಾದ ಲಿಂಗಾಯತ ಧರ್ಮವು ಕೇವಲ ಜಂಗಮ (ಸಂತರ) ಪೂಜೆಗೆ ಮಾನ್ಯತೆ ನೀಡಿ ದೇವನ ಪ್ರತಿನಿಧಿ ಜಂಗಮ ಎಂದು ಗೌರವಿಸುತ್ತದೆ. ಗುರು ಬಸವಣ್ಣನವರು, ಅಲ್ಲಮ ಪ್ರಭುದೇವರು, ಸಿದ್ಧರಾಮೇಶ್ವರರು ಮುಂತಾದ ಮಹಾನುಭಾವರನ್ನು ವಿಭೂತಿ ಪುರುಷರೆಂದು ಗೌರವಿಸಿ, ಪೂಜಿಸುತ್ತದೆ. ದೇವರು ನಿರಾಕಾರನೆಂದು ಸಾರಿ, ಸೃಷ್ಟಿಕರ್ತ ಲಿಂಗದೇವನ ಕುರುಹಾಗಿ ಇಷ್ಟಲಿಂಗವನ್ನು ಧರ್ಮಗುರು ಬಸವಣ್ಣನವರು ನೀಡಿದ್ದು ಇದರ ಹೊರತಾಗಿ ಬೇರೆ ಏನನ್ನು ಪೂಜಿಸಲು ಅನುಮತಿ ನೀಡುವುದಿಲ್ಲ. ಹಿಂದು ದೇವತೆಗಳಾದ ಗಣಪತಿ, ರಾಮ, ಕೃಷ್ಣ, ಹನುಮಂತ, ವಿಷ್ಣು, ದೇವಿ, ಲಕ್ಷ್ಮಿ, ಸರಸ್ವತಿ ಈ ಯಾವ ದೇವತೆಯನ್ನು ಪೂಜಿಸುವುದಿಲ್ಲ. ಹಿಂದು ತ್ರಿಮೂರ್ತಿಗಳಲ್ಲಿ ಒಬ್ಬನಾದ ಮಹೇಶ್ವರನನ್ನು ಸಹ ಆರಾಧಿಸುವುದಿಲ್ಲ. ಇದನ್ನು ಸ್ಪಷ್ಟವಾಗಿ ಲಿಂಗಾಯತ ಧರ್ಮದ ಸಂವಿಧಾನವಾದ ವಚನ ಸಾಹಿತ್ಯದಲ್ಲಿ ಹೇಳಲಾಗಿದೆ.

8. ಹಿಂದು ಧರ್ಮವು ತೀರ್ಥ ಕ್ಷೇತ್ರಗಳಲ್ಲಿ ನಂಬಿಕೆ ಇಟ್ಟಿದೆ.

ಹಿಂದು ಧರ್ಮವು ಭೌತಿಕ ಕ್ಷೇತ್ರಗಳಲ್ಲಿ ಅಪಾರ ಶ್ರದ್ಧೆ ಇಟ್ಟಿದೆ. ಕಾಶಿ, ರಾಮೇಶ್ವರ, ಆಯೋಧ್ಯೆ, ತಿರುಪತಿ, ಮಥುರಾ ಮುಂತಾದ ಕ್ಷೇತ್ರಗಳ ದರ್ಶನ ಅತ್ಯಂತ ಪಾವನ. ಇದು ಪಾಪ ನಿವಾರಣೆ ಮಾಡಿ ಪುಣ್ಯವನ್ನು ನೀಡುತ್ತದೆ ಎಂದು ನಂಬಲಾಗುತ್ತದೆ.

ಭಾರತ ದೇಶದಲ್ಲಿ ಹರಿಯುವ ಗಂಗಾ, ಯಮುನಾ, ಕಾವೇರಿ, ತುಂಗಭದ್ರಾ, ಇತ್ಯಾದಿ ನದಿಗಳಲ್ಲಿ, ತೀರ್ಥಕ್ಷೇತ್ರಗಳ ಕಲ್ಯಾಣಿ, ಕೊಳಗಳಲ್ಲಿ ಮುಳುಗುವುದರಿಂದ ಪಾಪ ಕ್ಷಯವಾಗಿ ಪುಣ್ಯ

ಪ್ರಾಪ್ತಿಯಾಗುತ್ತದೆಂದು ನಂಬಲಾಗುತ್ತದೆ. ಕೆಲವು ವಿಶಿಷ್ಟ ದಿನಗಳಂದು, ವಿಶೇಷ ಮೂಹೂರ್ತದಲ್ಲಿ ಅಂಥ ನದಿ, ಪುಷ್ಕರಣಿಗಳಲ್ಲಿ ಮುಳುಗಿ ಎದ್ದರೆ ಅಪಾರ ಪುಣ್ಯ ಪ್ರಾಪ್ತಿ ಎಂದು ನಂಬಲಾಗುತ್ತದೆ. ನದಿಯ ದಂಡೆಯ ಕೊಳಕು ನೀರನಲ್ಲೇ ಸಾವಿರಾರು ಜನರು ಮುಳುಗಿ ಏಳುವುದನ್ನು ಅದೇ ನೀರನ್ನು ತೀರ್ಥವೆಂದು ಕುಡಿಯುವುದನ್ನು ನಾವು ಕಾಣಬಹುದು.

ಲಿಂಗಾಯತ ಧರ್ಮವು ಯಾವುದೇ ಭೌತಿಕ ಸ್ಥಾನವನ್ನು ಸಂದರ್ಶಿಸಿದ ಮಾತ್ರಕ್ಕೆ ಪುಣ್ಯ ಪ್ರಾಪ್ತಿಯಾಗುವುದೆಂದು ನಂಬುವುದಿಲ್ಲ. ಯಾವುದೇ ಭೌತಿಕ ಸ್ಥಾನವಾಗಲೀ ನದಿ, ಪುಷ್ಕರಿಣಿಯಾಗಲಿ ಪವಿತ್ರವೆಂದು ಭಾವಿಸುವುದಿಲ್ಲ. ಭೌತಿಕ ಜಲದಲ್ಲಿ ಮಿಂದ ಮಾತ್ರಕ್ಕೆ ಪಾಪ ನಿವಾರಣೆಯಾಗಿ, ಪುಣ್ಯ ಪ್ರಾಪ್ತಿಯಗುವುದೆಂದು ಭಾವಿಸುವುದಿಲ್ಲ. ವ್ಯಕ್ತಿ ಮಾಡುವ ಕೆಟ್ಟ ಕೆಲಸಗಳಿಂದ ಕಲಂಕಿತನಾಗುವನು, ಪಶ್ಚಾತ್ತಾಪದಿಂದ ಮಾತ್ರ ಶುದ್ಧನಾಗುವನು. ಉತ್ತಮ ಕೆಲಸಗಳಿಂದ ಪುಣ್ಯವಂತನಾಗುವನು ಎಂದು ದೃಢವಾಗಿ ನಂಬುವುದು.

1. ತೊರೆಯ ಮೀವ ಅಣ್ಣಗಳಿರಾ; ತೊರೆಯ ಮೀವ ಸ್ವಾಮಿಗಳಿರಾ
ತೊರೆಯಿಂ ಬೋ, ತೊರೆಯಿಂ ಬೋ;
ಪರನಾರಿಯರ ಸಂಗವ ತೊರೆಯಿಂ ಬೋ !
ಪರಧನದಾಮಿಷವ ತೊರೆಯಿಂ ಬೋ!
ಇವ ತೊರೆಯದೆ ಹೋಗಿ ತೊರೆಯ ಮಿಂದಡೆ,
ಬರುದೊರೆ ಹೋಹುದು, ಲಿಂಗದೇವಾ

2. ಒಬ್ಬರ ಮನವ ನೋಯಿಸಿ,
ಒಬ್ಬರ ಮನೆಯ ಘಾತವ ಮಾಡಿ,
ಗಂಗೆಯಲ್ಲಿ ಮುಳಗಿದಡೇನಾಗುವುದಯ್ಯಾ?
ಚಂದ್ರನು ಗಂಗೆಯ ತಡಿಯಲ್ಲಿದ್ದಡೇನು?
ಕಳಂಕ ಬಿಡದಾಯಿತ್ತಯ್ಯಾ.
ಅದು ಕಾರಣ, ಮನವ ನೋಯಿಸದವನೆ,
ಒಬ್ಬರ ಘಾತವ ಮಾಡದವನೆ,
ಪರಮ ಪಾವನ ನೋಡಾ, ಕಪಿಲ ಸಿದ್ಧ ಮಲ್ಲಿಕಾರ್ಜುನಾ.

3. ನಿತ್ಯ ನೀರ್ಮುಳುಗುವನು। ಹತ್ತಿದಡೆ ಸ್ವರ್ಗವನು।
ಎತ್ತಿ ಜನ್ಮವನು ಜಲದೊಳಿಪ್ಪಾ ಕಪ್ಪೆ।
ಹತ್ತದೇಕೆಂದ ? ಸರ್ವಜ್ಞ

ಶರಣರು, ಜ್ಞಾನಿಗಳು ಪಾದವಿಟ್ಟ, ವಾಸ್ತವ್ಯ ಮಾಡಿರುವ ಸ್ಥಾನಗಳೇ ನಿಜವಾದ ಜಂಗಮ ಕ್ಷೇತ್ರಗಳು ಎಂಬ ಪ್ರತಿಪಾದನೆ ಶರಣರದು. ಆದರೆ ಇದರರ್ಥ ಒಬ್ಬ ವ್ಯಕ್ತಿ ಕೇವಲ ಆ ಸ್ಥಳವನ್ನು ಸಂದರ್ಶಿಸಿದ ಮಾತ್ರಕ್ಕೆ ಪುಣ್ಯವಂತನಾಗುವನು ಎಂಬುದನ್ನು ಲಿಂಗಾಯತ ಧರ್ಮ ಒಪ್ಪದು. ವ್ಯಕ್ತಿಯು ಸ್ವತಃ ಸಾಧನೆ ಮಾಡಿ, ಅಂತರಂಗ ಬಹಿರಂಗ ಶುದ್ಧಿಯನ್ನು ಸಾಧಿಸಬೇಕು.

ಅಯ್ಯಾ, ನಿಮ್ಮ ಶರಣರು ಮೆಟ್ಟಿದ ಧರೆ ಪಾವನವಯ್ಯಾ
ಅಯ್ಯಾ, ನಿಮ್ಮ ಶರಣರಿದ್ದ ಪುರವೆ ಕೈಲಾಸ ಪುರವಯ್ಯಾ
ಅಯ್ಯಾ ನಿಮ್ಮ ಶರಣರು ನಿಂದುದೆ ನಿಜ ನಿವಾಸವಯ್ಯ
ಚನ್ನಮಲ್ಲಿಕಾರ್ಜುನಯ್ಯ, ನಿಮ್ಮ ಶರಣ
ಬಸವಣ್ಣನಿದ್ದ ಕ್ಷೇತ್ರ ಅವಿಮುಕ್ತ ಕ್ಷೇತ್ರವಾಗಿ
ಆನು ಸಂಗನ ಬಸವಣ್ಣನ ಶ್ರೀ ಪಾದಕ್ಕೆ
ನಮೋ ನಮೋ ಎನುತಿರ್ದೆನು.

ಕಲ್ಯಾಣವೆಂಬುದು ಇನ್ನಾರಿಗೆ ಹೋಗ ಬಹುದು ?
ಹೋಗಬಾರದು. ಅಸಾಧ್ಯವಯ್ಯಾ
ಆಸೆ ಆಮಿಷ ಅಳಿದವಂಗಲ್ಲದೆ ಕಲ್ಯಾಣದತ್ತ ಅಡಿಯಿಡಬಾರದು
ಒಳ ಹೊರಗು ಶುದ್ಧನಾದವಂಗಲ್ಲದೆ, ಕಲ್ಯಾಣವ ಹೋಗಬಾರದು,

ನಾನೆಂಬುದ ಹರಿದವಂಗಲ್ಲದೆ, ಕಲ್ಯಾಣವ ಹೋಗಬಾರದು
ಒಳಗೆ ತಿಳಿದು ಹೊರಗೆ ಮರೆದು ಚನ್ನಮಲ್ಲಿಕಾರ್ಜುನಂಗೊಲಿದು
ಉಭಯ ಲಜ್ಜೆಯ ಅಳಿದೆನಾಗಿ
ಕಲ್ಯಾಣವ ಕಂಡು ನಮೋ ನಮೋ ಎನುತಿರ್ದೆನು.

9. ಜ್ಯೋತಿಷ್ಯ, ಮುಹೂರ್ತ, ಜಾತಕದಲ್ಲಿ ನಂಬಿಕೆ.

ಹಿಂದು ಧರ್ಮವು ಜ್ಯೋತಿಷ್ಯವನ್ನು ಬಹಳಷ್ಟು ನಂಬುತ್ತದೆ. ಮಗುವು ಹುಟ್ಟಿದಾಗ ಜಾತಕವನ್ನು ಬರೆಸುವುದು, ಮದುವೆ ಕೂಡಿಸುವಲ್ಲಿ ಜಾತಕ ಹೊಂದಿಸುವುದು, ಶುಭಕಾರ್ಯಗಳಿಗೆ ಮುಹೂರ್ತವನ್ನು ನೋಡುವುದು, ಸಮಯದಲ್ಲಿ ಸಹ ಶ್ರೇಷ್ಠ, ಕನಿಷ್ಠ, ವಿಪತ್ಕಾರಿ ಎಂದು ಲೆಕ್ಕ ಹಾಕುವುದು; ಕಟ್ಟಡ ಕಟ್ಟಿಸುವಾಗ ವಾಸ್ತುವನ್ನು ನೋಡುವುದು, ಗ್ರಹಗಳ ಶಾಂತಿಗಾಗಿ ಹೋಮ ಅಥವಾ ಪೂಜೆಗಳನ್ನು ಮಾಡುವುದು ಹಿಂದೂ ಧರ್ಮದಲ್ಲಿ ಸ್ವಾಭಾವಿಕ. ಆದರೆ ಲಿಂಗಾಯತ ಧರ್ಮ ಇವೆಲ್ಲವನ್ನು ನಿರಾಕರಿಸುತ್ತದೆ.

ಎಮ್ಮವರು ಬೆಸಗೊಂಡರೆ ಶುಭ ಲಗ್ನವೆನ್ನಿರಯ್ಯಾ
ರಾಶಿ ಕೂಟ ಗಣ ಸಂಬಂಧವುಂಟೆಂದು ಹೇಳಿರಯ್ಯಾ
ಚಂದ್ರಬಲ ತಾರಾಬಲ ಉಂಟೆಂದು ಹೇಳಿರಯ್ಯಾ
ನಾಳಿನ ದಿನಕಿಂದಿನ ದಿನ ಲೇಸೆಂದು ಹೇಳಿರಯ್ಯಾ
ಲಿಂಗದೇವನ ಪೂಜಿಸಿದ ಫಲ ನಿಮ್ಮದಯ್ಯಾ!

ಎಲ್ಲರ ಮನಸ್ಸುಗಳು ಒಂದಾದರೆ ಅದು ಉತ್ತಮವಾದ ಹೊಂದಾಣಿಕೆ (ಲಗ್ನ) ಎಂದುಕೊಳ್ಳಬೇಕು.

ಲಗ್ನವೆಲ್ಲಿಯದೊ ವಿಘ್ನವೆಲ್ಲಿಯದೊ ಸಂಗಯ್ಯಾ ?
ದೋಷವೆಲ್ಲಿಯದೊ ದುರಿತವೆಲ್ಲಿಯದೊ, ಸಂಗಯ್ಯಾ
ನಿಮ್ಮ ಮಾಣದೆ ನೆನೆವಂಗೆ ಭವಕರ್ಮವೆಲ್ಲಿಯದೊ
ಲಿಂಗದೇವಯ್ಯಾ?

ಸೃಷ್ಟಿಕರ್ತನು, ಸರ್ವಶಕ್ತನು ಆದ ದೇವರನ್ನು ನಂಬಿದ ಮೇಲೆ ಇನ್ನು ಬೇರೆ ಭಯವೇಕೆ? ಜಗತ್ತೆಲ್ಲ ದೇವನ ಅಧೀನದಲ್ಲಿ ನಡೆಯುವುದಷ್ಟೇ. ಮಾನವ ಕಲ್ಪಿತವಾದ ಜ್ಯೋತಿಷ್ಯ, ವಾಸ್ತು ಇತ್ಯಾದಿ ಭ್ರಮೆಯನ್ನು ಉಂಟು ಮಾಡಿ ವ್ಯಕ್ತಿಯನ್ನು ಮಾನಸಿಕವಾಗಿ ದುರ್ಬಲಗೊಳಿಸುತ್ತವೆ. ಕಾಲದಲ್ಲಿ ಭೇದ ಮಾಡಿ ರಾಹುಕಾಲ, ಗುಳಿಕ, ಯಮಗಂಡಕ ಎಂದೆಲ್ಲ ಭೇದ ಮಾಡುವುದನ್ನು ಗುರು ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರು ಖಂಡಿಸುತ್ತಾರೆ. ಕಾಲದಲ್ಲಿ ಯಾವುದೂ ಒಳ್ಳೆಯದು, ಕೆಟ್ಟದು ಎಂದಿಲ್ಲ. ವ್ಯಕ್ತಿ ಮಾಡುವ ಒಳ್ಳೆಯ, ಕೆಟ್ಟ ಕೆಲಸಗಳಿಂದ ಕಾಲವು ಒಳ್ಳೆಯದು ಕೆಟ್ಟದು ಎನ್ನಿಸಿಕೊಳ್ಳುತ್ತದೆ ಎಂದು ಪ್ರತಿಪಾದಿಸುತ್ತಾರೆ. ಹೀಗೆ ಹಿಂದು ಧರ್ಮವು ನಂಬುವ ಜ್ಯೋತಿಷ್ಯ, ವಾಸ್ತುಗಳನ್ನು ಲಿಂಗಾಯತ ಧರ್ಮವು ನಂಬುವುದಿಲ್ಲ.

10. ಹಿಂದು ಧರ್ಮದ ಮಂದಿರ / ಲಿಂಗಾಯತ ಧರ್ಮದ ಮಂಟಪ

ಹಿಂದು ಧರ್ಮದ ಶ್ರದ್ಧಾ ಕೇಂದ್ರ ದೇವಾಲಯಗಳು ಅರ್ಥಾತ್ ಮಂದಿರಗಳು. ಕ್ರೈಸ್ತರಿಗೆ ಚರ್ಚ್, ಮುಸಲೀಮರಿಗೆ ಮಸೀದಿ, ಸಿಖ್ಖರಿಗೆ ಗುರುದ್ವಾರ, ಬೌದ್ಧರಿಗೆ ವಿಹಾರ, ಜೈನರಿಗೆ ಬಸದಿಗಳು ಇರುವಂತೆ ಹಿಂದುಗಳಿಗೆ ದೇವಾಲಯಗಳು ಅರ್ಥಾತ್ ಮಂದಿರಗಳು ಶ್ರದ್ಧಾ ಕೇಂದ್ರಗಳು. ಗುರು ಬಸವಣ್ಣನವರು ಅನುಭವ ಮಂಟಪ ಎಂಬ ಸಂಸ್ಥೆಯನ್ನು ಮಾದರಿಯಾಗಿ ಮಾಡಿ ತೋರಿಸಿದಂತೆ ಬಸವ ಮಂಟಪಗಳೇ ಶ್ರದ್ಧಾ ಕೇಂದ್ರಗಳು. ಬಸವಾದಿ ಪ್ರಮಥರ ಪರಂಪರೆಯ ಶರಣರಾದ ಸೊಲ್ಲಾಪುರದ ಸಿದ್ಧರಾಮೇಶ್ವರ, ಉಳವಿ ಚನ್ನಬಸವೇಶ್ವರ, ಮಲೆಯ ಮಹದೇಶ್ವರ, ಎಡೆಯೂರು ಸಿದ್ಧಲಿಂಗೇಶ್ವರ, ಜೇವರ್ಗಿಯ ಷಣ್ಮುಖ ಶಿವಯೋಗಿ, ಕಪಿಲ ಧಾರಾದ ಮನ್ಮಥ ಸ್ವಾಮಿ ಮುಂತಾದವರ ಸಮಾಧಿ ಸ್ಥಾನಗಳು, ಸಂಚರಿಸಿದ ಸ್ಥಳಗಳು ಸಹ ಲಿಂಗಾಯತರ ಶ್ರದ್ಧಾ ಕೇಂದ್ರಗಳಾಗಿವೆ. ಹಿಂದು ಮಂದಿರಗಳಲ್ಲಿ ಪೂಜೆಯ ಹಕ್ಕು ಬ್ರಾಹ್ಮಣರದಾಗಿದ್ದರೆ ಲಿಂಗಾಯತರ ಬಸವ ಮಂಟಪಗಳಲ್ಲಿ, ಶರಣರ ಗದ್ದುಗೆಗಳಲ್ಲಿ ಲಿಂಗಾಯತ ದೀಕ್ಷೆ ಪಡೆದ ಯಾವುದೇ ಜನಾಂಗದವರು ಪೂಜೆಯ ಹಕ್ಕನ್ನು ಹೊಂದಿರುತ್ತಾರೆ ಮತ್ತು ಎಲ್ಲರಿಗೂ ಪ್ರವೇಶ ಲಭ್ಯವಿರುತ್ತದೆ. ಬಸವ ಮಂಟಪಗಳು ಕೇವಲ ಭಕ್ತಿಯ ತಾಣಗಳಾಗಿರದೆ ಜ್ಞಾನ ದಾಸೋಹದ ಕೇಂದ್ರಗಳಾಗಿ ಇರುತ್ತವೆ.

11. ಹಿಂದುಗಳಲ್ಲಿ ಮಾಂಸಾಹಾರ -ಸಸ್ಯಾಹಾರ ಎರಡೂ ಉಂಟು.

ಹಿಂದುಗಳಲ್ಲಿ ಕೆಲವು ಸಮುದಾಯಗಳವರು ಸಸ್ಯಾಹಾರಿಗಳಾಗಿದ್ದರೆ ಮತ್ತೆ ಕೆಲವರು ಮಾಂಸಾಹಾರಿಗಳಾಗಿರುತ್ತಾರೆ. ಬ್ರಾಹ್ಮಣರಲ್ಲಿ ಕೆಲವು ಪಂಗಡಗಳವರು, ವೈಶ್ಯ ಸಮುದಾಯದವರು, ಸ್ವಯಂ ಇಚ್ಛೆಯಿಂದ ಸಸ್ಯಾಹಾರಿ ಜೀವನ ವಿಧಾನ ಸ್ವೀಕರಿಸಿದವರು ಮಾತ್ರ ಸಸ್ಯಾಹಾರಿಗಳು. ಬಾಕಿ ಹೆಚ್ಚಿನವರು ಮಾಂಸಾಹಾರಿಗಳು. ಲಿಂಗಾಯತ ಧರ್ಮವು ಕಡ್ಡಾಯವಾಗಿ ಸಸ್ಯಾಹಾರಿ ಜೀವನ ವಿಧಾನವನ್ನು ಬೋಧಿಸಿದೆ.

12. ಹೋಮ -ಹವನ, ಯಜ್ಞ - ಯಾಗ ಹಿಂದು ಧರ್ಮದಲ್ಲಿ ಉಂಟು.

ಹಿಂದು ಧರ್ಮದ ಅತ್ಯಂತ ಮುಖ್ಯ ವಿಧಿ ಹೋಮ - ಹವನ. ಹೋಮ ಕುಂಡವನ್ನು ಮಾಡಿ ಅಗ್ನಿಯ ಮೂಲಕ ಹವಿಸ್ಸನ್ನು ಅರ್ಪಿಸುತ್ತೇನೆ ಎಂಬ ನಂಬಿಕೆಯಿಂದ ಹಲವಾರು ವಸ್ತುಗಳನ್ನು ಹೋಮ (ಯಜ್ಞ) ಕುಂಡದ ಅಗ್ನಿಯಲ್ಲಿ ಹಾಕಲಾಗುವುದು. ಅಜ ಯಾಗದಲ್ಲಿ ಹೋತವನ್ನು, ಅಶ್ವ ಮೇಧಯಾಗದಲ್ಲಿ ಅಶ್ವವನ್ನು, ಗಜ ಯಾಗದಲ್ಲಿ ಆನೆಯನ್ನು - ಹೀಗೆಲ್ಲ ಶಾಸ್ತ್ರೋಕ್ತವಾಗಿ ಬಲಿ ಕೊಡಲಾಗುವುದು.

ಯೋಗಿರಾಜ ಶಿವನು ಯಜ್ಞ ವಿರೋಧಿ. ದಕ್ಷಬ್ರಹ್ಮನ ಯಜ್ಞವನ್ನು ವೀರಭದ್ರ ನಾಶಪಡಿಸಿದ್ದು ಇದಕ್ಕೆ ಸಾಕ್ಷಿ. ರಾಮಾಯಣದಲ್ಲಿ ರಾಕ್ಷಸರು ಹೋಮ, ಯಜ್ಞ ಕುಂಡದಲ್ಲಿ ನೀರನ್ನು ಸುರಿದು ಆರಿಸುತ್ತಾರೆ ಎಂದು ಯಜ್ಞ ರಕ್ಷಣೆಗೆ ರಾಮ ಲಕ್ಷ್ಮಣರನ್ನು ಕರೆದೊಯ್ಯುವ ಸಂಗತಿ ಪ್ರಸ್ತಾಪವಾಗುತ್ತದೆ. ಅವರು ರಾಕ್ಷಸರಲ್ಲ, ಶಿವ ಭಕ್ತರು. ಅವರು ಯಜ್ಞ ವಿರೋಧಿಗಳು ಆದಕ್ಕಾಗಿ ಭಂಗಗೊಳಿಸುತ್ತಿದ್ದರು. ಅಮೂಲ್ಯ ವಸ್ತುಗಳನ್ನು ಹೋಮದ ಮೂಲಕ ಬೆಂಕಿಯಲ್ಲಿ ಹಾಕಿ ಸುಡುವ ಮತ್ತು ಯಜ್ಞದ ಮೂಲಕ ಪ್ರಾಣವಧೆ ಮಾಡುವ ಈ ಧಾರ್ಮಿಕ ವಿಧಿಯನ್ನು ಕ್ರಾಂತಿಪುರುಷ ಬಸವಣ್ಣನವರು ವಿರೋಧಿಸಿದ್ದಾರೆ.

1. ಕಿಚ್ಚು ದೈವವೆಂದು ಹವಿಯನ್ನಿಕ್ಕುವ ಹಾರುವನ ಮನೆಯಲು
ಕಿಚ್ಚೆದ್ದು ಸುಡುವಾಗ ಬಚ್ಚಲ ನೀರು, ಬೀದಿಯ ಧೂಳವ ಹೊಯ್ದು
ಬೊಬ್ಬಿಟ್ಟೆಲ್ಲರ ಕರೆವರಯ್ಯಾ!
ಲಿಂಗದೇವಾ, ವಂದನೆಯ ಮರೆದು ನಿಂದಿಸುತ್ತಿದ್ದರು.

ಅಗ್ನಿಯು ಪಂಚಭೂತಗಳಲ್ಲಿ ಒಂದು. ಇದನ್ನು ದೇವರು ಎಂದು ಆರಾಧಿಸುವ ಸಲುವಾಗಿ ತುಪ್ಪವನ್ನು ಅದರಲ್ಲಿ ಹಾಕಿ ಮಂತ್ರ ಹೇಳುವ ಬ್ರಾಹ್ಮಣ, ಆತನ ಮನೆಯನ್ನು ಬೆಂಕಿ ಸುಡುತ್ತಿದ್ದರೆ ಆಗೇಕೆ ಮಂತ್ರವನ್ನು ಹೇಳುವುದಿಲ್ಲ; ಹಾಳು ಬೆಂಕಿ ಎಂದು ಬೈಯುವುದಲ್ಲದೆ ಬೆಂಕಿ ಆರಿಸಲು ಬಚ್ಚಲ ನೀರು, ಬೀದಿಯ ಧೂಳನ್ನು ಎಸೆಯುವರು. ಅಗ್ನಿ ದೇವರು ತನ್ನ ಮನೆಯನ್ನು ನೈವೇದ್ಯವಾಗಿ ತೆಗೆದುಕೊಂಡಿದ್ದಾನೆ ಎಂದು ಏಕೆ ಭಾವಿಸುವುದಿಲ್ಲ ಎಂದು ಪ್ರಶ್ನಿಸುತ್ತಾರೆ.

2. ಮಾತಿನ ಮಾತಿಂಗೆ ನಿನ್ನ ಕೊಂದಿಹರೆಂದು
ಎಲೆ ಹೋತೆ ಅಳು ಕಂಡಾ !
ವೇದವನೋದಿದವರ ಮುಂದೆ ಅಳು ಕಂಡಾ !
ಶಾಸ್ತ್ರವ ಕೇಳಿದವರ ಮುಂದೆ ಅಳು ಕಂಡಾ !
ನೀನತ್ತುದಕ್ಕೆ ತಕ್ಕುದ ಮಾಡುವ ನಮ್ಮ ಲಿಂಗದೇವ.

ಅಜ ಯಜ್ಞದಲ್ಲಿ ಹೋತವನ್ನು ಬಲಿಕೊಡುವ ಮೂರ್ಖತನವನ್ನು ತೀಕ್ಷ್ಣವಾಗಿ ಖಂಡಿಸಿದ್ದಾರೆ.

3. ಇಟ್ಟೆಯ ಹಣ್ಣ ನರಿ ತಿಂದು ಸೃಷ್ಟಿ ತಿರುಗಿತ್ತೆಂಬಂತೆ
ಮಟ್ಟೆಯನಿಟ್ಟ ದ್ವಿಜರ ಮಾತದೇಕೆ ?
ಹಗಲುಗಾಣದ ಗೂಗೆ ಇರುಳಾಯಿತೆಂದಡೆ,
ಜಗಕ್ಕೆ ಇರುಳಪ್ಪುದೆ ಮರುಳೆ ?
ಹೋಮದ ನೆವದಲ್ಲಿ ಹೋತನ ಕೊಂದು ತಿಂಬ
ಅನಾಮಿಕರೊಡನಾಡಿ ಗೆಲುವುದೇನು; ಲಿಂಗದೇವಾ ?

ದೇವನನ್ನು ಪ್ರಾರ್ಥಿಸಿ, ಪೂಜಿಸಿ, ಧ್ಯಾನಿಸಿ ಆರಾಧಿಸಬೇಕೇ ವಿನಾ ಅಗ್ನಿಗೆ ಹವಿಸನ್ನು ಅರ್ಪಿಸುವ ಮೂಲಕ ಅಲ್ಲ ಎಂದು ಗುರು ಬಸವಣ್ಣನವರು ಖಡಾ ಖಂಡಿತವಾಗಿ ಹೇಳುವರು. ವೇದಗಳ ಜ್ಞಾನ ಕಾಂಡ ಕುರಿತು ಹೆಚ್ಚು ಟೀಕಿಸಿಲ್ಲವಾದರೂ ಕರ್ಮಕಾಂಡ ಕುರಿತು ತೀಕ್ಷ್ಣವಾಗಿ ಟೀಕಿಸಿದ್ದಾರೆ.

ಈ ಯಜ್ಞ-ಯಾಗಾದಿಗಳು ದ್ವಿಜ ವರ್ಣದವರು ಮಾಡುವ ಧಾರ್ಮಿಕ ವಿಧಿಗಳಾಗಿದ್ದರೆ ಮಾರಿ, ದುರ್ಗಿ, ಕಾಳಿ ಮುಂತಾದ ಉಗ್ರದೇವತೆಗಳಿಗೆ ಕುರಿ, ಕೋಣ, ಕೋಳಿಗಳನ್ನು ಬಲಿಗೊಡುವ ಕ್ರೂರ ಸಂಪ್ರದಾಯವು ಹಿಂದು ಧರ್ಮದಲ್ಲಿದೆ. ಇದನ್ನು ಸಹ ಲಿಂಗಾಯತ ಧರ್ಮವು ಖಂಡಿಸುತ್ತದೆ. ಇಂಥ ಮುಗ್ಧ ಮೂಕ ಪ್ರಾಣಿಗಳನ್ನು ಕೊಂದು ಸೃಷ್ಟಿಕರ್ತನ ಕೋಪಕ್ಕೆ ಪಾತ್ರರಾಗಬೇಕಾಗುತ್ತದೆ ಎಂದು ಎಚ್ಚರಿಕೆ ನೀಡುತ್ತದೆ.

ಕುರಿ ಸತ್ತು ಕಾವುದೇ ಹರ ಮುಳಿದವರ? ಎಂದು ಪ್ರಶ್ನಿಸಿ, "ಕುರಿ ಬೇಡ ಮರಿ ಬೇಡ ಬರಿಯ ಪತ್ರೆಯ ತಂದು ಪೂಜಿಸು ಲಿಂಗದೇವನ" ಎಂದು ಬೋಧೆ ಮಾಡುತ್ತದೆ.

13. ವಿವಾಹದಲ್ಲಿ ಅಗ್ನಿ ಸಾಕ್ಷಿ, ಸಪ್ತಪದಿ, ಪೌರೋಹಿತ್ಯ ಉಂಟು

ವೈದಿಕ ಧರ್ಮವು ಅಗ್ನಿ ಸಾಕ್ಷಿಯನ್ನು ನಂಬುತ್ತದೆ. ಲಿಂಗಾಯತರಲ್ಲಿ ಅಗ್ನಿಗೆ ಪ್ರಾಮುಖ್ಯತೆ ಇಲ್ಲ. ವೈದಿಕ ಧರ್ಮದಲ್ಲಿ ಅಗ್ನಿ ಸಾಕ್ಷಿಗೆ ಬಹಳ ಮಹತ್ವ ಕೊಡಲಾಗಿದೆ. ಎಲ್ಲ ಧಾರ್ಮಿಕ ವಿಧಿ-ವಿಧಾನಗಳಲ್ಲಿ ಹೋಮ-ಹವನ ಮಾಡುವುದಲ್ಲದೆ ವಿವಾಹದಲ್ಲಿ ಅಗ್ನಿ ಸಾಕ್ಷಿಯೇ ಮುಖ್ಯ ವಿಧಿ. ಲಿಂಗಾಯತ ಧರ್ಮವು ಅಗ್ನಿ ಸಾಕ್ಷಿಯನ್ನು ಪ್ರತಿಪಾದಿಸುವುದಿಲ್ಲ. ವಿವಾಹದಲ್ಲಿ ಸಪ್ತಪದಿ ಇಲ್ಲ. ಗುರು ಲಿಂಗ ಜಂಗಮ ಸಾಕ್ಷಿಯಾಗಿ ವಿವಾಹವನ್ನು ನೆರವೇರಿಸಲಾಗುವುದು.

14. ಹಿಂದು ಧರ್ಮದಲ್ಲಿ ದ್ವಿಜರ ಶವಗಳನ್ನು ಸುಡುವರು

ಹಿಂದು ಧರ್ಮೀಯರ ಶವಗಳನ್ನು ಅಗ್ನಿಯಲ್ಲಿ ದಹಿಸಲಾಗುವುದು. ಲಿಂಗಾಯತರಲ್ಲಿ ಶವಗಳನ್ನು ಹುಗಿಯಲಾಗುವುದು. ಇದರ ಉದ್ದೇಶ ಪಂಚಭೂತಗಳಲ್ಲಿ ಪಂಚಭೂತಾತ್ಮಕ ಶರೀರವನ್ನು ವಿಲೀನಗೊಳಿಸುವುದು, ಪ್ರಕೃತಿಯಿಂದ ಪಡೆದ ಕಾಯವನ್ನು ಪ್ರಕೃತಿಗೆ ಸಲ್ಲಿಸಿ, ಶುದ್ಧೀಕರಣಗೊಂಡ ಅಂಗ (ಆತ್ಮ)ವನ್ನು ಸಚ್ಚಿದಾನಂದ ನಿತ್ಯ ಪರಿಪೂರ್ಣ ಲಿಂಗ (ಪರಮಾತ್ಮ)ದೇವನೊಡನೆ ಸಮರಸ (ವಿಲೀನ) ಮಾಡುವುದೇ ಲಿಂಗಾಯತ ಧರ್ಮದ ಶೂನ್ಯ ಸಿದ್ಧಾಂತದ ಗುರಿ.

15. ಪುರೋಹಿತನ ಮೂಲಕ ಪೂಜೆ

ವೇದೋಕ್ತ ಹಿಂದು ಧರ್ಮದಲ್ಲಿ ಪೂಜಾರಿಯ ಮೂಲಕ ಪೂಜೆ ನಡೆಯುತ್ತದೆ. ಶಾಸ್ತ್ರೀಯ ಶಿಷ್ಟ ದೇವತೆಗಳ ಪೂಜೆಯನ್ನು ಬ್ರಾಹ್ಮಣನಿಗೆ ಮಾತ್ರ ಮಾಡುವ ಅಧಿಕಾರವಿದೆ. ಪೂಜಾರಿ ಪೂಜಿಸುತ್ತಾನೆ ಭಕ್ತರು ದರ್ಶನ ತೀರ್ಥ ಪ್ರಸಾದ ಪಡೆಯುತ್ತಾರೆ. ಲಿಂಗಾಯತ ಧರ್ಮದಲ್ಲಿ ಭಕ್ತನೇ ನೇರವಾಗಿ ಗುರು-ಲಿಂಗ-ಜಂಗಮದ ಪೂಜೆ ಮಾಡಿ, ಕರುಣೋದಕ ಕರುಣ ಪ್ರಸಾದ ಪಡೆದುಕೊಳ್ಳುತ್ತಾನೆ. ವಿಧವೆ-ಮುತ್ತೈದೆ ಎಂಬ ಭೇದ ಸಹ ಇಲ್ಲದೆ ಪೂಜಿಸಲು ಅವಕಾಶ ಉಂಟು.

ತನ್ನಾಶ್ರಯದ ಸತಿಸುಖವನ್ನು, ತಾನುಂಬ ಊಟವನು
ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ?
ತನ್ನ ಲಿಂಗಕ್ಕೆ ಮಾಡುವ ನಿತ್ಯ ನೇಮವ ತಾ ಮಾಡಬೇಕಲ್ಲದೆ
ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ?
ಕೆಮ್ಮನೆ ಉಪಚಾರಕ್ಕೆ ಮಾಡುವರೆಲ್ಲರು
ನಿಮ್ಮನೆತ್ತ ಬಲ್ಲರು ಲಿಂಗದೇವಾ?

16. ಹಿಂದು ಧರ್ಮದ ಭಿನ್ನ ವರ್ಣ, ಜಾತಿಗಳವರ ಮಧ್ಯೆ ವಿವಾಹವಿಲ್ಲ.

ವೈದಿಕ ಹಿಂದು ಧರ್ಮದಲ್ಲಿ ವರ್ಣಗಳು ನಾಲ್ಕು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ. ಜಾತಿಗಳು ನೂರಾರು. ವಿಭಿನ್ನ ವರ್ಣ ಹಾಗೂ ಜಾತಿಗಳವರ ಮಧ್ಯೆ ವೈವಾಹಿಕ ಸಂಬಂಧವಿಲ್ಲ. ವರ್ಣ ಮತ್ತು ಜಾತಿಗಳನ್ನೊಪ್ಪದ ಲಿಂಗಾಯತ ಧರ್ಮವು ಯಾರಿಗೆ ಬೇಕಾದರೂ ದೀಕ್ಷೆ ನೀಡಿ ವಿವಾಹ ಸಂಬಂಧವನ್ನು ಒಪ್ಪಿಕೊಳ್ಳುವುದು.

17. ಹುಟ್ಟಿನಿಂದ ಹಿಂದು, ಇತರರ ಸ್ವೀಕಾರವಿಲ್ಲ.

ಹಿಂದು ಧರ್ಮದ ಅನುಯಾಯಿತ್ವ ಹುಟ್ಟಿನಿಂದ ಬರುತ್ತದೆ; ಹಿಂದುಯೇತರರನ್ನು ಹಿಂದುಗಳನ್ನಾಗಿ ಧರ್ಮಾಂತರ ಮಾಡಲು ಯಾವುದೇ ದೀಕ್ಷೆ, ಮಂತ್ರೋಪದೇಶ ಇಲ್ಲ. ದ್ವಿಜ ಲಕ್ಷಣಗಳಾದ ಜನಿವಾರವನ್ನು, ಗಾಯಿತ್ರಿ ಮಂತ್ರೋಪದೇಶವನ್ನು ನೀಡಲಾಗುವುದಿಲ್ಲ. ಲಿಂಗಾಯತ ಧರ್ಮದಲ್ಲಿ ಇಷ್ಟಲಿಂಗ ದೀಕ್ಷೆ ಸಂಸ್ಕಾರವಿದೆ. ಗುರುವು ಲಿಂಗದೀಕ್ಷೆಯ ಮೂಲಕ ಯಾರನ್ನು ಬೇಕಾದರೂ ಲಿಂಗಾಯತ ಸಮಾಜದೊಳಕ್ಕೆ ತೆಗೆದುಕೊಳ್ಳಬಹುದು. ಹಾಗೆ ಬಂದವರ ಮಧ್ಯೆ ಊಟೋಪಚಾರ ಮತ್ತು ವಿವಾಹ ಸಂಬಂಧ ಎರಡೂ ನಡೆಯುತ್ತವೆ.

18. ಹಿಂದು ಧರ್ಮ ಪಂಚ ಸೂತಕಗಳನ್ನು ನಂಬಿ ಆಚರಿಸುತ್ತದೆ.

ಜನನವಾದ ಮನೆಯಲ್ಲಿ ಸೂತಕ, ಮರಣವಾದವರ ಮನೆಯಲ್ಲಿ ಸೂತ, ಪರಸ್ಪರ ಭಿನ್ನ ಜಾತಿಯವರು ಮುಟ್ಟಿದರೆ (ಮೈಲಿಗೆ) ಸೂತಕ, ಮಹಿಳೆ ಮುಟ್ಟಾದಾಗ ರಜೋ ಸೂತಕ, ಉಚ್ಚಿಷ್ಟ ಸೂತಕ - ವಸ್ತುಗಳು ಎಂಜಲಾಗುತ್ತವೆ, ಮಡಿ ಕೆಡುತ್ತದೆ ಎಂಬ ಭ್ರಾಂತಿಯ ನಂಬಿಕೆ ಹಿಂದುಗಳಲ್ಲಿದೆ. ಲಿಂಗಾಯತ ಧರ್ಮವು ಈ ಸೂತಕವನ್ನು ನಂಬುವುದಿಲ್ಲ.

19. ಪಾಪಕ್ಕೆ ಪ್ರಾಯಶ್ಚಿತ್ತವಿದೆ.

ಕೆಲವೊಂದು ಘಟನೆ ನಡೆದಾಗ ಪಾಪವು ಸಂಭವಿಸಿತು ಎಂಬ ಭಾವ ಉಂಟಾದಾಗ ಪ್ರಾಯಶ್ಚಿತ್ತವಾಗಿ ಕೆಲವು ಪೂಜಾದಿ ವ್ರತಗಳನ್ನು ಆಚರಿಸುವ, ದಾನ ಮಾಡುವ ಪದ್ಧತಿಯುಂಟು. ಲಿಂಗಾಯತ ಧರ್ಮವು ಕೇವಲ ಪಶ್ಚಾತ್ತಾಪ (Repentance)ವನ್ನು ನಂಬುವುದೇ ವಿನಾ ಪ್ರಾಯಶ್ಚಿತವನ್ನಲ್ಲ.

ಎಲವೊ, ಎಲವೋ, ಪಾಪಕರ್ಮವ ಮಾಡಿದವನೇ,
ಎಲವೊ, ಎಲವೋ, ಬ್ರಹ್ಮಹತ್ಯವ ಮಾಡಿದವನೇ, ಒಮ್ಮೆ 'ಶರಣೆ'ನ್ನಲವೋ!
ಒಮ್ಮೆ 'ಶರಣೆ'ಂದಡೆ ಪಾಪ ಕರ್ಮ ಓಡುವುವು.
ಸರ್ವಪ್ರಾಯಶ್ಚಿತ್ತಕ್ಕೆ ಹೊನ್ನ ಪರ್ವತಂಗಳೈದಾವು:
ಒಬ್ಬಂಗೆ ಶರಣೆನ್ನು, ನಮ್ಮ ಲಿಂಗದೇವಂಗೆ!

20. ಉಪವಾಸ ವ್ರತ

ದೇವರನ್ನೊಲಿಸಲು ಉಪವಾಸ ವ್ರತ, ವಿವಿಧ ದೇವತೆಗಳ ಹೆಸರಿನಲ್ಲಿ ವಿವಿಧ ದಿನಗಳಂದು ಉಪವಾಸ, ಪ್ರಾಯಶ್ಚಿತವಾಗಿ ಉಪವಾಸ ಮುಂತಾದ ಆಚರಣೆ ಹಿಂದು ಧರ್ಮದಲ್ಲುಂಟು. ಲಿಂಗಾಯತ ಧರ್ಮದಲ್ಲಿ ಉಪವಾಸ ಒಂದು ಧಾರ್ಮಿಕ ವಿಧಿಯಾಗಿಲ್ಲ, ದೇವರನ್ನೊಲಿಸುವ ಸಾಧನವೂ ಅಲ್ಲ. ಆರೋಗ್ಯ ದೃಷ್ಟಿಯಿಂದ ಮಾತ್ರ ಐಚ್ಛಿಕವಾಗಿ ಉಪವಾಸವನ್ನು ಮಾಡಬಹುದು.

21. ಹಿಂದು ಧರ್ಮದಲ್ಲಿ ಉದ್ಯೋಗಗಳಲ್ಲಿ ಮೇಲು ಕೀಳು ಎಂಬ ಭಾವವಿದೆ.

ವೈದಿಕ ಹಿಂದು ಧರ್ಮದಲ್ಲಿ ಉದ್ಯೋಗಗಳಲ್ಲಿ ವಿಭಜನೆ, ವರ್ಗೀಕರಣ ಇದೆ. ಅದರ ಆಧಾರದ ಮೇಲೆ ಉದ್ಯೋಗಿಗಳಲ್ಲಿ ಸಹ ವರ್ಗೀಕರಣವಾಗಿದೆ. ಲಿಂಗಾಯತ ಧರ್ಮವು ಹುಟ್ಟಿನಿಂದ ಜಾತಿಯನ್ನಾಗಲೀ, ಉದ್ಯೋಗವನ್ನಾಗಲೀ ನಿರ್ಧರಿಸುವುದಿಲ್ಲ. ಉದ್ಯೋಗಿಗಳನ್ನು ಶ್ರೇಷ್ಠ - ಕನಿಷ್ಠ ಎಂದು ವರ್ಗೀಕರಿಸುವುದೂ ಇಲ್ಲ. ಸಮಾಜದ ಪ್ರಗತಿಗೆ ಎಲ್ಲ ಉದ್ಯೋಗಗಳು ಅತ್ಯಗತ್ಯವಾದ ಕಾರಣ ಅವುಗಳಲ್ಲಿ ಭೇದ ಮಾಡಬಾರದು ಎಂದು ಹೇಳುತ್ತದೆ.

ಹೊಲೆಗಂಡಲ್ಲದೆ ಪಿಂಡದ ನೆಲೆಗೆ ಆಶ್ರಯವಿಲ್ಲ
ಜಲ-ಬಿಂದುವಿನ ವ್ಯವಹಾರ ಒಂದೇ:
ಆಸೆಯಾಮಿಷರೋಷಹರುಷ ವಿಷಯಾದಿಗಳೆಲ್ಲಾ ಒಂದೆ.
ಏನನೋದಿ, ಏನ ಕೇಳಿ, ಏನು ಫಲ? ಕುಲಜನೆಂಬುದಕ್ಕೆ ಆವುದು ದೃಷ್ಟ?
ಸಪ್ತಧಾತು ಸಮಂ ಪಿಂಡಂ ಸಮಯೋನಿ ಸಮುದ್ಭವಂ
ಆತ್ಮಜೀವ ಸಮಾಯುಕಂ ವರ್ಣಾನಾಂ ಕಿಂ ಪ್ರಯೋಜನಂ "? ಎಂದುದಾಗಿ,
ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ;
ಹಾಸನಿಕ್ಕಿ ಸಾಲಿಗನಾದ; ವೇದವನೋದಿ ಹಾರುವನಾದ
ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ?
ಇದು ಕಾರಣ ಲಿಂಗದೇವಾ, ಲಿಂಗಸ್ಥಲವನರಿದವನೆ ಕುಲಜನು!

ಪ್ರತಿಯೊಬ್ಬರೂ ಹುಟ್ಟುವುದು ಒಂದೇ ರೀತಿಯಲ್ಲಿ; ಹುಟ್ಟಿ ಬಂದಾ ನಂತರದ ಶಾರೀರಿಕ ಕ್ರಿಯೆಗಳೆಲ್ಲ ಒಂದೇ ಬಗೆಯವು. ಸುಖ ದುಃಖಾದಿ ಮಾನಸಿಕ ಕ್ರಿಯೆಗಳೂ ಒಂದೇ ತೆರನಾಗಿರುತ್ತವೆ. ಎಲ್ಲರ ಶರೀರಗಳು ಸಪ್ತಧಾತುಗಳಿಂದಾಗಿ, ಆತ್ಮ - ಶರೀರಗಳ ಜೋಡಣೆಯಿಂದ ಮಾನವ ಜನ್ಮ ರೂಪುಗೊಂಡಿರುತ್ತದೆ. ಕಬ್ಬಿಣ ಕಾಸಿದವನು ಕಮ್ಮಾರ, ಬಟ್ಟೆ ತೊಳೆಯುವವ ಮಡಿವಾಳ, ಬಟ್ಟೆ ನೇಯ್ದವ ನೇಕಾರ, ಜ್ಞಾನಿಯಾದವನೇ ಬ್ರಾಹ್ಮಣ. ಯಾರು ಬೇಕಾದರೂ ಬ್ರಹ್ಮ ಜ್ಞಾನಿಯಾಗಿ, ಬ್ರಾಹ್ಮಣನಾಗ ಬಹುದು. ಹುಟ್ಟಿದ ಜಾತಿಯಾಗಲಿ, ಉದ್ಯೋಗವಾಗಲಿ ಜ್ಞಾನಿಯಾಗಿ ಅಡ್ಡಿಯಾಗವು. ದೇವರನ್ನು ಅರಿತವನು, ಒಲಿಸಿಕೊಂಡವನೇ ಕುಲ ಶ್ರೇಷ್ಠನು ಎಂಬುದೇ ಲಿಂಗಾಯತ ಧರ್ಮದ ನಂಬಿಕೆ; ಇದು ವೈದಿಕ ಹಿಂದು ಧರ್ಮದ ಮೂಲದ ಸಿದ್ಧಾಂತದಿಂದ ಸ್ಪಷ್ಟವಾಗಿ ಬೇರೆಯಾಗಿದೆಯಲ್ಲವೆ?

(ಮುಂದುವರಿಯುವುದು.......)

ಬಸವ ಕಲ್ಯಾಣದಲ್ಲಿ 108 ಅಡಿ ಬಸವ ಪುತ್ಥಳಿ ನಿರ್ಮಾಣ ಕಾರ್ಯ ಪ್ರಗತಿಯ ಪಥದಲ್ಲಿ

ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರ, ಶರಣ ಭೂಮಿ ಬಸವ ಕಲ್ಯಾಣದಲ್ಲಿ 108 ಅಡಿಯ ಬಸವ ಪುತ್ಥಳಿಯ ಕಾರ್ಯ ತ್ವರಿತಗತಿಯಲ್ಲಿ ಸಾಗಿದೆ. 24 ಅಡಿ ಎತ್ತರದ 2 ಅಂತಸ್ತಿನ ಅಡಿ ಪೀಠದ ಕಾಂಕ್ರೀಟ್ ಕಟ್ಟಡ ಸಿದ್ಧವಾಗಿದೆ. ಮೇಲೆ ಸುಮಾರು 60 ಅಡಿ ಎತ್ತರವರೆಗೆ ಶಾಫ್ಟ್ ಅಂದರೆ ಬೆನ್ನು ಹುರಿಯ ಭಾಗ ಮೇಲೇರಿದೆ. ಇದಕ್ಕೆ ಅಗತ್ಯವಿರುವ ಸಾಧನಗಳನ್ನು ಲಕ್ಷಾಂತರ ರೂ ಹಾಕಿ ಖರೀದಿಸಲಾಗಿದೆ. ಇನ್ನು ಮುಂದೆ ಬೇಗ ಬೇಗನೆ ಕೆಲಸವು ಸಾಗಲಿದ್ದು ಅಪಾರ ಮೊತ್ತದ ಹಣ ಬೇಕಾಗುತ್ತದೆ. ಈ ಮಧ್ಯೆ ಸಿಮೆಂಟು ಕಬ್ಬಿಣದ ಬೆಲೆ ಗಗನಕ್ಕೆ ಏರಿದೆ.

ಆದ್ದರಿಂದ ಸಹೃದಯರು ಉದಾರವಾಗಿ ದೇಣಿಗೆ ನೀಡಬೇಕೆಂದು ಕೋರುತ್ತೇವೆ. ಮೊದಲು ಇಂತಿಷ್ಟು ಕೊಡಬೇಕು ಎಂದು ಸಂಕಲ್ಪ ಮಾಡಿಕೊಂಡು ಕೆಲವರು ಕೊಟ್ಟಿದ್ದಾರೆ; ಕೆಲವರು ಕೊಡುತ್ತಿದ್ದಾರೆ. ಕೊಡುವ ಸಾಮರ್ಥ್ಯವಿರುವವರು ತಾವು ಮಾಡಿಕೊಂಡ ವಾಗ್ದಾನ ಪೂರೈಸಿದ್ದರೂ ಸಹ ಪುನಃ ದೇಣಿಗೆ ಕೊಡಲು ಮನಸ್ಸು ಮಾಡಬೇಕು. ನವ ದೆಹಲಿಯ ಬಸವ ಮಂಟಪ ಕಟ್ಟಡ ಖರೀದಿಗೆ ಬಹಳಷ್ಟು ಸಾಲ ಮಾಡಬೇಕಾಯಿತು. ಅದರಲ್ಲಿ ಸ್ವಲ್ಪ ಭಾಗ ತೀರಿಸಲಾಗಿದೆ. ಬಡ್ಡಿಯನ್ನು ಕೊಡಲಾಗುತ್ತಿದೆ. ನವ ದೆಹಲಿಯ ಬಸವ ಮಂಟಪ ಕಟ್ಟಡ ನೋಡಿ ಎಲ್ಲರಿಗೂ ಖುಷಿಯೋ ಖುಷಿ. ಅದು ಸಿಕ್ಕಿರುವುದು ಗುರು ಬಸವಣ್ಣನವರ ಪವಾಡವೆಂದೇ ಎಲ್ಲರ ಉದ್ಗಾರ. ಸಾಲ ಮಾಡಿ ಖರೀದಿಸಿದರೂ ಪರವಾಗಿಲ್ಲ ಕೊಟ್ಟ ಹಣ ಸಾರ್ಥಕವಾಗಿದೆ ಎಂದು ಶರಣ ಬಂಧುಗಳು ಹರ್ಷಿಸಿದ್ದಾರೆ.

ಈಗ ಬಸವ ಪುತ್ಥಳಿಯ ನಿರ್ಮಾಣಕ್ಕೆ ತೀವ್ರ ಗಮನ ಕೊಡಬೇಕಾಗಿದೆ. ಶರಣ ಮೇಳಕ್ಕೆ ಬರುವಾಗ ಉದಾರವಾಗಿ ನಿಮ್ಮ ನಿಮ್ಮ ಕಾಣಿಕೆಗಳನ್ನು ತಂದು, ನೀಡಿ ಸಹಕರಿಸಬೇಕೆಂದು ಕೋರುತ್ತೇವೆ.

– ಜಗದ್ಗುರು ಮಾತೆ ಮಹಾದೇವಿ, ಬಸವ ಧರ್ಮ ಪೀಠ,
ಕೂಡಲ ಸಂಗಮ – ಬಸವ ಕಲ್ಯಾಣ

ಕಲ್ಯಾಣ ಕಿರಣ ಬಸವ ತತ್ವ ಪರೀಕ್ಷೆ

ಕಲ್ಯಾಣ ಕಿರಣ ಅತ್ಯುತ್ತಮ ಓದುಗ ಪ್ರಶಸ್ತಿ

21ನೇ ಶರಣ ಮೇಳದಿಂದ ಪ್ರತಿವರ್ಷ **'ಕಲ್ಯಾಣ ಕಿರಣ'** ಬಸವ ತತ್ವ ಲಿಖಿತ ಪರೀಕ್ಷೆಯನ್ನು ನಡೆಸಲಾಗುವುದು. ಪರೀಕ್ಷೆಯಲ್ಲಿ 100 ಬಹು ಆಯ್ಕೆಯ ಪ್ರಶ್ನೆಗಳಿರುತ್ತವೆ. ಪ್ರಶ್ನೆಗಳನ್ನು ಹಿಂದಿನ ವರ್ಷದ ಕಲ್ಯಾಣ ಕಿರಣ ಮಾಸ ಪತ್ರಿಕೆಯಲ್ಲಿ ಪ್ರಕಟವಾದ ವಚನ ದುಂದುಭಿ, ಹಾಗು ಇತರ ಲೇಖನಗಳನ್ನಾಧರಿಸಿ ಕೇಳಲಾಗುವುದು. 2008ರ ಜನವರಿಯಲ್ಲಿ ನಡೆಯುವ ಶರಣ ಮೇಳದಲ್ಲಿ 11ನೇ ದಿನಾಂಕದಂದು ಮಧ್ಯಾಹ್ನ 3-30ರಿಂದ 6 ಗಂಟೆಯವರೆಗೆ ನಡೆಯುವ ಮೊಟ್ಟ ಮೊದಲ ಈ ಪರೀಕ್ಷೆಯಲ್ಲಿ 2007ರ ಕಲ್ಯಾಣ ಕಿರಣಗಳಿಂದ ಪ್ರಶ್ನೆಗಳನ್ನು ಕೇಳಲಾಗುವುದು. ಅತಿ ಹೆಚ್ಚಿನ ಅಂಕ ಪಡೆದ ಮೂವರಿಗೆ, ಕಲ್ಯಾಣಕಿರಣ ಅತ್ಯುತ್ತಮ ಓದುಗ ಪ್ರಶಸ್ತಿಯನ್ನು ಕೊಡಲಾಗುವುದು. ಪ್ರಶಸ್ತಿಯು ಫಲಕ, ಪ್ರಮಾಣ ಪತ್ರಗಳನ್ನು ಒಳಗೊಂಡಿರುತ್ತದೆ. ಪರೀಕ್ಷೆಗೆ ಹಾಜರಾಗಲು ಯಾವುದೇ ನಿರ್ಬಂಧನೆಗಳಿಲ್ಲ. ಹೆಚ್ಚಿನ ಸಂಖ್ಯೆಯಲ್ಲಿ ಈ ಪರೀಕ್ಷೆಯಲ್ಲಿ ಕಲ್ಯಾಣಕಿರಣದ ಓದುಗರು ಭಾಗಿಗಳಾಗಬೇಕಾಗಿ ಸೂಚನೆ. ಲಿಂಗಾಯತರು ಹಿಂದುಗಳಲ್ಲ ಎಂಬ ವಿಷಯ ಕುರಿತು ಈ ಸಲ ವಿಶೇಷವಾಗಿ ಪ್ರಶ್ನೆಗಳನ್ನು ಕೇಳಲಾಗುವುದು. ಪರ -ವಿರೋಧ ಹೀಗೆ ಅವರಿಗೆ ಸರಿ ಕಂಡಂತೆ ಬರೆಯಬಹುದು. ಮತ್ತು ಪೂರಕವಾಗಿ ಹಿಂದು ಯಾರು ? ಮತ್ತಿತರ ಪುಸ್ತಕಗಳನ್ನು ಅಭ್ಯಸಿಸಿ ಬರೆಯಲೂ ಬಹುದು. ಈ ಪರೀಕ್ಷೆಯ ನಿರ್ವಹಣೆಯನ್ನು ಬೀದರ್ ರಾಷ್ಟ್ರೀಯ ಬಸವ ದಳ, ಗಣಾಚಾರ ದಳದವರು ವಹಿಸಿಕೊಂಡಿರುತ್ತಾರೆ.

ಕಲ್ಯಾಣ ಕಿರಣ ಮಾಸ ಪತ್ರಿಕೆಯ ಚಂದಾದಲ್ಲಿ ಹೆಚ್ಚಳ

ಏರುತ್ತಿರುವ ಕಾಗದದ ಬೆಲೆ, ಮುದ್ರಣ ವೆಚ್ಚ ಇವುಗಳನ್ನು ಗಮನದಲ್ಲಿ ಇರಿಸಿಕೊಂಡು ಕಲ್ಯಾಣ ಕಿರಣ ಮಾಸ ಪತ್ರಿಕೆಯ ಬೆಲೆಯಲ್ಲಿ ಹೆಚ್ಚಳ ಮಾಡಲಾಗುತ್ತಿದೆ.

ಬಿಡಿ ಸಂಚಿಕೆ	10 ರೂ
ವಾರ್ಷಿಕ ಚಂದಾ	100 ರೂ
ಆಜೀವ ಸದಸ್ಯತ್ವ	1000 ರೂ

ಓದುಗರು ಸಹಕರಿಸಲು ಕೋರುತ್ತೇವೆ.

ಧರ್ಮಪಿತರ ಕರೆಯೋಲೆ

ಮಮತೆಯ ಮಕ್ಕಳೆ,

ಸೃಷ್ಟಿಕರ್ತ ಲಿಂಗದೇವನ ಸ್ಮರಣೆಯೊಡನೆ ನಿಮಗೆಲ್ಲ ಶುಭಹಾರೈಕೆಗಳು. ನೀವುಗಳೆಲ್ಲ ನನ್ನ ಮಹಾಮನೆಯ ಮಕ್ಕಳು .ಲಿಂಗದೇವನ ಪ್ರೇರಣೆಯಂತೆ ನಾನು ಮರ್ತ್ಯದಲ್ಲಿ ಒಂದು ಮಹಾಮನೆಯನ್ನು ಕಟ್ಟಿದೆ. ಇದು ಕೇವಲ ಕಲ್ಲು-ಮಣ್ಣು- ಇಟ್ಟಿಗೆ-ಕಟ್ಟಿಗೆಗಳ ಭೌತಿಕ ಮನೆಯಲ್ಲ; ಒಂದು ತತ್ವ ಸಂಹಿತೆಯನ್ನು ಒಳಗೊಂಡ ಧರ್ಮದ ಮಹಾಮನೆ. ಈ ಮಹಾಮನೆಯನ್ನು ನಾನು ಇದ್ದ ಕಾಲದಲ್ಲಿಯೇ ನೀವು ಪ್ರವೇಶಿಸಿರಬಹುದು, ನಂತರದ ಶತಮಾನದಲ್ಲಿ ಪ್ರವೇಶಿಸಿರಬಹುದು, ಇಂದೇ ನಂಬಿಕೆಯ ಮೂಲಕ, ದೀಕ್ಷೆಯ ಮೂಲಕ ಬಂದಿರಬಹುದು. ಎಂದೇ ಬಂದಿರಲಿ ನೀವು ನನ್ನವರು. ನನ್ನವರೆಲ್ಲರೂ ಜಾತಿ ಮತ ಪಂಥ ವೃತ್ತಿ ಅಂತಸು ಭೇದವಿಲ್ಲದೆ ಒಂದು ಕಡೆ ಸೇರಬೇಕೆಂಬುದೇ ನನ್ನಿಚ್ಛೆ.

ನಿಮಗೆ ಲೌಕಿಕವಾಗಿ ಸೇರುವುದು ಗೊತ್ತು. ಹೆಣ್ಣು ಮಕ್ಕಳಿಗೆ ತೌರು ಮನೆಯಲ್ಲಿ ಆಗಾಗ ಸೇರುವುದು ಗೊತ್ತು. ತಾಯಿ -ತಂದೆ, ಅಕ್ಕ -ತಂಗಿ, ಅಣ್ಣ -ತಮ್ಮಂದಿರೊಡನೆ ನಲಿದಾಡಲು ಅದೆಂತಹ ಕಾತುರದಿಂದ ಕಾಯುವರು ಎಂಬುದು ನಿಮಗೆಲ್ಲ ಗೊತ್ತು. ಆದರೆ ಭಕ್ತಿ ಸಂಬಂಧದಿಂದ ಒಂದು ಕಡೆ ಸೇರಬೇಕು; ಈ ಸಂಬಂಧ ರಕ್ತ ಸಂಬಂಧಕ್ಕಿಂತಲೂ ಶ್ರೇಷ್ಠ ಎಂಬುದನ್ನು ಇನ್ನೂ ನೀವು ಬಹಳ ಜನ ಅರಿತಿಲ್ಲ; ಈಗಲಾದರೂ ಅರಿಯಬೇಕು.

ತಮ್ಮ ಮಕ್ಕಳು ತೌರಿಗೆ ಬರಬೇಕು; ಪ್ರೀತಿಪೂರ್ವಕವಾಗಿ ಸೋದರ-ಸೋದರಿಯರೊಡನೆ ಬೆರೆಯಬೇಕು; ತಮ್ಮನ್ನು ಗೌರವಿಸಬೇಕು; ತಂದೆ ತಾಯಿಯರ ವಾತ್ಸಲ್ಯದಲ್ಲಿ ಮೀಯಬೇಕು ಎಂದು ಯಾವ ತಂದೆ ತಾಯಿ ಬಯಸರು? ಸೃಷ್ಟಿಕರ್ತನೆಂಬ ತಂದೆಯ, ಮಾತೃ ಹೃದಯಿಯಾದ ನನ್ನ ಇಚ್ಛೆಯೂ ಅದೇ ಆಗಿದೆ. ಇದನ್ನು ನೀವೇಕೆ ಅರ್ಥ ಮಾಡಿಕೊಳ್ಳುತ್ತಿಲ್ಲ? ಇಷ್ಟು ದಿನ ನಿಮಗೆಲ್ಲ ಅಂಥ ಅವಕಾಶ ಇರಲಿಲ್ಲ.ಈಗ ಶರಣ ಮೇಳವು ಧರ್ಮಕ್ಷೇತ್ರ ಕೂಡಲ ಸಂಗಮದಲ್ಲಿ ಸಮಾವೇಶವಾಗುವ ಅವಕಾಶ ಕಲ್ಪಿಸಿದೆ. ಸಮಾನತೆ -ಸೋದರತ್ವ - ಸ್ವಾತಂತ್ರ್ಯ ಇವು ನನ್ನ ತತ್ವದ ಮುಖ್ಯ ಮೂರು ಸೂತ್ರಗಳು. ಇಲ್ಲಿ ಅವು ಮೂರನ್ನು ಕಾಣಬಹುದು. ಅದಕ್ಕಾಗಿ ನಾನು ನಿಮಗೆ ಹಾರ್ದಿಕ ಆಹ್ವಾನ ನೀಡುತ್ತಿದ್ದೇನೆ. ನೀವೆಲ್ಲರೂ ಬನ್ನಿರಿ, ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಬನ್ನಿರಿ.

ಸೃಷ್ಟಿಕರ್ತ ಪರಮಾತ್ಮನೇ ನಮ್ಮೆಲ್ಲರ ತಂದೆ, ಒಂದೊಂದು ಕಾಲದಲ್ಲಿ ಒಬ್ಬೊಬ್ಬರು ಲೋಕದ ಉದ್ಧಾರಕ್ಕಾಗಿ, ಜನರನ್ನು ಧರ್ಮ ಮಾರ್ಗಕ್ಕೆ ಕರೆತರಲು ಮಧ್ಯವರ್ತಿಗಳನ್ನಾಗಿ ಆಯ್ಕೆ ಮಾಡಿಕೊಂಡ. ಬುದ್ಧ, ಮೊಹಮ್ಮದ್, ಏಸು, ನಾನು ಎಲ್ಲಾ ಅಣ್ಣ ತಮ್ಮಂದಿರಂತೆ. ದೇವರೆಂಬ ತಂದೆಯ ಅವಿಭಾಜ್ಯ ಕಿರಣಗಳು. ದೇವರು ಪರಿಪೂರ್ಣನು, ನಿತ್ಯನು. ಆವನು ಸೀಮಿತರಾದ ತಾಯಿ ತಂದೆಗಳ ಹೊಟ್ಟೆಯಲ್ಲಿ ಹುಟ್ಟಿ ಬರುವುದಿಲ್ಲ ಮತ್ತು ಕರ್ತನು ಎಲ್ಲಿಯೋ ಒಂದು ಕಡೆ ಯಾವುದೋ ಲೋಕದಲ್ಲಿ ಸೀಮಿತನಾಗಿ ಇರುವುದಿಲ್ಲ. ಸೃಷ್ಟಿ - ಸ್ಥಿತಿ -ಲಯ - ತಿರೋದಾನ ಎಂಬ ನಾಲ್ಕು ಕಾರ್ಯಗಳನ್ನು ಮಾಡಿ, ತಾನು ನೇರವಾಗಿ ಕೆಲವು ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಂಡು, ಅವರಲ್ಲಿ ತನ್ನ ಅದ್ಭುತವಾದ ಕಾರುಣ್ಯ ಅವತೀರ್ಣಗೊಳಿಸಿ, ಸಾಮರ್ಥ್ಯವನ್ನು ನೀಡಿ, ಲೋಕದ ಜನತೆಯನ್ನು ಅನುಗ್ರಹಿಸಿ ಮುನ್ನಡೆಸಲು ಅವಕಾಶ ನೀಡುವನು. ಸೃಷ್ಟಿಕರ್ತನ ಉದ್ದೇಶ ಲೋಕದ ಮಾನವರು ಲೋಕದ ತಂದೆಯಾದ ದೇವನನ್ನು ಅರಿಯಬೇಕು. ಅವನ ಪ್ರೀತಿಯ ಕಾರುಣ್ಯ ಜಲದಲ್ಲಿ ಮೀಯಬೇಕು ಎಂಬುದೇ ಆಗಿದೆ. ಹೀಗಾಗಿ ಎಲ್ಲಾ ಧರ್ಮಗಳ ಏಕಮೇವ ಧ್ಯೇಯವು ಸೃಷ್ಟಿಕರ್ತನೇ ಆಗಿದ್ದಾನೆ.

ಈ ಸತ್ಯವನ್ನು ಗ್ರಹಿಸುವಲ್ಲಿ ಸೀಮಿತ ಬುದ್ಧಿಯ ಮಾನವರು ಹಲವಾರು ತಪ್ಪುಗಳನ್ನು ಎಸಗಿ ಮೂಢನಂಬಿಕೆ, ಬಹುದೇವೋಪಾಸನೆ ಮುಂತಾದವನ್ನು ರೂಢಿಸಿಕೊಂಡಿದ್ದರೆ ಸಮಾಜವನ್ನು ಒಡೆದು ಆಳಬೇಕೆಂಬ ಸ್ವಾರ್ಥ ಬುದ್ಧಿಯ ಜನರು ಅತ್ಯಂತ ವಿಷಮ ರೀತಿಯ ವರ್ಗೀಕರಣವಾದ ವರ್ಣ ವ್ಯವಸ್ಥೆ, ಜಾತಿ ಪದ್ಧತಿಯನ್ನು ಹುಟ್ಟುಹಾಕಿ ಪೋಷಿಸುತ್ತ ಬಂದು ಅನೇಕ ಅನಿಷ್ಟ ಪರಿಣಾಮಗಳಿಗೆ ಕಾರಣರಾದರು. ಶೋಷಣೆಯು ಅಗಾಧವಾಗಿ ಸೃಷ್ಟಿಯ ಅರ್ಧ ಅಂಗವಾದ ಮಹಿಳೆಯರನ್ನು ಒಳಗೊಂಡು ಬಹಳ ಜನ ದೇವರು- ಧರ್ಮ- ಸಂಸ್ಕಾರ, ಧಾರ್ಮಿಕ ಹಕ್ಕು; ಇವುಗಳಿಂದ ವಂಚಿತರಾದರು.

ಮಮತೆಯ ಮಕ್ಕಳೆ, ತಾನೇ ಸೃಷ್ಟಿಸಿದ ಈ ಜಗತ್ತು, ಮಾನವ ಸಮಾಜ ದಾರಿ ತಪ್ಪುತ್ತ ಹೊರಟು ಮಾನವ ಸಮಾಜವನ್ನು ಅಂದಗೆಡಿಸಿದ್ದನ್ನು ಕಂಡು ನೊಂದ ಕರ್ತನು, ನನ್ನಲ್ಲಿ ಅನುಗ್ರಹ ಇಳಿಸಿ, ಸಮಾಜ ಸುಧಾರಣೆಗೆ ನನ್ನನ್ನು ಆಯ್ಕೆ ಮಾಡಿಕೊಂಡನು.

ಕರ್ತನಟ್ಟಿದಡೆ ಮರ್ತ್ಯದಲ್ಲಿ ಮಹಾಮನೆಯ ಕಟ್ಟಿದೆ
ಸತ್ಯ ಶರಣರಿಗೆ ತೊತ್ತು ಭೃತ್ಯನಾಗಿ ಸವೆದು ಬದುಕಿದೆನು
ಕರ್ತನ ಬೆಸನು ಮತ್ತೆ ಬರಲೆಂದಟ್ಟಿದಡೆ

ಲಿಂಗದೇವರ ನಿರೂಪಕ್ಕೆ ಮಹಾಪ್ರಸಾದವೆಂದೆನು.

ದೇವನ ಆಜ್ಞೆಯಂತೆ ನನ್ನ ಬದುಕು ನಡೆಯಿತು. ನಾನು ಆರಂಭಿಸಿದ ಸತ್ಯ ಸ್ಥಾಪನೆಯ ಕಾರ್ಯವನ್ನು ಅಸಂಖ್ಯಾತ ಶರಣರು ಮುಂದುವರಿಸಿದರು. ತಮ್ಮ ಪ್ರಾಣತೆತ್ತು ವಚನ ಸಾಹಿತ್ಯವನ್ನು ರಕ್ಷಿಸಿ, ನಿಮಗೆ ಅಮೂಲ್ಯ ಜ್ಞಾನ ಭಂಡಾರವನ್ನು ಕೊಟ್ಟಿದ್ದಾರೆ. ಮಾನವ ಸಮಾಜ ವರ್ಣ-ಜಾತಿ, ವರ್ಗ-ಅಂತಸ್ತು, ಮತ-ಪಂಥ, ಬಣ್ಣ-ಲಿಂಗ ಭೇದಗಳಿಂದ ಅಸಮಾನತೆಯನ್ನು ಸೃಷ್ಟಿಸಿರುವುದನ್ನು ಕಂಡು ಇವೆಲ್ಲವುಗಳಿಂದ ಹೊರತಾದ "ಗಣ ಧರ್ಮ"ವನ್ನು ನಾನು ಕೊಟ್ಟಿದ್ದೇನೆ. ಇಂದು ನೀವು ಕೆಲವರು ಹುಟ್ಟಿನಿಂದಲೇ ಲಿಂಗಾಯತರಾಗಿರಬಹುದು, ನಿಮ್ಮ ತಾಯಿ ತಂದೆ ಲಿಂಗಾಯತರಾದ ಕಾರಣ. ಆದರೆ ಇದು ನನ್ನ ಆಶಯವಲ್ಲ. ಏಕೆಂದರೆ ಹುಟ್ಟಿನಿಂದ ಬರುವುದು ಜಾತಿ, ಸಂಸ್ಕಾರದಿಂದ ಬರುವುದು ಧರ್ಮ. ನೀವು ಸಂಸ್ಕಾರವನ್ನು ಹೊಂದಿ ಧರ್ಮಾಚರಣೆಯಿಂದ ಲಿಂಗಾಯತರಾಗಬೇಕೇ ಹೊರತು, ಯಾವ ಸಂಸ್ಕಾರವನ್ನೂ ಹೊಂದದೆ ಜಾತಿಯಿಂದ ಲಿಂಗಾಯತರು ಎಂದು ಹೇಳಿಕೊಳ್ಳುವುದು ನನಗೆ ಸಮ್ಮತವಾಗದ ವಿಷಯ. ನನ್ನ ತತ್ವ ಸಂಹಿತೆ ಯಾವುದೇ ಒಂದು ಜಾತಿ ವರ್ಣಕ್ಕೆ ಸೀಮಿತವಾಗದ "ಗಣ ಧರ್ಮ"ವಾದ್ದರಿಂದ ಈ ಮಾರ್ಗವನ್ನು ಯಾರು ಬೇಕಾದರೂ ಸ್ವೀಕರಿಸಬಹುದು. ಹಾಗೆ ಸ್ವೀಕರಿಸಿದವರನ್ನು ಪ್ರೀತಿಯಿಂದ ನೀವು ಸ್ವಾಗತಿಸಿ ಬರಮಾಡಿಕೊಂಡು, ಸಮರಸ ಮಾಡಿಕೊಳ್ಳಬೇಕು. ಇಂಥ ಸಾಮರಸ್ಯ ಮೂಡಬೇಕಾದರೆ ನೀವು ಆಗಾಗ ಒಂದೆಡೆ ಸೇರಬೇಕು.

ಕಾಗೆಯೊಂದಗುಳ ಕಂಡಡೆ
ಕರೆಯದೆ ತನ್ನ ಬಳಗವೆಲ್ಲವ?
ಕೋಳಿ ಒಂದು ಕುಟುಕ ಕಂಡಡೆ
ಕೂಗಿ ಕರೆಯದೆ ತನ್ನ ಕುಲವನೆಲ್ಲವ?
ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದರೆ
ಆ ಕಾಗೆ ಕೋಳಿಯಿಂದ ಕರಕಷ್ಟ ಲಿಂಗದೇವಾ.

ಸೃಷ್ಟಿಕರ್ತನನ್ನು ಇಷ್ಟಲಿಂಗ ರೂಪದಲ್ಲಿ ನಿತ್ಯವೂ ಆರಾಧಿಸಿರಿ. ಇದು ವೈಯಕ್ತಿಕ ಆತ್ಮೋದ್ಧಾರಕ್ಕಾಗಿ. ಸಂಸ್ಕಾರ ಮತ್ತು ಸಂಘಟನೆಗಾಗಿ ಸಮುದಾಯ ಜೀವನದ ಸೂತ್ರವಾಗಿ ಸಾಮೂಹಿಕ ಪ್ರಾರ್ಥನೆಯನ್ನು ಅಳವಡಿಸಿಕೊಳ್ಳಿರಿ.

ಕೌಟುಂಬಿಕ ಪ್ರಾರ್ಥನೆ : ಪ್ರತಿಯೊಬ್ಬ ವ್ಯಕ್ತಿಯ ಆತ್ಮೀಯ ವಲಯವೆಂದರೆ ಕುಟುಂಬ. ಕುಟುಂಬದವರೆಲ್ಲ ಕುಳಿತು ವಾರಕ್ಕೊಮ್ಮೆಯಾದರೂ ಸಾಮೂಹಿಕ ಇಷ್ಟಲಿಂಗಾರ್ಚನೆ ಮಾಡಿರಿ. ಈ ಮೂಲಕ ಕೌಟುಂಬಿಕ ಸೌಹಾರ್ದತೆ ಬೆಳೆವುದಲ್ಲದೆ ಎಲ್ಲರಲ್ಲೂ ಧರ್ಮ ಶ್ರದ್ಧೆ ಗಾಢವಾಗುವುದು. ದಿನ ನಿತ್ಯ ಸಂಜೆಯ ವೇಳೆಯಲ್ಲಿ ಹತ್ತು ಹದಿನೈದು ನಿಮಿಷ ಕಾಲವಾದರೂ ಮನೆ ಮಂದಿಯೆಲ್ಲ ಕುಳಿತು ಸಂಜೆಯ ಪ್ರಾರ್ಥನೆ ನೆನೆಹು ಮಾಡಿರಿ.

ವಾರದ ಪ್ರಾರ್ಥನೆ – ಶರಣ ಸಂಗಮ: ಸಮುದಾಯ ಜೀವನದ ಶ್ರೇಷ್ಠ ಸೂತ್ರವೆಂದರೆ ಸಾಮೂಹಿಕ ಪ್ರಾರ್ಥನೆ. ವಾರಕ್ಕೊಮ್ಮೆ ಒಂದು ಸ್ಥಳದಲ್ಲಿ ಧರ್ಮಾನುಯಾಯಿಗಳು ಸೇರಿ ಸಾಮೂಹಿಕ ಪ್ರಾರ್ಥನೆ ಮಾಡಿ, ನಂತರ ವಚನಾನುಭವ ಗೋಷ್ಠಿ ಮಾಡಿರಿ. ಸೃಷ್ಟಿಕರ್ತನನ್ನು ಭಜಿಸಿ ಪ್ರಾರ್ಥಿಸಿ, ಸ್ತುತಿಸುವ ಮೂಲಕ ಅವನಿಗೆ ಕೃತಜ್ಞತೆ ಸಲ್ಲಿಸಿರಿ.

ನೆನೆಹು : ಪ್ರತಿದಿನ ಸಂಜೆ 7 ಗಂಟೆಗೆ ಸರಿಯಾಗಿ ನೀವು ಎಲ್ಲೇ ಇದ್ದರೂ ಆ ಸ್ಥಳದಲ್ಲಿ 15 ನಿಮಿಷದವರೆಗೆ ಪ್ರಾರ್ಥನೆಯನ್ನು ವೈಯಕ್ತಿಕವಾಗಿ ಆಗಲಿ, ಸಾಮೂಹಿಕವಾಗಿ ಆಗಲಿ, ಅಳವಡಿಸಿಕೊಂಡು ತಪ್ಪದೇ ಮಾಡಿರಿ.

ಗಣ ಮೇಳ : ನನ್ನ ವಚನಗಳನ್ನು ಗಮನಿಸಿರಿ. ಗಣ ಮೇಳಾಪಕ್ಕೆ ಎಷ್ಟು ಒತ್ತು ಕೊಟ್ಟಿದ್ದೇನೆ ನೋಡಿರಿ. ಪಕ್ಷಿಗಳು ಸಮೂಹ ಜೀವನವನ್ನು ಇಷ್ಟಪಡುತ್ತವೆ. ಸಮೂಹವನ್ನು ತೊರೆದವನು ಸ್ವಾರ್ಥ ಮನುಷ್ಯನಾಗುವನು. ಆಯಾ ಊರುಗಳಲ್ಲಿ ಧರ್ಮ ಬಾಂಧವರು ಧಾರ್ಮಿಕ ಭ್ರಾತೃತ್ವ ಭಾವ ಬೆಳೆಸಿಕೊಂಡು ವರ್ಷದಲ್ಲಿ ಒಂದು ದಿನವಾದರೂ ಒಟ್ಟುಗೂಡಿ ಪ್ರಾರ್ಥನೆ- ಪೂಜೆ ಮಾಡಿರಿ. ಶಿವರಾತ್ರಿಯಂದು ಬೆಳಿಗ್ಗೆ ವಿಶಾಲವಾದ ಮೈದಾನದಲ್ಲಿ ಧರ್ಮಬಾಂಧವರೆಲ್ಲರೂ ಸೇರಿ ಗಣಮೇಳದಲ್ಲಿ ಭಾಗಿಗಳಾಗಿರಿ.

ಶರಣ ಮೇಳ : ವ್ಯಕ್ತಿಯು ವೈಯಕ್ತಿಕ ಪೂಜೆ ಮಾಡುವುದು, ಕುಟುಂಬದವರೆಲ್ಲರು ಒಂದೆಡೆ ಸೇರಿ ಪ್ರಾರ್ಥಿಸುವುದು ನಿತ್ಯ ವಿಧಿಗಳು. ಸಾಮೂಹಿಕ ಪ್ರಾರ್ಥನೆ ವಾರಕ್ಕೊಮ್ಮೆ ನಡೆಯುವುದರಿಂದ, ವಿವಿಧ ಬಡಾವಣೆ ಪ್ರದೇಶಗಳ ಜನರು ಅಲ್ಲಲ್ಲೇ ಕಲೆತು ಅದನ್ನು ಮಾಡುವರು. ಗಣಮೇಳವು ಆಯಾ

ಗ್ರಾಮ, ಊರು, ನಗರಗಳ ಧರ್ಮಬಾಂಧವರನ್ನು ಒಂದೆಡೆ ತರಲು ನೆರವಾಗುವುದು. ಇನ್ನು ಪ್ರಾದೇಶಿಕತೆ, ಭಾಷೆ, ಮುಂತಾದ ಎಲ್ಲಾ ಸೀಮೆ ದಾಟಿ ಧಾರ್ಮಿಕ ಸೂತ್ರದ ಮೇಲೆ ನಮ್ಮ ತತ್ವಾನುಯಾಯಿಗಳನ್ನು ಬೆಸೆಯುವ ಸೂತ್ರವೇ ಶರಣ ಮೇಳ. ಆದ್ದರಿಂದ ನಿಮ್ಮ ಎಲ್ಲ ಕೆಲಸ ಕಾರ್ಯಗಳನ್ನು ಬದಿಗೊತ್ತಿ ಕೂಡಲ ಸಂಗಮಕ್ಕೆ ಧಾವಿಸಿ ಬಂದು ಜನವರಿ 11 ರಿಂದ 15 ರವರೆಗೆ ನಡೆಯುವ ಶರಣ ಮೇಳದಲ್ಲಿ ನೀವು ತಪ್ಪದೇ ಭಾಗಿಗಳಾಗಿರಿ.

ಸತ್ಯ ಸ್ಥಾಪನೆಗಾಗಿ, ಸಮಾನತೆಯ ಅನುಷ್ಠಾನಕ್ಕಾಗಿ ನಾವುಗಳೆಲ್ಲರೂ ಮಾಡಿದ ತ್ಯಾಗವನ್ನು ನೀವು ಮರೆಯಬಾರದು. ನಮ್ಮ ಅಂತಃಕರಣ ಪೂರ್ವಕ ಕಳಕಳಿಯನ್ನು ಪ್ರಾಂಜಲ ಮನಸ್ಸಿನಿಂದ ಅರಿಯಬೇಕು. ಜಗಬದುಕಲೆಂದು ಜನ ಬದುಕಲೆಂದು ವಚನ ವಾಙ್ಮಯವನ್ನು ಹೋರಾಡಿ ರಕ್ಷಿಸಿದ ಅಕ್ಕನಾಗಲಾಂಬಿಕೆ, ಮಡಿವಾಳ ಮಾಚಯ್ಯ, ಚನ್ನಬಸವಣ್ಣ ಮುಂತಾದವರ ಹೋರಾಟ ನಿಮ್ಮನ್ನು ಎಚ್ಚರಿಸದೆ? ಸಮಾನತೆಯ ಧ್ವಜವನ್ನು ಹಾರಿಸಲಿಕ್ಕಾಗಿ ಹರಳಯ್ಯ -ಮಧುವಯ್ಯ- ಶೀಲವಂತರು ಮಾಡಿದ ಪ್ರಾಣಾರ್ಪಣೆ, ಬಲಿದಾನ ನಿಮ್ಮ ಅಂತಃಕರಣವನ್ನು ಕಲಕದೆ?

ಹೆತ್ತ ತಂದೆ ಬಯಸುವುದೇನನ್ನು? ತನ್ನ ಮಕ್ಕಳೆಲ್ಲರೂ ಒಂದಡೆ ಸೇರಿ ಹಾಡಿ ಪಾಡಿ ನಲಿಯಬೇಕೆಂದು ತಾನೇ? ಅದೇ ನನ್ನ ಬಯಕೆ ಸಹ. ತೌರಿಗೆ ಬಂದರೆ ಏನು ಸಿಗುತ್ತದೆ ಎಂದು ನಿಮ್ಮ ಪ್ರಶ್ನೆಯೆ? ಜ್ಞಾನದ ವಸ್ತ್ರವನ್ನು ನನ್ನ ಪ್ರತಿನಿಧಿಗಳಾದ ಬೋಧಕರು ಉಡಿಸುವರು. ಸದ್ಗುಣಗಳ ಆಭರಣ ತೊಡಿಸುವರು. ವಚನ ಜ್ಞಾನದ ಸಂಪದವನ್ನು ಉಡಿ ತುಂಬಿ ಕಳಿಸುವರು. ಐಹಿಕ ಜಗತ್ತಿನಲ್ಲಿ ನನಗೆ ಮೆಚ್ಚುಗೆಯಾಗುವಂತೆ ನೀವು ಹೇಗೆ ಒಗೆತನವ ಮಾಡಬೇಕೆಂಬುದನ್ನು ಕಲಿಸಿ ಕಳಿಸುವರು.

ಷಡಂಗ ದಾಸೋಹ ಮಾಡಿರಿ. ತನು-ಮನ-ಧನ-ಪ್ರಾಣ-ಅಭಿಮಾನ- ಸಮಯ; ಈ ಆರನ್ನೂ ಮೀಸಲಿರಿಸಿ ನಮ್ಮ ತತ್ವಗಳ ಪಾಲನೆಗಾಗಿ ಶ್ರಮಿಸಿರಿ. ಸಮಷ್ಟಿಯ ಉದ್ಧಾರಕ್ಕಾಗಿ ವೈಯಕ್ತಿಕ ಅಹಂಕಾರ - ಪ್ರತಿಷ್ಠೆಗಳೇ ಕಾರಣ ಎಂಬುದನ್ನು ಈಗಲಾದರೂ ಅರಿತುಕೊಳ್ಳಿರಿ.

ನಿಮ್ಮನ್ನು ಯಾರಾದರೂ ಶರಣ ಮೇಳಕ್ಕೆ ಆಹ್ವಾನಿಸಬೇಕೆಂದು, ಕರೆ ಕಳುಹಿಸಬೇಕೆಂದು ನಿರೀಕ್ಷಿಸುವಿರೋ? ಕೂಡದು. ನದಿಯು ನಿರಂತರವಾಗಿ ಹರಿಯುತ್ತಿರುತ್ತದೆ; ಆದರಿಂದ ಯಾರು ಬೇಕಾದರೂ ನೀರನ್ನು ತುಂಬಿಕೊಳ್ಳಬಹುದು. ಹಾಗೆಯೇ ಶರಣ ಮೇಳದಲ್ಲಿ ವಚನ ವಾಙ್ಮಯ ಗಂಗೆ ಹರಿಯುತ್ತಲಿರುತ್ತಾಳೆ. ಬನ್ನಿ, ನಿಮ್ಮ ಹೃದಯ -ಮನ-ಬುದ್ಧಿ ಹಿಡಿಯುವಷ್ಟು ತುಂಬಿಕೊಳ್ಳಿರಿ. ನೀವು ನನಗಾಗಿ, ನಮ್ಮ -ನಿಮ್ಮೆಲ್ಲರ ತಂದೆಯಾದ ದೇವನನ್ನು ಆರಾಧಿಸಲು ಬರುತ್ತೀರೆಂದು ನಾನು ಸದಾ ನಿರೀಕ್ಷಿಸುತ್ತ ವಾತ್ಸಲ್ಯ ಪೂರ್ಣವಾಗಿ ನಿಮಗೆ ಈ ಆಹ್ವಾನ ನೀಡಿರುವೆನು.

ನಿಮ್ಮ ಪ್ರೀತಿಯ ತಂದೆ - ಬಸವಣ್ಣ
(ಗ್ರಹಿಸಿದವರು -ಬಸವಾತ್ಮಜೆ ಮಾತಾಜಿ)

ಶರಣ ಮೇಳಕ್ಕೆ ದೇಣಿಗೆ ಸಂಗ್ರಹಕ್ಕೆ ಕರೆ

ಶರಣ ಮೇಳದ ಕೀರ್ತಿ ವಿಸ್ತಾರಗೊಳ್ಳುತ್ತಿದೆ. ಸಮಾಜಕ್ಕೆ ಧಾರ್ಮಿಕ ಸಂಸ್ಕಾರ ನೀಡುವ, ಸಂಘಟನೆ ಮಾಡುವ ಏಕೈಕ ವಾರ್ಷಿಕ ಸಮಾವೇಶವಿದು. ಧರ್ಮ ಕ್ಷೇತ್ರ ಕೂಡಲ ಸಂಗಮಕ್ಕೆ ವರ್ಷಕ್ಕೊಮ್ಮೆ ಬರಬೇಕೆಂಬ ಹಂಬಲವು ಜನರಲ್ಲಿ ಬೆಳೆಯುತ್ತಿದೆ. ಊಟ -ವಸತಿಗಳ ವ್ಯವಸ್ಥೆಯ ಜವಾಬ್ದಾರಿ ಅಗಾಧವಾದುದಾಗಿದೆ. ಆದ್ದರಿಂದ ಶರಣ ಬಂಧುಗಳು ಸ್ವಯಂ ಪ್ರೇರಣೆಯಿಂದ ತಮ್ಮ ಕಾಣಿಕೆ ಕೊಡುವುದು ಮಾತ್ರವಲ್ಲದೆ ಅನ್ನದಾಸೋಹಕ್ಕೆ ದೇಣಿಗೆ ಸಂಗ್ರಹಿಸಿ ಕೊಡಬೇಕು. ಕೆಲವರಿಗೆ ನಾವು ರಸೀತಿ ಪುಸ್ತಕ ಕಳಿಸುತ್ತೇವೆ. ಎಷ್ಟೋ ಆಸಕ್ತ ಜನರ ಪರಿಚಯ ನಮಗೆ ಇರುವುದಿಲ್ಲ. ಅಂಥ ಆಸಕರು ಫೋನ್ ಮಾಡಿ ವಿಳಾಸ ತಿಳಿಸಿ ಅಥವಾ ಪತ್ರ ಬರೆದು ರಸೀತಿ ಪುಸ್ತಕ ತರಿಸಿಕೊಂಡು ಶರಣ ಮೇಳಕ್ಕೆ ದೇಣಿಗೆ ಸಂಗ್ರಹಿಸಿ ತರಬೇಕೆಂದು ಆತ್ಮೀಯತೆಯಿಂದ ಸೂಚಿಸುತ್ತೇವೆ.

ಧರ್ಮಪಿತರ ವಾಣಿಯು ಹೇಳುತ್ತದೆ :

ಅಯ್ಯಾ, ನಿಮ್ಮ ಶರಣರ ದಾಸೋಹಕ್ಕೆ
ಎನ್ನ ತನುಮನ ಧನವಲಸದಂತೆ ಮಾಡಯ್ಯ
ತನು ದಾಸೋಹಕ್ಕೆ ಉಬ್ಬುವಂತೆ ಮಾಡು
ಮನ ದಾಸೋಹಕ್ಕೆ ಲೀಯವಹಂತೆ ಮಾಡು,
ಧನ ದಾಸೋಹಕ್ಕೆ ಸವೆದು, ನಿಮ್ಮ ಶರಣರ ಪ್ರಸಾದದಲ್ಲಿ
ನಿರಂತರ ಆಡಿ, ಹಾಡಿ, ನೋಡಿ, ಕೂಡಿ, ಭಾವಿಸಿ, ಸುಖಿಸಿ
ಪರಿಣಾಮಿಸುವಂತೆ ಮಾಡು, ಲಿಂಗದೇವಾ

ಮತ್ತೆ ಹಾಡುವೆ ಕುಹೂಽಽಽಽಽ... ಕುಹೂಽಽಽಽಽ...

– ಸಚ್ಚಿದಾನಂದ

ಎತ್ತಣ ಮಾಮರ ಎತ್ತಣ ಕೋಗಿಲೆ
ಎತ್ತಣಿಂದೆತ್ತ ಸಂಬಂಧವಯ್ಯಾ ?
ಬೆಟ್ಟದ ನೆಲ್ಲಿಕಾಯಿ ಸಮುದ್ರದ ಉಪ್ಪು
ಎತ್ತಣಿಂದೆತ್ತ ಸಂಬಂಧವಯ್ಯಾ ?
ಗುಹೇಶ್ವರ ಲಿಂಗಕ್ಕೆಯೂ ಎನಗೆಯೂ
ಎತ್ತಣಿಂದೆತ್ತ ಸಂಬಂಧವಯ್ಯಾ?

ಪ್ರತಿ ವರ್ಷ ವಸಂತ ಋತು ಬಂದಾಗ ಪ್ರಕೃತಿಯೇ ಹೊಸ ಬಟ್ಟೆಯನ್ನು ಧರಿಸಿ ಭೂರಮೆಯನ್ನು ಸುಂದರ ಗೊಳಿಸುತ್ತದೆ. ಅದರಲ್ಲೂ ಮಾವಿನ ವನ ಹೊಸ ಚಿಗುರಿನಿಂದ ಶೃಂಗರಿಸಿಕೊಂಡು ಕೋಗಿಲೆಗಳ ಬರುವಿಕೆಗಾಗಿ ಸಡಗರದಿಂದ ಕಾಯುತ್ತಿರುತ್ತದೆ. ಕೋಗಿಲೆಗಳು ಬಂದು ಎಲೆಯ ಚಿಗುರನ್ನು ತಿಂದು ಸುಮಧುರವಾದ ಕುಹೂ.... ರಾಗವನ್ನು ಹಾಡುತ್ತಾ ಕವಿಗಳಿಗೆ, ರಸಿಕರಿಗೆ, ದೇವ ವಿರಹಿಗಳಿಗೆ, ಪ್ರೋತ್ಸಾಹದಾಯಕ ಗಾನವನ್ನು ಹಾಡುತ್ತ ಅವರ ಮನಗಳಿಗೆ ಮುದ ನೀಡುತ್ತದೆ. ಮಾಮರ ಎಲ್ಲೋ ಕೋಗಿಲೆ ಮತ್ತೆಲ್ಲೋ ಇರುತ್ತದೆ. ವಸಂತ ಬಂದಾಗ ಮಾಮರದೆಡೆಗೆ ಹಾರಿ ಬರುತ್ತದೆ.

ಅದೇ ರೀತಿ ಶರಣ ಮೇಳ ಎನ್ನುವ ವಸಂತ ಋತು ಬಂದಾಗ ಧರ್ಮ ಕ್ಷೇತ್ರ ಕೂಡಲ ಸಂಗಮ ಎನ್ನುವ ಮಾವಿನ ವನದಲ್ಲಿ ಅನುಭಾವಿಗಳು, ಜ್ಞಾನಿಗಳು, ಮಿಗಿಲಾಗಿ ಪೂಜ್ಯ ಲಿಂಗಾನಂದ ಸ್ವಾಮೀಜಿಯವರು ಕಾರುಣ್ಯದಿಂದ ಬೆಳೆಸಿದ ಪೂಜ್ಯ ಮಾತಾಜಿ, ಪೂಜ್ಯ ಗಂಗಾ ಮಾತಾಜಿ, ಮತ್ತು ಹಲವಾರು ಸ್ವಾಮೀಜಿಯವರು ಎನ್ನುವ ಮಾವಿನ ಮರಗಳು, ಹೊಸ ಹೊಸ ವಿಚಾರಗಳು ಅನುಭಾವಗಳು ಮತ್ತು ಚಿಂತನೆ ಎನ್ನುವ ಚಿಗುರುಗಳನ್ನು ಮೈದುಂಬಿಕೊಂಡು ಶರಣ ಕೋಗಿಲೆಗಳ ಬರುವಿಕೆಗಾಗಿ ಸಡಗರ ಸಂಭ್ರಮದಿಂದ ಕಾಯುತ್ತಿರುತ್ತಾರೆ. ಕರು ಹಸಿದಾಗ ಹಾಲು ಕುಡಿಯ ಬೇಕು ಎನ್ನುವ ಹಂಬಲ ಎಷ್ಟಿರುತ್ತದೆಯೋ ಅದಕ್ಕಿಂತ ಹೆಚ್ಚಿನ ಹಂಬಲ ಅದನ್ನು ಹೆತ್ತ ಹಸುವಿಗೆ ಹಾಲುಡಿಸಬೇಕು ಎಂದು ಇರುತ್ತದೆ. ಹಾಗೆಯೇ, ಪೂಜ್ಯ ಮಾತಾಜಿಯವರಿಂದ ಜ್ಞಾನಾಮೃತ ಹಾಲನ್ನು ಕುಡಿಯಲು ನಮಗೆಷ್ಟು ಕಾತುರವೋ ಅದಕ್ಕಿಂತ ಹೆಚ್ಚಿನ ಕಾತುರ ಅದನ್ನು ಧಾರೆ ಎರೆಯಲು ಪೂಜ್ಯರಿಗಿದೆ.

ಪೂಜ್ಯ ಗಂಗಾ ಮಾತಾಜಿಯವರು, ಕರ್ನಾಟಕ ರಾಜ್ಯ ಮಾತ್ರವಲ್ಲ ನೆರೆಯ ರಾಜ್ಯಗಳಾದ ಆಂಧ್ರ, ಮಹಾರಾಷ್ಟ್ರ ಮತ್ತು ತಮಿಳುನಾಡಿನಲ್ಲಿ ಸಂಚರಿಸಿ ಅಲ್ಲಿರುವ ಎಲ್ಲಾ ಶರಣ ಕೋಗಿಲೆಗಳನ್ನು ಶರಣ ಮೇಳಕ್ಕೆ ಆಹ್ವಾನಿಸುತ್ತಾ ಶರಣ ಮೇಳಕ್ಕೆ ಶರಣ ಕೋಗಿಲೆಗಳ ದಂಡಿನೊಡನೆ ಆಗಮಿಸಲಿದ್ದಾರೆ.

ಒಂದೋ ಎರಡೋ ಕೋಗಿಲೆಗಳು ಕೂಗುತ್ತಲಿದ್ದರೆ, ಕೇಳಲಿಕ್ಕೆ ಎಷ್ಟೊಂದು ಮಧುರ ಆನಂದ! ಸಾವಿರಾರು ಕೋಗಿಲೆಗಳು ಏಕ ಕಾಲಕ್ಕೆ ಕೂಗುತ್ತಿದ್ದರೆ, ಆ ಆನಂದದ ಸವಿಯನ್ನು ವರ್ಣಿಸಲು ಶಬ್ದಗಳೇ ಸಾಲವು. ಹಾಗೆಯೇ ಶರಣ ಮೇಳದಲ್ಲಿ ಲಕ್ಷ ಲಕ್ಷ ಶರಣ ಕೋಗಿಲೆಗಳು ಬಸವ ಭಕ್ತಿಯ ಕುಹೂ ಕುಹೂ ರಾಗ, ಸಮುದಾಯ ಪ್ರಾರ್ಥನೆಯಲ್ಲಿ ಹಾಡುವ ದೃಶ್ಯವನ್ನು ಆ ಸಂದರ್ಭದಲ್ಲಿ ಆಗುವ ಗುರು-ಲಿಂಗ -ಜಂಗಮರ ಅನುಗ್ರಹದ ದಿವ್ಯಾನುಭಾವದ ಆನಂದವನ್ನು ವರ್ಣಿಸಲು ಶಬ್ದಗಳೇ ಸೋಲುತ್ತವೆ.

ಅಲ್ಲಿ ಧರ್ಮಪಿತರಂತೂ ತಮ್ಮ ಮರಿ ಕೋಗಿಲೆಗಳ ಬರುವಿಕೆಗಾಗಿ, **ಗಿಳಿಯ ಹಂಜರವಿಕ್ಕಿ ಸೊಡರಿಗೆಣ್ಣೆಯನೆರೆದು ಬತ್ತಿಯನಿಕ್ಕಿ ಜ್ಯೋತಿ ಹಚ್ಚಿ ಕಾಯುತ್ತಿರುತ್ತಾರೆ**. ಇಂದೆನ್ನ ಮನೆಗೆ ಪ್ರಮಥರು ಬಂದಹರೆಂದು ಗುಡಿ ತೋರಣವ ಕಟ್ಟಿ, ಷಡುಸಮ್ಮಾರ್ಜನೆಯ ಮಾಡಿ ರಂಗವಾಲಿಯನ್ನಿಕ್ಕಿ ಉಘೇ ಚಾಂಗು ಭಲಾ ಎಂಬೆ .., ನಚ್ಚು ಮೆಚ್ಚಿನ ಶರಣರೆನ್ನ ಕಣ್ಣ ಮುಂದೆ ಬಂದು ನಿಂದಿರಲು, ಎನ್ನ ಕಂಗಳ ಬಗೆದು ಕಂಗಳೊಳಗಿಂಬಿಟ್ಟು ಕೊಂಬೆನು,ಎನ್ನ ಮನವ ಬಗೆದು ಮನದೊಳಗಿಂಬಿಟ್ಟು ಕೊಂಬೆನು, ಎನ್ನ ತನುವ ಬಗೆದು ತನುವಿನೊಳಗಿಂಬಿಟ್ಟು ಕೊಂಬೆನು, ಲಿಂಗದೇವನ ಶರಣರೆನ್ನ ಒಡೆಯರಾಗಿ ಮನೆಗೆ ಬಂದರೆ ಅವರ ಪಾದಕ್ಕೆ ಭಕ್ತಿಯ ಮಾಡುವೆನು. ಎಂದು ನಮ್ಮನ್ನೆಲ್ಲಾ ಇಂಬಿಟ್ಟುಕೊಳ್ಳಲು ಎಷ್ಟೊಂದು ಕಾತುರ, ತವಕ ಅವರಿಗೆ ನೋಡಿ! ತಾವು ಒಬ್ಬ ಪ್ರಧಾನಿಯಾಗಿ, ಧರ್ಮ ಕರ್ತ್ರುವಾಗಿ, ನಮ್ಮೆಲ್ಲರನ್ನು ಉದ್ಧರಿಸಿದ ಮಹಾ ಗುರುವಾದರೂ ಅವರಲ್ಲಿ ಸಾಸುವೆಯಷ್ಟೂ ಅಹಂ ಇಲ್ಲವೇ ಇಲ್ಲ ತಾವೇ ಅನುಗ್ರಹಿಸಿದ ನಮ್ಮ ಬರುವಿಕೆಗಾಗಿ ಧರ್ಮಪಿತರು ಇಷ್ಟೊಂದು ವಿನಯ ಶೀಲರಾಗಿ ಕಾಯುತ್ತಿದ್ದಾರೆ ಎಂದಾಗ

ನಾವು ಅವರ ಭಾವನೆಗಳಿಗೆ ಸ್ಪಂದಿಸಿ ಅವರ ಶ್ರೀ ಚರಣದಲ್ಲಿ ಮನವನ್ನು ಮಗ್ನಗೊಳಿಸಲು ಕೂಡಲ ಸಂಗಮಕ್ಕೆ ಹೋಗುವುದು ನಮ್ಮೆಲ್ಲರ ಕರ್ತವ್ಯವಲ್ಲವೇ?

ಅಂದು ಶರಣರನ್ನು ಬಿಟ್ಟು ಕಲ್ಯಾಣದಿಂದ ಅಗಲುವಾಗ, **ಜಜ್ಜನೆ ಜರಿದೆನು, ಜಜ್ಜನೆ ಜರಿದೆನು ನೋಡಯ್ಯಾ! ಬಿಬ್ಬನೆ ಬಿರಿದೆನು ಬಿಬ್ಬನೆ ಬಿರಿದೆನು ನೋಡಯ್ಯ, ನಾನೊಬ್ಬನೆ ಉಳಿದೆನು, ನಾನೊಬ್ಬನೆ ಉಳಿದೆನು ಲಿಂಗದೇವಾ ನಿಮ್ಮ ಶರಣರನಗಲಿದ ಕಾರಣ!** ಎಂದು ನೊಂದು ಕೂಡಲ ಸಂಗಮಕ್ಕೆ ಹೋದರು. ಆದರೂ "***ಹೊಲಬುಗೆಟ್ಟ ಶಿಶು ತನ್ನ ತಾಯ ಬಯಸುವಂತೆ ಬಳಿದಪ್ಪಿದ ಪಶು ತನ್ನ ಹಿಂಡನರಸುವಂತೆ, ಬಯಸುತ್ತಿರ್ದೆನಯ್ಯಾ ನಿಮ್ಮ ಭಕ್ತರ ಬರವನ್ನು, ದಿನಕರನುದಯಕ್ಕೆ ಕಮಳ ವಿಕಸಿತವಾದಂತೆ ಎನಗೆ ನಿಮ್ಮ ಶರಣರ ಬರವು***" ಎಂದು ಸದಾಕಾಲ ನಮ್ಮ ಬರುವಿಕೆಗಾಗಿಯೇ ಅವರ ಹೃದಯ ಮಿಡಿಯುತ್ತಿರುತ್ತದೆ. ಅಕ್ಕ ಹೇಳುವಂತೆ ಶರಣಮೇಳದಲ್ಲಿ ಧರ್ಮಪಿತರು **ಆದಿ ಅನಾದಿಯೆನ್ನದೆ ಗಣ ಮೇಳಾಪವಾಗಿ ಬಂದು ನಮ್ಮನ್ನೆಲ್ಲಾ ಅನುಗ್ರಹಿಸುತ್ತಾರೆ.**

ಅಯ್ಯಾ, ನಿಮ್ಮ ಶರಣರನ್ನು ಕಂಡರೆ ಸುಖ; ಕಾಣದಿದ್ದರೆ ಅವಸ್ಥೆಯಯ್ಯಾ ಎಂದು ಧರ್ಮಪಿತರು ಅಷ್ಟೊಂದು ಹಂಬಲಿಸಿದರೆ, ಆ ಮಹಾ ಗುರುವಿನ ಐಕ್ಯ ಕ್ಷೇತ್ರಕ್ಕೆ ಹೋಗಲು , ಅವರ ಸಂದೇಶವನ್ನು ಕೇಳಲು ನಾವೆಷ್ಟು ಕಾತುರರಾಗಬೇಕು.! ನಾವೇನೇ ಮಾಡಿದರೂ ಆ ಮಹಾಗುರುವಿನ ತ್ಯಾಗಕ್ಕೆ, ಶರಣರ ಬಲಿದಾನಕ್ಕೆ ಸಮವಾದೀತೆ? ಸಾಧ್ಯವೇ ಇಲ್ಲ. ಗುರು ಬಸವ ಜ್ಯೋತಿ ಶರಣ ಮೇಳದಲ್ಲಿ ಪ್ರಜ್ವಲಮಾನವಾಗಿ ಬೆಳಗುತ್ತದೆ. ಬನ್ನಿ,ನಮ್ಮ ಬಾಳಿನ ಹಣತೆಗಳನ್ನು ಹೊತ್ತಿಸಿಕೊಂಡು ಬೆಳಗುವ ಜ್ಯೋತಿಗಳಾಗೋಣ. ಶರಣ ಮೇಳಕ್ಕೆ ಬಂದು, ಶರಣ ಕೋಗಿಲೆಗಳೊಡನೆ ಕೂಡಿ, ಆಡಿ, ಭಕ್ತಿರಾಗವನ್ನು ಹಾಡೋಣ. ಬಸವಾತ್ಮಜೆಯ ಹಾಗೂ ಗುರು ಬಸವಣ್ಣನವರ ಕಾರುಣ್ಯ ಜಲದಲ್ಲಿ ಮಿಂದು ಪಾವನರಾಗೋಣ.

ಬೆಟ್ಟದ ನೆಲ್ಲಿಕಾಯಿ ಸಮುದ್ರದ ಉಪ್ಪು ಎತ್ತಣಿಂದೆತ್ತ ಸಂಬಂಧವಯ್ಯಾ ಆತ್ಮೀಯ ಶರಣ ಬಂಧುಗಳೇ ತಮಗೆಲ್ಲ ಗೊತ್ತಿದೆ; ತಿಂಗಳಿಗೊಮ್ಮೆ ಹುಣ್ಣಿಮೆಯಂದು ಪೂರ್ಣ ಚಂದ್ರನನ್ನು ನೋಡಿ ಸಮುದ್ರ ಉಕ್ಕುತ್ತದೆ. ಹಾಗೆ ಉಕ್ಕಿ ಹರಿದ ನೀರನ್ನು ಬೇರೆ ಕಡೆಗೆ ಹಾಯಿಸಿ ಉಪ್ಪನ್ನು ತಯಾರಿಸುತ್ತಾರೆ. ಎಲ್ಲೋ ಬೆಟ್ಟದ ಮೇಲೆ ಬೆಳೆದ ನೆಲ್ಲಿಕಾಯಿ, ತಾನಿರುವ ಸ್ಥಾನದಲ್ಲೇ ಇದ್ದರೆ ಕೆಲವೇ ದಿನಗಳಲ್ಲಿ ತನ್ನಲ್ಲಿ ಯಾವುದೇ ಹೊಸ ರುಚಿಯನ್ನು ಮೈಗೂಡಿಸಿಕೊಳ್ಳದೇ ಬಿದ್ದು ಹೋಗುತ್ತದೆ. ನಂತರ ಕೊಳೆತು ಹೋಗುತ್ತದೆ. ಆದರೆ ಅದೇ ನೆಲ್ಲಿಕಾಯಿ ಉಪ್ಪಿನೊಂದಿಗೆ ಬೆರೆತಾಗ ಉಪ್ಪಿನ ಕಾಯಿಯಾಗಿ, ಕೊಳೆಯುವ ಬದಲಿಗೆ ಕಳಿಯುತ್ತದೆ. ಅದಕ್ಕೆ ಹೊಸ ರುಚಿ ಬಂದು ಎಲ್ಲರ ಮೆಚ್ಚುಗೆಗೆ ಪಾತ್ರವಾಗುತ್ತದೆ.

ಹಾಗೆಯೇ ದಿನದಿಂದ ದಿನಕ್ಕೆ ಹೆಚ್ಚು ಪ್ರಸ್ತುತವಾದ ಗುರು ಬಸವಣ್ಣನವರ ತತ್ವಗಳು, ನಮ್ಮ ನಿಲುವಿಗೆ ನಿಲುಕದ ಆ ಮಹಾಗುರು ಬಸವಣ್ಣನವರೆಂಬ ಪೂರ್ಣಚಂದ್ರನನ್ನು ನೋಡಿ ಅನೇಕ ವಿಚಾರಗಳು ಎನ್ನುವ ಮುತ್ತು ರತ್ನ ಹವಳಗಳನ್ನು ಗರ್ಭೀಕರಿಸಿಕೊಂಡಿರುವ ಮಾತಾಜಿಯವರ ಹೃದಯ ಶರಧಿ ಉಕ್ಕಿ ಅಲ್ಲಿ ಸ್ವಾನುಭಾವದ ಉಪ್ಪು ತಯಾರಾಗುತ್ತದೆ. ನಾವು ಹುಟ್ಟಿದ ಜಾಗದಲ್ಲೇ ಇದ್ದರೆ ಯಾವ ರೀತಿ ಹುಟ್ಟಿದ್ದೇವೆಯೋ ಅದೇ ರೀತಿ ಒಂದು ದಿನ ಸಾಯುತ್ತೇವೆ. ಆದರೆ, ಶರಣ ಮೇಳದಲ್ಲಿ ಬಸವ ತತ್ವದ ಉಪ್ಪನ್ನು ನಮ್ಮ ಜೀವನಕ್ಕೆ (ನೆಲ್ಲಿಕಾಯಿಯಂತೆ) ಸ್ಪರ್ಶಿಸಿಕೊಂಡರೆ ನಮ್ಮ ಜೀವನ ಕೊಳೆಯುವ ಬದಲಿಗೆ ಕಳಿತು ಹೊಸ ಅರ್ಥವನ್ನು ಪಡೆದುಕೊಳ್ಳುತ್ತದೆ. ಲಿಂಗದೇವನಿಗೆ ಪ್ರಿಯವಾದ ಬದುಕು (ಉಪ್ಪಿನ ಕಾಯಿ) ನಮ್ಮದಾಗುತ್ತದೆ.

ಇನ್ನೂ ಯಾರಾದರೂ ಶರಣ ಮೇಳಕ್ಕೆ ಹೋಗೋಣವೇ ಬೇಡವೇ ಎಂದು ಯೋಚಿಸುತ್ತಿದ್ದರೆ ದಯವಿಟ್ಟು ಆ ಯೋಚನೆಯನ್ನು ಬಿಟ್ಟು, ಈ ಶರಣ ಮೇಳಕ್ಕೆ ಬನ್ನಿ. ಈಗಾಗಲೇ ಶರಣ ಮೇಳಕ್ಕೆ ಬಂದವರಿಗೆ ಶರಣ ಮೇಳದಲ್ಲಿ ಸಿಗುವ ದಿವ್ಯಾನಂದದ ಬಗೆ ಗೊತ್ತಿದೆ. ಇನ್ನೂ ಬರದೇ ಇರುವವರು ಒಂದು ಸಲ ಬಂದು ನೋಡಿರಿ; ಆ ಮೇಲೆ ನನ್ನ ಮಾತು, ಅನುಭವ ನಿಮಗೆ ನಿಜ ಎನಿಸುತ್ತದೆ.

ಅದಕ್ಕಾಗಿ ಶರಣ ಬಂಧುಗಳೇ ಬನ್ನಿ, ನಾವೆಲ್ಲಾ ಸೇರಿ ಗುರು ಬಸವ ತಂದೆಯನ್ನು ಹಾಗೂ ಆದಿ ಶರಣರನ್ನು ಕೊಂಡಾಡೋಣ. ಭಕ್ತಿ ಸಂಬಂಧವನ್ನು ಮೆರೆದು, ಭಕ್ತಿಯ ಕುಹೂ ಕುಹೂ ರಾಗ ಹಾಡಿ ಲಿಂಗದೇವನ ಮೆಚ್ಚುಗೆಯ ಮಕ್ಕಳಾಗೋಣ. ಮಾತಾಜಿಯವರ ಮಮತೆಯ ಕುಡಿಗಳಾಗೋಣ. ತಮ್ಮೆಲ್ಲರ ಬರುವಿಕೆಗಾಗಿ **ಎನ್ನ ತನುವಿಡಿದವರ ತನುವ ಬೆರೆಸುವೆ, ಎನ್ನ ಮನವಿಡಿದವರ ಮನವ ಬೆರೆಸುವೆ** ಎಂದು ಅಪ್ಪ ಬಸವಣ್ಣನವರು ತಮ್ಮ ಹೃದಯದ ಬಾಗಿಲನ್ನು ತೆರೆದು ಕಾಯುತ್ತಿರುತಾರೆ. ಬರುತ್ತೀರಿ ತಾನೆ? ತಮ್ಮೊಡನೆ ಶರಣ ಮೇಳದಲ್ಲಿ ಸೇರಿ ಭಕ್ತಿಯ ಕುಹೂಽಽಽಽಽ... ಕುಹೂಽಽಽಽಽ... ರಾಗ ಹಾಡಲು ಕಾತರನಾಗಿರುವ

ತಮ್ಮವನೇ ಆದ
ಶರಣ ಬಂಧು

ಗುರು ಬಸವಣ್ಣನವರ ವಚನಾಂಕಿತ - ಚಿಂತನ

- ಅಡಿವೆಪ್ಪಾ ಎಸ್. ಪಟ್ನೆ, ಗಡಿ ಕುಸನೂರ

ಧರ್ಮಕರ್ತ ಲೋಕಗುರು ಬಸವಣ್ಣನವರ ವಚನಗಳನ್ನು ಅಭ್ಯಸಿಸಿದಾಗ ಮಹತ್ವಪೂರ್ಣವಾದ ಎರಡು ಘಟ್ಟಗಳು ಗೋಚರಿಸುತ್ತವೆ. 1. ಬಾಲ್ಯಾವಸ್ಥೆಯಲ್ಲಿ ಬರೆದ ವಚನ ಘಟ್ಟ. 2. ಪ್ರೌಢಾವಸ್ಥೆಯಲ್ಲಿ ಬರೆದ ವಚನ ಘಟ್ಟ.

ಪರಮಪೂಜ್ಯ ಗುರು ಬಸವಣ್ಣನವರು ದೇವರು ಎಂಬ ವಿಷಯ ಕುರಿತು ಎರಡು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಮೊದಲನೆಯದಾಗಿ ಪಾರ್ವತಿಯ ಪತಿ ಈಶ್ವರ, ಮಹೇಶ್ವರ, ಹರ ಅಥವಾ ಶಿವ, ಮಹಾದೇವ, ಗಿರಿಜಾಮನೋವಲ್ಲಭನ ಸಂಕೇತವಾದ (ಶಿವಲಿಂಗ) ಕೂಡಲಸಂಗಮದೇವ ಎಂದು ತಮ್ಮ ಕೆಲವು ವಚನಗಳಿಗೆ ಅಂಕಿತನಾಮವನ್ನು ಇಟ್ಟುಕೊಂಡು ವಚನಗಳನ್ನು ಬರೆಯುತ್ತಾರೆ. ಇಂಥ ವಚನಗಳು ಉದಾಹರಣೆಗಾಗಿ ಹೀಗಿವೆ.

1. ಹೊನ್ನ ಹಾವುಗೆಯ ಮೆಟ್ಟಿದವನ ಮಿಡಿ ಮುಟ್ಟಿದ ಕೆಂಜೆಡೆಯವನ
ಮೈಯಲ್ಲಿ ವಿಭೂತಿಯ ಧರಿಸಿದವನ, ಕರದಲ್ಲಿ ಕಪಾಲವ ಪಿಡಿದವನ
ಅರ್ಧನಾರಿಯಾದವನ, ಬಾಣನ ಬಾಗಿಲ ಕಾಯ್ದವನ
ನಂಬಿಗೆ ಕುಂಟಣಿಯಾದವನ, ಚೋಳಂಗೆ ಹೊನ್ನ ಮಳೆಯ ಕರೆದವನ;
ಎನ್ನ ಮನಕ್ಕೆ ಬಂದವನ, ಸದ್ಭಕ್ತರ ಹೃದಯದಲ್ಲಿಪ್ಪವನ;
ಮಾಡಿದ ಪೂಜೆಯಲೊಪ್ಪುವನ ಕೂಡಲ ಸಂಗಯ್ಯನೆಂಬವನ
ಕಂಡು ಬಿಡಲಾರೆನಯ್ಯಾ.

2. ಕೇಶವನಲ್ಲದೆ ಅಂತಃಪರದೈವವಿಲ್ಲೆಂದು
ವೇದವ್ಯಾಸ ಮುನಿ ಭಂಗವಾದುದ ಅರಿಯಿರೆ?
ಅಹಂ ಸರ್ವಕರ್ತಾ ಮಮಕರ್ತಾ ಮಹೇಶ್ವರಃ।
ಎಂದು ವಿಷ್ಣು ಹೇಳಿದ ವಚನವ ಮರೆದಿರಲ್ಲಾ।
ಕೂಡಲಸಂಗಮದೇವನು ದಕ್ಷ ಯಜ್ಞವ ಕೆಡಿಸಿದುದ
ಮರೆದಿರಲ್ಲಾ।

3. ಸಮುದ್ರ ಘನವೆಂಬೆನೆ? ಧರೆಯ ಮೇಲಡಗಿತ್ತು
ಧರೆ ಘನವೆಂಬೆನೆ? ನಾಗೇಂದ್ರನ ಫಣಾಮಣಿಯ ಮೇಲಡಗಿತ್ತು
ನಾಗೇಂದ್ರ ಘನವೆಂಬೆನೆ? ಪಾರ್ವತಿಯ ಕಿರುಗುಣಿಕೆಯ
ಮುದ್ರಿಕೆಯಾಯಿತ್ತು. ಅಂತಹ ಪಾರ್ವತಿ ಘನವೆಂಬೆನೆ?
ಪರಮೇಶ್ವರನ ಅರ್ಧಾಂಗಿಯಾದಳು.
ಅಂತಹ ಪರಮೇಶ್ವರನು ಘನವೆಂಬೆನೆ? ನಮ್ಮ ಕೂಡಲಸಂಗನ
ಶರಣರ ಮನದ ಕೊನೆಯ ಮೊನೆಯ ಮೇಲಡಗಿದನಾಗಿ
ಆ ಶರಣನ ಘನವೆಂಬೆ.

ಈ ರೀತಿಯಾಗಿ ಪಾರ್ವತಿ ಪತಿಯಾದ ಮಹೇಶ್ವರ (ಹರ)ನಿಗೆ ದೇವರೆಂದು ಕಲ್ಪಿಸಿಕೊಂಡು ಈ ಹರ (ಶಿವ)ನ ಸಂಕೇತವಾದ (ಶಿವಲಿಂಗ) 'ಕೂಡಲ ಸಂಗಮದೇವ 'ನನ್ನು ತಮ್ಮ ವಚನಗಳಿಗೆ ಬಸವಣ್ಣನವರು ಅಂಕಿತ ನಾಮವಾಗಿ ಇಟ್ಟುಕೊಳ್ಳುತ್ತಾರೆ.

ಈ ಮೇಲಿನ ಮೂರು ವಚನಗಳಲ್ಲಿ ಬಸವಣ್ಣನವರು ಪಾರ್ವತಿ ಹಾಗೂ ಪಾರ್ವತಿಯ ಪತಿ ಶಿವನ ಉಲ್ಲೇಖವನ್ನು ಮಾಡಿದ್ದಾರೆ. ಅಂಕಿತನಾಮವಂತೂ ಪಾರ್ವತಿ ಗಂಡ ಈಶ್ವರನದ್ದೇ ಎಂದು ಖಚಿತವಾಗುತ್ತದೆ. ಅಂದರೆ ಈ ಮೂರು ವಚನಗಳ ಮಧ್ಯದಲ್ಲಿ ಶಿವನನ್ನು ಪ್ರಸ್ತಾಪಿಸಿದ್ದಾರೆ. ಮೊದಲನೆ ವಚನದಲ್ಲಿ ಅರ್ಧನಾರೀಶ್ವರನೆಂದು, ಎರಡನೇ ವಚನದಲ್ಲಿ ಮಮಕರ್ತಾ ಮಹೇಶ್ವರ ಮತ್ತು ದಕ್ಷಯಜ್ಞವ ಕೆಡಿಸಿದವ ಎಂದು. ಮೂರನೆ ವಚನದಲ್ಲಿ ಪರಮೇಶ್ವರನ ಘನವೆಂಬೆನೆ ನಮ್ಮ ಶರಣರ ಮನದ ಕೊನೆಯ ಮೊನೆಯ ಮೇಲಡಗಿದನು ಎಂದು ಬಳಸುತ್ತಾರೆ.

ಅರ್ಧನಾರಿಯಾದವನ ಅಂದರೆ ಯಾರು? ಶಿವ; ಪಾರ್ವತಿಯ ಪತಿ.
ಮಮಕರ್ತಾ ಮಹೇಶ್ವರ ಅಥವಾ ದಕ್ಷಯಜ್ಞವ ಕೆಡಿಸಿದವ ಅಂದರೆ ಯಾರು?

ಶಿವ; ಪಾರ್ವತಿಯ ಗಂಡ,
ಪರಮೇಶ್ವರನ ಘನವೆಂಬೆನೆ? ಶರಣರ ಮನದ ಕೊನೆಯ ಮೊನೆಯ
ಮೇಲಡಗಿದನು ಎಂದರೆ ಯಾರು? ಪಾರ್ವತಿಯ ಗಂಡ ಶಿವನಲ್ಲದೆ?

ಆದುದರಿಂದ ಇದು ಬಸವಣ್ಣನವರ ವಚನ ಸಾಹಿತ್ಯದ ಮೊದಲ ಘಟ್ಟ.

ಧರ್ಮಕರ್ತ ಲೋಕಗುರು ಬಸವಣ್ಣನವರ ವಚನ ಸಾಹಿತ್ಯದ ಎರಡನೆ ಘಟ್ಟವೆಂದರೆ ಇಷ್ಟಲಿಂಗದ ಪರಿಕಲ್ಪನೆಯನ್ನು ಕೊಟ್ಟು ನಂತರ ಬರೆದ ವಚನಗಳ ಘಟ್ಟ. ಅಂದರೆ ಪರಾತ್ಪರ ಪರಮಾತ್ಮ ಸಚ್ಚಿದಾನಂದನನ್ನು ಕುರಿತು ಹೇಳಿದ ವಚನಗಳ ಘಟ್ಟ. ಅಂದರೆ ತಾವು ಬರೆದ ವಚನಗಳಿಗೆಲ್ಲ 'ಲಿಂಗದೇವ' ಎಂದು ಅಂಕಿತನಾಮ ಬಳಸಿರ ಬಹುದಾದ ವಚನಗಳ ಭಾಗ.

ಗುರು ಬಸವಣ್ಣನವರು ಷಟ್‌ಸ್ಥಲ ಪೂರ್ಣ ಪ್ರಜ್ಞರು. ಅವರು ದೇವರನ್ನು ತಿಳಿದುಕೊಂಡಿಲ್ಲ. ದೇವರನ್ನ ಸಾಕ್ಷಾತ್ಕಾರ ಮಾಡಿಕೊಂಡಿಲ್ಲ ಎಂದಿಲ್ಲ. ಅವರಿಗೆ ಸಾಕಾರ ನಿರಾಕಾರ ದೇವನ ಕುರಿತು ಒಂದು ಅದ್ಭುತವಾದ ದೇವರ ಕಲ್ಪನೆ (ಬೆಳಕು) ವಿಶ್ವವ್ಯಾಪಿಯಾದ ಜ್ಯೋತಿ, ಪ್ರಕಾಶ ಗೋಚರಿಸುತ್ತದೆ. ಆಗ ಅವರಿಗಾದ ಆನಂದ ಅಷ್ಟಿಷ್ಟಲ್ಲ. ಆ ಆನಂದ ಆ ಸುಖ ಪರಮ ಸುಖವಾಗುತ್ತದೆ. ಅದು ಹೇಳಲು ಬಾರದಂಥ ಸುಖ. ಅವರು ಅನುಭವಿಸಿದ ಆ ಸುಖ ಆ ಚಿನ್ಮಯ ಚಿತ್ ಪ್ರಕಾಶ. ಚಿದಾನಂದಕ್ಕೆ ಲಿಂಗ, ಲಿಂಗದೇವನೆಂದು ಹೆಸರಿಟ್ಟು ತಾವು ಧರಿಸಿ ಪೂಜಿಸಿ. ಧರೆಯ ಮೇಲೆ ಬೇಡಿದ ಭಕ್ತರ ಎದೆಯ ಮೇಲೆ ತಂದು ಕಟ್ಟುತ್ತಾರೆ. ಆಗ ಅವರು ಹೇಳುವ ವಚನ ಈ ರೀತಿಯಾಗಿದೆ.

ಚಿನ್ಮಯ, ಚಿತ್ಪ್ರಕಾಶ, ಚಿದಾನಂದ ಲಿಂಗವೆ
ಎನ್ನ ಹೃದಯ ಕಮಲದಲ್ಲಿ, ಬೆಳಗಿ ತೋರುವ
ಪರಂಜ್ಯೋತಿ, ಎನ್ನ ಕರಸ್ಥಲಕ್ಕನುವಾದ ಧರ್ಮಿ
ಎನ್ನ ಕಂಗಳ ಕೊನೆಯಲ್ಲಿ ಮೂರ್ತಿಗೊಂಡಿಪ್ಪೆಯಯ್ಯ,
ಲಿಂಗದೇವಾ.

ಬ್ರಹ್ಮ - ವಿಷ್ಣು - ಮಹೇಶ್ವರ (ಶಿವ) ಎಂಬ ಈ ತ್ರಿಮೂರ್ತಿಗಳಲ್ಲಿ ಒಬ್ಬನಾದ ಪಾರ್ವತಿಯ ಪತಿ ಶಿವನನ್ನು ಕೂಡಲಸಂಗಮದೇವ ಎಂದು ಕರೆದು ವಚನಗಳಿಗೆ ಅಂಕಿತನಾಮವನ್ನಾಗಿ ಬಳಸಿಕೊಂಡ ಘಟ್ಟ ಒಂದಾದರೆ, ಈ ಮೇಲಿನ ವಚನದಂತೆ ನಿರಾಕಾರ ನಿರ್ಗುಣನಾದ ಸಚ್ಚಿದಾನಂದ ಸ್ವರೂಪವಾದ ಪರಾತ್ಪರ ಪರಮೇಶ್ವರನನ್ನು ಕುರಿತು ಅಂದರೆ ಲಿಂಗ, ಲಿಂಗದೇವನನ್ನು ಕುರಿತು ತಮ್ಮ ವಚನಗಳ ಅಂಕಿತ ನಾಮವನ್ನಾಗಿ ಆರಿಸಿಕೊಂಡ ಬಸವಣ್ಣನವರ ವಚನಗಳು, ಇದು ಅವರ ವಚನಗಳ ಎರಡನೆ ಘಟ್ಟ.

ಸೊನ್ನಲಿಗೆಯ ಶ್ರೀ ಶಿವಯೋಗಿ ಸಿದ್ಧರಾಮೇಶ್ವರರ ವಚನಾಂಕಿತಗಳು ಎರಡು. ಅದರಂತೆ ಗುರು ಬಸವಣ್ಣನವರ ವಚನಾಂಕಿತಗಳು ಕೂಡಾ ಎರಡು ಪ್ರಕಾರವಾಗಿ ನಾವು ವಿಭಾಗಿಸಬೇಕು. ಅಂದಾಗ ಮಾತ್ರ ಬಸವತತ್ವಕ್ಕೆ ಒಂದು ಕಳೆ, ಮೆರುಗು ದೊರೆಯುವುದು ಖಂಡಿತ.

ನಿರ್ಗುಣ ನಿರಾಕಾರನಾದ ನಿತ್ಯನಿರಂಜನನಾದ ದೇವರನ್ನು ಕುರಿತು ಅಂಕಿತನಾಮವನ್ನು ಇಟ್ಟುಕೊಂಡ ಬಸವಣ್ಣನವರ ಇನ್ನೂ ಒಂದೆರಡು ವಚನಗಳನ್ನು ನಾವಿಲ್ಲಿ ನೋಡುವ.

ಭಕ್ತಿರತಿಯೆಂಬ ಮದುವೆಗೆ
ಕಣಗಿಲೆಲೆಯ ಉಂಗುರವನಿಕ್ಕಿ
ಮೊಲ್ಲೆ ಮಲ್ಲಿಗೆಯ ತೆರೆಯ ಕಟ್ಟಿ
ಸೇವಂತಿಗೆಯ ಚಪ್ಪರವನಿಕ್ಕಿ
ಪುಷ್ಪಜಾತಿಗಳೆಲ್ಲಾ ನಿಬ್ಬಣವ ಬನ್ನಿರೇ
ನಮಗೆಯು ನಮ್ಮ ಲಿಂಗದೇವಂಗೆಯು ಮದುವೆ.

ಕಾಣಬಾರದ ವಸ್ತು ಕೈಗೆ ಸೇರಿತ್ತಯ್ಯಾ ;
ಆನಂದದಿಂದ ಆಡುವೆ ಹಾಡುವೆನಯ್ಯಾ
ಎನ್ನ ಕಣ್ಣ ತುಂಬಿ ನೋಡುವೆ
ಎನ್ನ ಮನವೊಲಿದು ಭಕ್ತಿಯ ಮಾಡುವೆ
ಲಿಂಗದೇವಯ್ಯಾ ನಿನಗೆ.

ಹಾವು ಕಿಚ್ಚು ಮುಟ್ಟಿಹ ಶಿಶುವೆಂದು;
ಹೆತ್ತತಾಯಿ ಮಗನ ಬೆಂಬತ್ತಿ ಬಪ್ಪಂತೆ
ಇಪ್ಪೆ ಎನ್ನೊಡನೆ, ಲಿಂಗದೇವ.

ಈ ಮೇಲಿನ ಮೂರು ವಚನಗಳ ಅಂಕಿತನಾಮ ಪರಾತ್ಪರ ಪರಮಾತ್ಮನ ಸಂಕೇತವಾದ ಲಿಂಗದೇವನನ್ನು ಕುರಿತು ಬಳಸಿದ ಅಂಕಿತ ನಾಮಗಳು. ಗುರು ಬಸವಣ್ಣನವರು ಇನ್ನೊಂದು ಕಡೆ ಹೇಳುವರು "ಜಗವೆಲ್ಲವರಿಯಲು ಎನಗೊಬ್ಬ ಗಂಡನುಂಟು ಆನು ಮುತ್ತೈದೆ. ಆನು ನಿಟ್ಟೈದೆ ಲಿಂಗದೇವನಂತಪ್ಪ ಗಂಡನೆನಗುಂಟು." ಅಂತ.

ಈ ವಿಶ್ವವಲಯದಲ್ಲಿ ಪಿಂಡಾಂಡ ಬ್ರಹ್ಮಾಂಡಗಳೆಂಬವೆರಡುಂಟು. ಪಿಂಡಾಂಡದಲ್ಲಿ ಜೀವಾತ್ಮ ಬ್ರಹ್ಮಾಂಡದಲ್ಲಿ ಪರಮಾತ್ಮ. ಜೀವಾತ್ಮನೆಂಬ ಸತಿಯ (ಶರಣನ) ಹೃತ್ಕಮಲದಲ್ಲಿ ಪರಮಾತ್ಮನೆಂಬ (ಲಿಂಗ) ಗಂಡ ವಾಸವಾಗಿರುತ್ತಾನೆ. ಹೃದಯಾಂತರಾಳದಲ್ಲಿ ವಾಸವಾಗಿದ್ದ ಲಿಂಗದೇವನೆಂಬ (ಗಂಡನನ್ನು) ಪರಮಾತ್ಮನನ್ನು ಬಹಿರಂಗದಲ್ಲಿ ಹೃದಯದ ಮೇಲೆ ತಂದು ಕಟ್ಟಿ ಪೂಜಿಸಲು ಕಲಿಸಿ ಕೊಟ್ಟರು ಬಸವಣ್ಣನವರು. ಇಲ್ಲಿ ಶರಣ ಸತಿ, ಲಿಂಗಪತಿ ಎಂಬುದೊಂದು ಅನ್ಯೋನ್ಯಭಾವ ಸಂಬಂಧವಿದೆ. ನಮ್ಮ ಪತಿ (ಗಂಡ) ಲಿಂಗ, ಲಿಂಗದೇವ.

ಈ ಮೇಲಿನ ಮೂರು ವಚನಗಳಲ್ಲಿ ಶರಣನ ಪತಿ 'ಕೂಡಲ ಸಂಗಮದೇವ'ಕ್ಕಿಂತಲೂ 'ಲಿಂಗದೇವ' ಸೂಕ್ತವಾಗಿರುತ್ತದೆ. ನಮಗೆಯು ನಮ್ಮ ಕೂಡಲಸಂಗಮ ದೇವಂಗೆಯು ಮದುವೆ ಇಲ್ಲ. ನಮಗೆಯು ನಮ್ಮ ಲಿಂಗದೇವಂಗೆಯೂ ಮದುವೆ. ಎನ್ನ ಮನವೊಲಿದು ಭಕ್ತಿಯ ಮಾಡುವೆ (ಎನ್ನ ಗಂಡನಾದ) ಲಿಂಗದೇವಯ್ಯಾ ನಿನಗೆ ಎನ್ನುತ್ತಾರೆ ಬಸವಣ್ಣನವರು.

ಕೂಸು ಹಾವು, ಹುಳಹುಪ್ಪಡಿ ಮುಟ್ಟೀತೆಂದು, ಬೆಂಕಿಗೆ ಕೈ ಹಾಕೀತೆಂದು ಹೆತ್ತತಾಯಿ ಮಗನ ಹಿಂದೆ ಹಿಂದೆ ಇರುವಳು. ಅದೆ ರೀತಿಯಾಗಿ ಲಿಂಗದೇವ ಎಂಬ ತಾಯಿ ಶರಣ (ಭಕ್ತ) ನೆಂಬ ಮಗನೊಡನೊಡನೆ ಇರುತ್ತಾಳೆ. ಕಾಣಲಾರದುದಕ್ಕೆ ಹಾತೊರೆಯುವುದಕ್ಕಿಂತ ಕಂಡು ಕೇಳಿದುದಕ್ಕೆ ಮನಸಾರೆ ಕೈಯಾರೆ ಪೂಜಿಸಿ, ಪ್ರಾರ್ಥಿಸಿ ಭಕ್ತಿ ಮಾಡುವುದು ಒಳಿತಲ್ಲವೆ? ಕೂಡಲಸಂಗಮದೇವ, ಸಂಗಮನಾಥ ಎನ್ನುವುದು ತಪ್ಪಲ್ಲ; ಇದು ಕೂಡ ವಿಶಾಲವಾದ ಅರ್ಥವೆ! ವಿಶಾಲವಾದ, ಜಗದಗಲವಾದ ಸಕಲ ವಿಸ್ತಾರದ ರೂಹುವಾದ ಪರಮಾತ್ಮನಿಗೆ ಕೂಡಲಸಂಗಮ ದೇವ ಎನ್ನುವುದು ತಪ್ಪಲ್ಲ. ಆದರೆ ಪಾರ್ವತಿಯ ಪತಿಗೆ ದೇವರೆಂದು ಭಾವಿಸಿ (ಶಿವ-ಹರ-ಮಹೇಶ್ವರ) ಕೂಡಲಸಂಗಮ ದೇವ ಎನ್ನುವುದರಲ್ಲಿ ದೇವರ ಬಗ್ಗೆ ಸಂಕುಚಿತ, ಸೀಮಿತವಾಗಿ ಗೋಚರಿಸುತ್ತದೆ.

ಏಕೆಂದರೆ ವಿಶ್ವ ಗುರು ಬಸವಣ್ಣನವರು ನವ ಧರ್ಮ ನಿರ್ಮಾಪಕರು. ಸಮಾಜಕ್ಕೆ ಈ ವಿಶ್ವಕ್ಕೆ ಅವರು ಕೊಟ್ಟ ಕೊಡುಗೆ ಸಾಮಾನ್ಯವಲ್ಲ. ಅಮೋಘವಾದ ಅದ್ಭುತವಾದ ಕೊಡುಗೆ, ಅದ್ಭುತವಾದ ಸಿದ್ಧಾಂತ ಅವರು ಕೊಟ್ಟಿದ್ದಾರೆ. ಈ ವಿಶ್ವದಲ್ಲಿ ಒಂದು ಕಾಲಕ್ಕೆ ಇದ್ದು, ಈಗ ಇಲ್ಲದುದಕ್ಕೆ ನಾವು ದೇವರೆಂದು ಭಾವಿಸಿಕೊಳ್ಳುವುದು ತಪ್ಪು ಹೀಗೆಂದೇ ಬಸವಣ್ಣನವರು ಹೊಸದಾದ ಧರ್ಮವನ್ನು ಹುಟ್ಟು ಹಾಕುತ್ತಾರೆ.

ನಾವು ಬಸವಣ್ಣನವರ ಸಂಪೂರ್ಣ ವಚನಗಳಿಗೆಲ್ಲ 'ಕೂಡಲ ಸಂಗಮದೇವ' ಎಂದು, ಬಳಸಿದರೆ ಬಸವತತ್ವದಲ್ಲಿ ಸತ್ವ ಉಳಿಯುವುದಿಲ್ಲ. ತತ್ವಕ್ಕೆ ಮೆರುಗು ಸಿಗುವುದಿಲ್ಲ, ಬಸವ ಧರ್ಮ ವಿಶ್ವಧರ್ಮ ಎನಿಸಿಕೊಳ್ಳದು.

ಲೋಕ ಗುರು ಬಸವಣ್ಣನವರು ನವಧರ್ಮ ದ್ರಷ್ಟಾರರು; ಹೇಗೆಂದರೆ ಅವರು ಕೊಟ್ಟ ಸಿದ್ಧಾಂತ, ಅವರ ಉಪದೇಶ, ಅವರ ನಡೆ ನುಡಿ ಚಾರಿತ್ರ್ಯ, ಜಗತ್ತಿಗೆ ಅವರ ಕೊಡುಗೆಯಾದ ಇಷ್ಟಲಿಂಗದಿಂದ ಲಿಂಗಾಯತ ಎಂಬ ಹೊಸ ಧರ್ಮಕ್ಕೆ ಅಸ್ತಿತ್ವ ಸಿಕ್ಕಿದೆ. ಆ ಕಾರಣ ಅವರು ನವಧರ್ಮ ದ್ರಷ್ಟಾರರು.

ಗುರು ಬಸವಣ್ಣನವರು ದೇವರಿಗೆ ಲಿಂಗ-ಲಿಂಗದೇವ ಎಂದರು. ಲಿಂಗಕ್ಕೆ ಕೂಡಲಸಂಗಮದೇವ ಎನ್ನುವುದಕ್ಕಿಂತಲೂ ಲಿಂಗಕ್ಕೆ ಲಿಂಗದೇವ ಎನ್ನುವುದು ಸೂಕ್ತ. ಇದು ಸತ್ಯಕ್ಕೆ ಸಮೀಪವಾದುದು.

ಏಕೆಂದರೆ ಇಷ್ಟಲಿಂಗದ ಪರಿಕಲ್ಪನೆ ಮೂಡದ ಪೂರ್ವದಲ್ಲಿ ಕೂಡಲಸಂಗಮದೇವ ಅದು ಆವಾಗ ಸೂಕ್ತ. ಇಷ್ಟಲಿಂಗದ ಕಲ್ಪನೆ ಮೂಡಿದ ನಂತರ ವಚನಗಳ ಅಂಕಿತನಾಮ ಲಿಂಗದೇವ ಎನ್ನುವುದು ಇದು ಈಗ ಸೂಕ್ತ. ಧರ್ಮಕರ್ತ ಬಸವಣ್ಣನವರನ್ನು ಲೋಕಗುರು, ವಿಶ್ವಗುರು, ಲಿಂಗಾಯತ ಧರ್ಮಸ್ಥಾಪಕರು ಎಂಬೆಲ್ಲ ಹೆಸರುಗಳಿಂದ ಏಕೆ ಕರೆಯುತ್ತಾರೆ? ಅವರ ವಿಚಾರಗಳು ಅಗಾಧವಾದವುಗಳು. ಅವರ ಚಿಂತನೆ ಜಗತ್ತಿಗೆ ಒಂದು ಆದರ್ಶ ಪಥವಾಯಿತು.

ಹಾಗಾದರೆ ಅವರ ಚಿಂತನೆ ಯಾವುದು ? ಎಂಥದ್ದು ? ಏಕೆ ಚಿಂತನ ಮಾಡಿದರು ಎಂದು ನೀವು ಕೇಳಬಹುದು. ಧರ್ಮಕರ್ತರ ಗುರಿ ವ್ಯಕ್ತಿಯ ಆತ್ಮೋದ್ಧಾರ ಅಷ್ಟೆ ಅಲ್ಲ ಸಮಾಜ, ರಾಷ್ಟ್ರ ಸಮಸ್ತ ವಿಶ್ವದುದ್ಧಾರವೇ ಅವರ ಜೀವನದ ಗುರಿಯಾಗಿತ್ತು.

ನಾನು ಹೇಗೆ ಹಿಂದೂ ?

ನನ್ನ ಈ ಮಾತನ್ನು ಕೇಳಿದವರು ಧರ್ಮಾಂತರ ಮಾಡಿದೆನೆಂದು ತಿಳಿಯ ಬಾರದು. ನಾನು ಯಾವ ಧರ್ಮಕ್ಕೆ ಸೇರಿದವನು ಎಂಬುದನ್ನು ದೃಢಪಡಿಸಿಕೊಳ್ಳಲು ಯೋಚಿಸಿದಾಗ ನನಗೆ ಈ ಭಾವನೆಯುಂಟಾಗಿದೆ. ನಾನು ಯಾರನ್ನು ಕೇಳಿದರೂ ನೀನು ಹಿಂದೂ ಧರ್ಮಕ್ಕೆ ಸೇರಿದವನೆಂದು ಎನ್ನುತ್ತಾರೆ. ಹೌದು ನನಗೂ ಈವರೆಗೆ ಅದೇ ಭಾವನೆ ಇತ್ತು. ಆದರೆ ನಾನು ಧರ್ಮದ ಬಗ್ಗೆ ಯೋಚಿಸಿದಂತೆಲ್ಲ ನಾನು ಈವರೆಗೆ ತಿಳಿದುಕೊಂಡಿದ್ದು ಕೇವಲ ಭ್ರಮೆಯೇ ಹೊರತು ಸತ್ಯವಲ್ಲ ಎನಿಸುತ್ತದೆ. ನನ್ನನ್ನು ಹಿಂದೂ ಧರ್ಮದವನೆಂದು ಕರೆಯುವವರೂ ಸಹ ಭ್ರಮೆಗೊಳಗಾಗಿದ್ದಾರೆಯೇ ವಿನಾ ವಿಚಾರಪೂರ್ವಕ ಸತ್ಯವನ್ನು ತಿಳಿದು ಹೇಳುತ್ತಿಲ್ಲವೆಂಬುದು ನನಗೆ ಮನವರಿಕೆಯಾಗುತ್ತಿದೆ. ಯಾಕೆಂದರೆ ಧರ್ಮ ಮನುಷ್ಯ ಶರೀರಕ್ಕೆ ಅಂಟಿಕೊಂಡ ಒಂದು ಅಂಗವಲ್ಲ. ಮನುಷ್ಯ ತನ್ನ ಬುದ್ಧಿ ತಿಳುವಳಿಕೆಯಿಂದ ಆಚರಿಸುವ ಆಚರಣೆಯಾಗಿರುತ್ತದೆ.

ಪ್ರತಿಯೊಬ್ಬ ಮನುಷ್ಯನೂ ಯಾವುದಾದರೊಂದು ಧರ್ಮಕ್ಕೆ ಸೇರಿದವನೆಂದು ತಿಳಿಯಬೇಕಾದರೆ ಅವನು ಆ ಧರ್ಮದ ಉಪದೇಶ ಪಡೆದುಕೊಳ್ಳಬೇಕಾಗುತ್ತದೆ. ಪ್ರತಿಯೊಂದು ಧರ್ಮಕ್ಕೂ ಧರ್ಮಗುರುಗಳು ಇದ್ದೇ ಇರುತ್ತಾರೆ. ಉದಾಹರಣೆಗೆ ಹಿಂದುಗಳಲ್ಲಿ ಮಠಗಳೂ, ಗುರುಗಳೂ ಇದ್ದಾರೆ. ಅದರಂತೆ ಇತರ ಧರ್ಮಗಳಲ್ಲಿಯೂ ಇರುತ್ತಾರೆ. ಅವರು ತಮ್ಮ ಧರ್ಮಕ್ಕೆ ಸೇರಿದವರಿಗೆ ಉಪನಯನ ಇಲ್ಲವೇ ದೀಕ್ಷಾ ವಿಧಿಗಳನ್ನು ಮಾಡಿಸಿ, ಧರ್ಮೋಪದೇಶ ನೀಡಿರುತ್ತಾರೆ ಮತ್ತು ಆ ಧರ್ಮದ ಸಂಕೇತಗಳೇನಾದರೂ ಇದ್ದರೆ ಅದನ್ನು ತೊಡಿಸುತ್ತಾರೆ. ಜನಿವಾರ, ಲಿಂಗ-ಶಿಲುಬೆಯ ಗುರುತು ಇಲ್ಲವೇ ಮುದ್ರೆ ವಗೈರೆ. ನಂತರ ಪ್ರತಿನಿತ್ಯ ಆಚರಿಸುವುದಕ್ಕೆ ಸಂಧ್ಯಾವಂದನೆ, ಜಪ, ಮಂತ್ರ ವಗೈರೆ ನಿತ್ಯವಿಧಿಗಳನ್ನು ಬೋಧಿಸುತ್ತಾರೆ. ಆಗ ಅಂಥವನು ಆ ಧರ್ಮಕ್ಕೆ ಸೇರಿದವನಾಗುತ್ತಾನೆ.

ಆದರೆ ನನಗೆ ಮತ್ತು ನನ್ನಂತೆ ಈವರೆಗೆ ಹಿಂದೂಗಳೆಂದು ಕೇವಲ ಭ್ರಮೆಗೊಳಗಾಗಿರುವ ಈ ದೇಶದ ಕೋಟ್ಯಂತರ ಜನಕ್ಕೆ ಯಾವ ಉಪದೇಶ ಇಲ್ಲವೇ ಸಂಸ್ಕಾರವೂ ದೊರೆತಿರುವುದಿಲ್ಲ. ಅವರಿಗೆ ಹಿಂದೂಧರ್ಮ ಗ್ರಂಥವನ್ನು ಕೈಯಿಂದ ಮುಟ್ಟುವ ಕಣ್ಣಿಂದ ನೋಡುವ ಕಿವಿಯಿಂದ ಕೇಳುವ ಅವಕಾಶವನ್ನು ಸಹ ನಿಷೇಧಿಸಲಾಗಿತ್ತು. ಅಂದ ಮೇಲೆ ನಾವೆಲ್ಲ ಹಿಂದೂ ಧರ್ಮವನ್ನು ಇನ್ನೂ ಸ್ವೀಕರಿಸಿಯೇ ಇಲ್ಲ.

ವಾಸ್ತವ ಸ್ಥಿತಿ ಹೀಗಿರುವಾಗ ನಾವು ಹಿಂದೂ ಧರ್ಮಕ್ಕೆ ಸೇರಿದವರು ಹೇಗಾಗುತ್ತೇವೆ ? ಖಂಡಿತವಾಗಿಯೂ ನಾವು ಹಿಂದುಗಳಾಗಲಿಲ್ಲ. ಹಿಂದೂ ಧರ್ಮಕ್ಕೆ ಸೇರಿದವರಲ್ಲವೆಂಬುದು ನನ್ನ ಅಭಿಮತ. ಇನ್ನು ಮೇಲೆ ನಾವು ಯಾವುದಾದರೊಂದು ಧರ್ಮವನ್ನು ಆಯ್ಕೆ ಮಾಡಿಕೊಳ್ಳುವುದು ಅಗತ್ಯವೆಂದು ನನಗೆ ಅನಿಸುತ್ತದೆ. ಇನ್ನು ಮುಂದಾದರೂ ಈ ಬಗ್ಗೆ ಸೂಕ್ತ ಸಲಹೆ ನೀಡಲು ಯಾವುದೇ ಧರ್ಮದವರು ಮುಂದೆ ಬಂದು ನಮ್ಮನ್ನು ಸ್ವಾಗತಿಸಿ, ತಮ್ಮ ಧರ್ಮದಲ್ಲಿ ನಮ್ಮನ್ನು ಸೇರಿಸಿಕೊಳ್ಳಲು ಸಹಾಯ ಮಾಡುವರೇ ?

- ಎಚ್. ಗಣಪತಿಯಪ್ಪ, ವಡ್ನಾಲ, ಸಾಗರ.

ಶರಣ ವ್ರತ ಸ್ವೀಕಾರ

ಶರಣ ಬಂಧುಗಳೇ,

ಶರಣ ವ್ರತ ಸ್ವೀಕಾರ ಮಾಡಿ ಶರಣ ಮೇಳಕ್ಕೆ ಅನೇಕರು ಬರುವುದುಂಟು. 40 ದಿವಸಗಳ ಗುರುಸಾರಾಯ ಸಂಪದ್ ವ್ರತ, 30 ದಿನಗಳ ಲಿಂಗ ಸಾರಾಯ ಸಂಪದ್ ವ್ರತ, 20 ದಿವಸಗಳ ಜಂಗಮ ಸಾರಾಯ ಸಂಪದ್ ವ್ರತ, 10 ದಿವಸಗಳ ಪ್ರಸಾದ ಸಾರಾಯ ಸಂಪದ್ ವ್ರತ. ಇವುಗಳಲ್ಲಿ ಯಾವುದನ್ನಾದರೂ ಸ್ವೀಕರಿಸಿ ದಿ. 14-01-2008ರಂದು ವ್ರತವನ್ನು ಪೂರ್ಣ ಗೊಳಿಸ ಬೇಕು.

1. ಗುರು ಸಾರಾಯ ಸಂಪದ್ ವ್ರತ - ಡಿಸೆಂಬರ್ 2ರಂದು
2. ಲಿಂಗ ಸಾರಾಯ ಸಂಪದ್ ವ್ರತ - ಡಿಸೆಂಬರ್ 12ರಂದು
3. ಜಂಗಮ ಸಾರಾಯ ಸಂಪದ್ ವ್ರತ - ಡಿಸೆಂಬರ್ 22ರಂದು
4. ಪ್ರಸಾದ ಸಾರಾಯ ಸಂಪದ್ ವ್ರತ - ಜನವರಿ 1ರಂದು

ಶರಣ ಮೇಳ ಉತ್ಸವ ಸಮಿತಿ,
ಬಸವ ಮಂಟಪ, 2035, 20ನೇ ಮುಖ್ಯ ರಸ್ತೆ, ಕಾರ್ಡ್‌ರೋಡ್
2ನೇ ಬ್ಲಾಕ್, ರಾಜಾಜಿ ನಗರ, ಬೆಂಗಳೂರು -560010

ಕುಂಕುಮ ಧಾರಣೆಗೆ ಒಪ್ಪಿಗೆ ಸಲ್ಲ

ದಿ. ೧-೧೧-೦೭

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರಿಗೆ ಸು.ಮಲ್ಲಿಕಾರ್ಜುನಪ್ಪ ಮಾಡುವ ಶರಣು ಶರಣಾರ್ಥಿಗಳು. ಬಸವ ಗಂಗೋತ್ರಿಯಲ್ಲಿ 12-10-2007ರಿಂದ 21-10-2007ರವರೆಗೆ ಬಸವ ತತ್ವ ತರಬೇತಿ ಕಮ್ಮಟದ ಮುಕ್ತಾಯ ಸಮಾರಂಭದಲ್ಲಿ ಸಭಿಕರೊಬ್ಬರು ಕೇಳಿದ ಪ್ರಶ್ನೆಗೆ ತಾವು ಕುಂಕುಮ ಹಚ್ಚುವುದು ಶರಣ ಸಂಪ್ರದಾಯದಲ್ಲಿ ಇರಲಿಲ್ಲ, ಆದರೆ ಕುಂಕುಮ ಹಚ್ಚುವುದು ತಪ್ಪೇನಿಲ್ಲ ಎಂದು ಹೇಳಿರುವುದು ತಿಳಿದು ಬಂದಿದೆ. ಹೀಗೆ ಹೇಳಿರುವುದು ನಿಜವಾದಲ್ಲಿ, ಅದು ಆಶ್ಚರ್ಯವಾಗುವುದು. ಕುಂಕುಮ ಹಚ್ಚುವುದು ಶರಣ ಸಂಪ್ರದಾಯವಲ್ಲ ಎಂದು ಹೇಳಿರುವುದು ಸರಿ. ಆದರೆ ಕುಂಕುಮ ಹಚ್ಚಿದರೆ ತಪ್ಪೇನಿಲ್ಲ ಎಂದಿರುವುದು ಶರಣ ಸಂಸ್ಕೃತಿಗೆ ವಿರುದ್ಧ. ಕುಂಕುಮ ಹಚ್ಚುವುದು ಶರಣ ಸಂಸ್ಕೃತಿಯಲ್ಲವೆಂದು ನೀವೇ ಹೇಳಿ, ಅಂಥ ಶರಣ ಸಂಸ್ಕೃತಿಯಲ್ಲದ ಕುಂಕುಮ ಧರಿಸುವುದು ತಪ್ಪೇನಿಲ್ಲ ಎಂದಿರುವುದು ಗೊಂದಲಕ್ಕೆ ಕಾರಣವಾಗುತ್ತದೆ.

ಕುಂಕುಮ, ಹೂವು, ಮಾಂಗಲ್ಯ, ಕಾಲುಂಗುರ, ಗಾಜಿನ ಬಳೆಗಳು ವೈದಿಕ ಸಂಸ್ಕೃತಿಯ ಸಂಕೇತಗಳಾಗಿವೆ. ಇವುಗಳನ್ನು ಧರಿಸಲು ಹಿಂದೂ ಧರ್ಮದ ವಿವಾಹಿತ ಮಹಿಳೆಯರಿಗೆ ಕಡ್ಡಾಯಗೊಳಿಸಿ, ವಿಧವೆಯರಿಗೆ ನಿಷೇಧಿಸಿದೆ. ಇವುಗಳು ಮಂಗಳ ದ್ರವ್ಯಗಳು, ಶುಭ ಸೂಚಕಗಳೆಂದು ಹಿಂದು ಸನಾತನಿಗಳ ನಂಬಿಕೆ. ವಾಸ್ತವಿಕವಾಗಿ ಇವೆಲ್ಲ ಸಸ್ಯ ಮೂಲದವುಗಳು ಮತ್ತು ಕೈಗಾರಿಕಾ ಉತ್ಪನ್ನಗಳು. ಕ್ರೈಸ್ತ, ಮುಸಲ್ಮಾನ ಮಹಿಳೆಯರು ಇವುಗಳನ್ನು ಧರಿಸುವುದಿಲ್ಲ. ಆದ್ದರಿಂದ ಇವು ಹಿಂದೂ ಸಂಸ್ಕೃತಿಯ ಸಂಕೇತವಾಗಿ ಉಳಿದುಕೊಂಡಿವೆ.

ಲಿಂಗಾಯತರು ಹಿಂದುಗಳಲ್ಲ. ಲಿಂಗಾಯತ ಧರ್ಮವನ್ನು ವೈದಿಕದ ವಿರುದ್ಧ ಬಸವಣ್ಣನವರು ಸ್ಥಾಪಿಸಿದ್ದು, ಅದು ವಚನ ಸಾಹಿತ್ಯ ಸಂವಿಧಾನದ ಸ್ವತಂತ್ರ ಧರ್ಮವಾಗಿದ್ದು, ಅದಕ್ಕೆ ತನ್ನದೇ ಆದ ತತ್ವಗಳಿವೆ. ಬಸವ ಸಂವಿಧಾನದಂತೆ ಲಿಂಗಧಾರಣೆ, ರುದ್ರಾಕ್ಷಿ ಧಾರಣೆ, ವಿಭೂತಿ ಧಾರಣೆ ಸರಿಯಾಗಿದೆ. ಲಿಂಗಾಯತ ಧರ್ಮ ಹಿಂದು ಧರ್ಮದ ಬಾಲಂಗೋಚಿಯಲ್ಲ, ಎಂಜಲಲ್ಲ. ಲಿಂಗಾಯತ ಪರಿಪೂರ್ಣ ಸ್ವತಂತ್ರ ಧರ್ಮ.

ಲಿಂಗಾಯತ ಧರ್ಮ ಬಹಳ ವೇಗವಾಗಿ ವೈದಿಕೀಕರಣಗೊಂಡಿದೆ. ಕೆಲವು ಮಠಗಳಲ್ಲಿ ಗೌರಿ, ಗಣೇಶ, ಸರಸ್ವತಿ, ನಂದಿ, ಆಯುಧ ಪೂಜೆಗಳನ್ನು ಮಾಡುತ್ತಾರೆ. ಹಲವು ಮಠಾಧಿಪತಿಗಳೇ ಗಣಪತಿ, ವೀರಭದ್ರ, ಶನೀಶ್ವರ, ನವಗ್ರಹ, ಭದ್ರಕಾಳಿ, ದುರ್ಗಾದೇವಿ ವಿಗ್ರಹಗಳ ಸ್ಥಾಪನೆಗಳನ್ನು ನೆರವೇರಿಸಿ, ಮಠಗಳ ಮೇಲೆ ನಂದಿ ಮೂರ್ತಿ ಸ್ಥಾಪಿಸಿ, ದೇವಸ್ಥಾನಗಳನ್ನು ಉದ್ಘಾಟಿಸುತ್ತಾರೆ. ಇನ್ನೂ ಕೆಲವರು ಜಲಾಶಯ ಪೂಜೆ, ಬಾಗಿನ ಅರ್ಪಣೆ, ಕುಂಭಮೇಳ, ತೀರ್ಥಯಾತ್ರೆ ಮಾಡಿ, ಅರಳಿ, ಬನ್ನಿ ಪೂಜಿಸುತ್ತಾರೆ. ಹಲವು ಲಿಂಗಾಯತರೇ ಹೋಮ, ಗೌರಿ, ಗಣೇಶ, ಸರಸ್ವತಿ, ಲಕ್ಷ್ಮಿ, ಮಾರಿ, ದೇವಿ, ಗಂಗೆ, ಆಯುಧ, ಗೋವು, ಹೊಸ್ತಿಲು, ಬನ್ನಿ, ನವಗ್ರಹ, ನಾಗಪೂಜೆ ಮುಂತಾದ ವೈದಿಕ ಮೂಲದ ಆಚರಣೆಗಳನ್ನು ಮಾಡುತ್ತಿದ್ದಾರೆ. ಹೀಗಾಗಿ ವೈದಿಕ ಆಚರಣೆಗಳೇ ಈಗಿನ ಲಿಂಗಾಯತರ ಆಚರಣೆಗಳಾಗಿ, ಸಮಾಜ ಛಿದ್ರ ಛಿದ್ರವಾಗಿ, ಲಿಂಗಾಯತರು ವೈದಿಕ ಲಿಂಗಾಯತರಾಗುತ್ತಿದ್ದಾರೆ.

ಇಂಥ ಸಂದಿಗ್ಧ ಸ್ಥಿತಿಯಲ್ಲಿ ಕುಂಕುಮ ಧಾರಣೆ ತಪ್ಪೇನಿಲ್ಲವೆಂದರೆ, ಬೇರೆಯವರಿಗೂ ನಮಗೂ ವ್ಯತ್ಯಾಸವಿರುವುದಿಲ್ಲ. ಅವರು ವೈದಿಕ ತತ್ವ ಅನುಸರಿಸುವರೆಂದು ಟೀಕಿಸುವ ನೈತಿಕ ಹಕ್ಕು ನಮಗೆ ಬರುವುದಿಲ್ಲ. ಅಂಕಿತ ಬದಲಾವಣೆ, ಗಣಲಿಂಗ ಸ್ಥಾಪನೆ, ಶಿವರಾತ್ರಿ ಆಚರಣೆ ಇತ್ಯಾದಿಗಳಲ್ಲಿ ಅಭಿಮಾನಿಗಳಲ್ಲೇ ಟೀಕೆಗಳು ಕೇಳಿಬಂದಿವೆ. ಈ ಎಲ್ಲ ವಿಚಾರಗಳು ತಮಗೆ ತಿಳಿದವುಗಳೇ ಆಗಿವೆ. ಬಸವ ಸಂವಿಧಾನದಂತೆಯೇ ಪ್ರವಚನ ಮಾಡುವರೆಂಬ ಏಕೈಕ ಕಾರಣಕ್ಕಾಗಿಯೇ ತಮ್ಮ ಮೇಲೆ ನಮಗೆಲ್ಲ ಅಷ್ಟೊಂದು ಅಭಿಮಾನ ಬಂದುದು.

ಈಗ ಯಾರೂ ಹೇಳದಿದ್ದರೂ ಕುಂಕುಮ ಹಾಕಿಕೊಳ್ಳುತ್ತಿದ್ದಾರೆ. ಆದರೆ ಕುಂಕುಮಧಾರಣೆ ತಪ್ಪೇನಿಲ್ಲವೆಂದು ಅಧಿಕೃತವಾಗಿ ಒಪ್ಪಿಗೆ ನೀಡುವುದಾಗಲಿ, ಪತ್ರಿಕೆಯಲ್ಲಿ ಬರೆಯುವುದಾಗಲಿ, ಪ್ರವಚನದಲ್ಲಿ ಹೇಳುವುದಾಗಲಿ, ಮಾಡಿದರೆ, ಇನ್ನೂ ಸಲಿಗೆ ಸಿಕ್ಕಿ, ಲಿಂಗಾಯತ ಧರ್ಮದ ಅಧಿಕೃತ ಅವನತಿಗೆ ಕಾರಣವಾಗುತ್ತದೆ. ತಿಳಿದವರಿಗೆ ಹೆಚ್ಚಿಗೆ ಬರೆಯಲಾರೆ.

ಇಂತಿ ಶರಣುಶರಣಾರ್ಥಿಗಳು
ಸು. ಮಲ್ಲಿಕಾರ್ಜುನಪ್ಪ, ಮತೀಪುರ, ಕೊಳ್ಳೇಗಾಲ -ತಾ

ವಚನ ದುಂದುಭಿ -10

- ಶರಣ ಸಚ್ಚಿದಾನಂದ

1. "ಜಾತಿವಿಡಿದು ನೆನೆವರೆ ನಮ್ಮ ನೀತಿಯುಳ್ಳ ಶರಣರ ಆಚಾರ ವಿಲ್ಲದವರೆ ಕೀಳು ಜಾತಿಯು.." ಎನ್ನುವ ಸ್ವರ ವಚನದ ಕರ್ತೃ ಯಾರು?
2. ದೀಕ್ಷಾ ತ್ರಯಗಳು ಯಾವುವು?
3. ಪಂಚ ಮಹಾವಾದ್ಯಗಳು ಯಾವುವು?
4. ಪಂಚ ಮಹಾ ಪಾತಕಗಳು ಯಾವುವು?
5. ಇತ್ತೀಚೆಗೆ ಕರ್ನಾಟಕ ಸರಕಾರದ ಬಸವ ಪುರಸ್ಕಾರವನ್ನು ಯಾರಿಗೆ ನೀಡಲಾಯಿತು?
6. "ಬಸವಣ್ಣಾ ನೀವು ಮರ್ತ್ಯಕ್ಕೆ ಬಂದು ನಿಂದೊಡೆ ಭಕ್ತಿಯ ಬೆಳವಿಗೆ ದೆಸೆದೆಸೆಗೆ ಪಸರಿಸಿತ್ತಲ್ಲ.." ಇದು ಯಾರ ವಚನ?
7. "ಮರ್ತ್ಯಲೋಕದ ಭಕ್ತರ ಮನವ ಬೆಳಗಲೆಂದು ಇಳಿತಂದನಯ್ಯಾ ಶಿವನು; ಕತ್ತಲೆಯ ಪಾಳೆಯವ ರವಿ ಹೊಕ್ಕಂತಾಯಿತಯ್ಯಾ" ಈ ವಚನವನ್ನು ಯಾರು ಯಾರ ಬಗ್ಗೆ ಹೇಳಿದ್ದಾರೆ?
8. ಗಣದಾಸಿ ವೀರಣ್ಣನವರ ವಚನಾಂಕಿತವೇನು?
9. ಜಕ್ಕಣಯ್ಯನವರ ವಚನಾಂಕಿತವೇನು?
10. ರಾಯಮ್ಮ ನವರ ವಚನಾಂಕಿತವೇನು?
11. "ಹರನ ಕರುಣವ ಪಡೆದ ಸಾಮರ್ಥ್ಯದ ಬಲಹಿಂದ ಶಿವಶರಣರೊಡನೆ ಸೆಣಸಿದರೆ ಲೇಸುಂಟೇ? ಅಘಟಿತ ಘಟಿತರಿಗೆ ಅಘಟಿತ ಘಟಿತರುಂಟು ನೋಡಾ. ನೊಸಲಲೊಬ್ಬ ಕಣ್ಣ ತೆಗೆದರೆ ಅಂಗಾಲಲೊಬ್ಬ ಕಣ್ಣ ತೆಗೆವನು" ಎಂದು ಯಾರು ಯಾರಿಗೆ ಹೇಳಿದರು?
12. "ಮರವು ಎತ್ತರಕ್ಕೆ ಬೆಳೆದ ಹಾಗೆ ನೆರಳು ಬೆಳೆಯುವಂತೆ, ವ್ಯಕ್ತಿಯ ವ್ಯಕ್ತಿತ್ವ ಎತ್ತರಕ್ಕೆ ಬೆಳೆದ ಹಾಗೆ ನಿಂದನೆಗಳು, ಆರೋಪಗಳು ಎಂಬ ನೆರಳೂ ಬೆಳೆಯುತ್ತದೆ."ಇವು ಯಾರ ನುಡಿಗಳು?
13. "ಆಕಾಶನವಡರುವಂಗೆ ಅಟ್ಟಗೋಲ ಹಂಗೇಕೋ? ಸೀಮೆಯ ಮೀರಿದ ನಿಸ್ಸೀಮಂಗೆ ಸೀಮೆಯ ಹಂಗೇಕೋ? ನಿಸ್ಸೀಮ ಸಿದ್ಧರಾಮಯ್ಯಂಗೆ ಲಿಂಗವೆಂದೇನು ಹೇಳಾ?" ಇದು ಯಾರ ನುಡಿ
14. ಗುರುಬಸವಣ್ಣನವರ ಕ್ರಾಂತಿಯ ಆತ್ಯಂತಿಕ ಘಟನೆ ಯಾವುದು?
15. 21ನೇ ಶರಣಮೇಳದಲ್ಲ ಎಷ್ಟನೇ ಬಸವಧರ್ಮ ಪೀಠಾರೋಣ ಕಾರ್ಯಕ್ರಮ ನಡೆಯಲಿದೆ?

ವಚನ ದುಂದುಭಿ -೯ರ ಸರಿ ಉತ್ತರಗಳು

01. ಮಂತ್ರ, ಧ್ಯಾನ, ಜಪ, ಸ್ತೋತ್ರ.
02. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ.
03. ಹೆಣ್ಣು ಹೊನ್ನು ಮಣ್ಣು ಇವುಗಳ ಮೇಲಿನ ವ್ಯಾಮೋಹ.
04. ಜಾತಿ, ವರ್ಣ, ಆಶ್ರಮ, ಕುಲ, ಗೋತ್ರ, ನಾಮ-ಇವುಗಳ ಬಗ್ಗೆ ಅತೀ ಅಭಿಮಾನ
05. ಸದ್ಯೋಜಾತ ಲಿಂಗ
06. ಚೆನ್ನ ರಾಮೇಶ್ವರಲಿಂಗ
07. ಮಹಾಲಿಂಗ
08. ಮಧುವರಸ
09. ನಿಷ್ಕಲಲಿಂಗ
10. ಅಲ್ಲಮ ಪ್ರಭುದೇವರು ಮುಕ್ತಾಯಕ್ಕನಿಗೆ
11. ಚೆನ್ನ ಬಸವಣ್ಣನವರು ಗುರುಬಸವಣ್ಣನವರಿಗೆ
12. ನೆನೆವೆನಯ್ಯ ಬಸವಣ್ಣ ನಿಮ್ಮ ಚರಣವೆನ್ನ ಮನದಲ್ಲಿ.... ಎನ್ನುವ ವಚನದಲ್ಲಿ
13. ರೇವಣಸಿದ್ಧ
14. ಶಿವಬೆಳಕು
15. ನವದೆಹಲಿಯಲ್ಲಿ

ವಚನ ದುಂದುಭಿ -೯ರ ಸರಿ ಉತ್ತರ ಕೊಟ್ಟವರು

01. ಶೀಲ ಆನಂದ ಗುಡಸ್, ಬೆಳಗಾವಿ
2. ಪ್ರತಿಭಾ ಸಂತೋಷ್ ಗುಡಸ್
3. ಮೇಘ.ಎಂ.ಪಾಟೀಲ್,ಬೆಳಗಾವಿ
4. ಗಣಪತಿ ಬಿರಾದಾರ,ಬೀದರ
5. ಸರ್ವಮಂಗಳಾ ಗಂಗಾಧರ, ಬೆಂಗಳೂರು
6. ಎಚ್.ಚಂದ್ರಿಕಾ, ಭದ್ರಾವತಿ
7. ಎಚ್. ಶಾಂತಮ್ಮ ಭದ್ರಾವತಿ
8. ವಚನ,ಬಳ್ಳಾರಿ
9. ಮಲ್ಲನಗೌಡ ಪೋ.ಪಾಟೀಲ,ರಾಯಚೂರು
10. ನಿರ್ಮಲಾ ಜಯದೇವ, ಬೆಂ
11. ಉದಯ.ನಾ. ದೇಸಾಯಿ
12.

ಸ್ವಯಂ ಸೇವಕರಿಗೆ ಕರೆ

- ಮಾತಾಜಿ.

12ನೆಯ ಶತಮಾನದ ಮಹಾಮನೆಯಲ್ಲಿ ನಡೆದಂತಹ ದಾಸೋಹ ಸೇವೆಯನ್ನು ನೆನಪಿಡುವಂತೆ ಶರಣ ಮೇಳದ ದಾಸೋಹ ನಡೆಯಬೇಕು, ನಡೆಯುತ್ತ, ಧರ್ಮಪಿತರ ಆದೇಶ ಹೀಗಿರುತ್ತದೆ.

ಭಕ್ತನು ಭಕ್ತನ ಮನೆಗೆ ಬಂದಡೆ, ಭೃತ್ಯಾಚಾರನ ಮಾಡಬೇಕು;
ಕರ್ತನಾಗಿ ಕಾಲ ತೊಳೆಯಿಸಿಕೊಂಡಡೆ, ಹಿಂದೆ ಮಾಡಿದ ಭಕ್ತಿಗೆ ಹಾನಿ!
ಲಕ್ಷಗಾವುದ ದಾರಿಯ ಹೋಗಿ, ಭಕ್ತನು ಭಕ್ತನ ಕಾಂಬುದು ಸದಾಚಾರ.
ಅಲ್ಲಿ ಕೂಡಿ ದಾಸೋಹವ ಮಾಡಿದೊಡೆ
ಕೂಡಿಕೊಂಬನು ನಮ್ಮ ಲಿಂಗದೇವ. (ಬ.ವ.ದಿ.248)

ಶರಣರು ಶರಣರನ್ನು ಭೇಟಿಯಾದಾಗ ಪರಸ್ಪರ ಉಪಚರಿಸಬೇಕು, ಸೇವೆ ಮಾಡಬೇಕು. ತಾನೇ ಶ್ರೇಷ್ಠ ಎಂಬ ಅಹಂಕಾರ ತಾಳಿ ಇನ್ನಿತರರು ಸೇವೆ ಮಾಡಲೆಂದು ನಿರೀಕ್ಷಿಸಬಾರದು. ಲಕ್ಷಗಾವುದ ದೂರವೇ ಇರಲಿ ಸಹ ಧರ್ಮೀಯ ಶರಣರನ್ನು ಕಾಣಲು ಹೋಗಬೇಕು. ಹಾಗೆ ಹೋದಾಗ ದಾಸೋಹಂ ಭಾವನೆಯಿಂದ ತನು ಸೇವೆ -ಮನ ಸೇವೆ-ಧನ ಸೇವೆ ಮಾಡಬೇಕು. ಅಂಥವರನ್ನು ಲಿಂಗದೇವ ಮೆಚ್ಚಿ, ಒಲಿದು ಕೂಡುವನು. ಧರ್ಮಪಿತರ ಆದೇಶವನ್ನು ಪಾಲಿಸಲು ಇರುವ ಸೂಕ್ತ ಅವಕಾಶ ಶರಣ ಮೇಳ. ಅಲ್ಲಿ ದಾಸೋಹ ಮಾಡಲು ಅವಕಾಶ ಉಂಟು. ಒಬ್ಬೊಬ್ಬ ಶರಣ ಬಂಧುವನ್ನು ಭೇಟಿಯಾಗಲು ಬಹುದೂರ ಕ್ರಮಿಸಬೇಕಿಲ್ಲ. ಎಲ್ಲರೂ ಒಂದೇ ಕಡೆ ಸಿಗುತ್ತಾರೆ. ಜೊತೆಗೆ ಜ್ಞಾನ ದಾಸೋಹವೂ ಇರುತ್ತದೆ. ಆದ್ದರಿಂದ ಅಚ್ಚುಕಟ್ಟಾಗಿ ದಾಸೋಹವು ನಡೆಯಬೇಕಾದರೆ ಹೆಚ್ಚು ಜನ ಶರಣ ಬಂಧುಗಳು ಸ್ವಯಂ ಸೇವಕರಾಗಿ ದುಡಿಯಲು ಸಿದ್ಧರಾಗಬೇಕು. ಶರಣ ಮೇಳವೆಂಬ ತೌರಿನ ಹಬ್ಬಕ್ಕಾಗಿ ರಜೆಗಳನ್ನು, ಸಮಯವನ್ನು ಕಾಯ್ದಿರಿಸಿಕೊಳ್ಳಬೇಕು; ನೀಡಲು ಕಾಣಿಕೆಯನ್ನು ಹೊಂದಿಸಿ ಇಡಬೇಕು. ಶರಣ ಮೇಳ ಪೂರೈಸಿ ಹೋಗುತ್ತಲೇ ಹುಂಡಿಯೊಂದನ್ನು ಇಟ್ಟು ಕಾಣಿಕೆ ಸಂಗ್ರಹಿಸುತಲಿರಬೇಕು. ತಮ್ಮ ಇಷ್ಟಾರ್ಥಗಳು ಸಿದ್ಧಿಯಾದರೆ ಶರಣ ಮೇಳಕ್ಕೆ ಬಂದು ಸೇವಾ ಕಾರ್ಯಕೈಗೊಳ್ಳುತ್ತೇವೆ ಎಂಬ ಹರಕೆಯನ್ನು ಮಾಡಿಕೊಳ್ಳಬೇಕು. ತನು ದಾಸೋಹಿಗಳು ಡಿಸೆಂಬರ್ 15ರಿಂದಲೇ ಬರಲು ಪ್ರಯತ್ನಿಸಬೇಕು. ಅತ್ಯಂತ ಹೆಚ್ಚಿನ ಜನರು ಕನಿಷ್ಠ ಜನವರಿ 1ರಿಂದಲಾದರೂ ಬಂದು ಸೇವಾ ಕಾರ್ಯದಲ್ಲಿ ತೊಡಗಬೇಕು. ಆರ್ಥಿಕ ವಾಗಿ ಅಶಕ್ತರಿದ್ದವರಿಗೆ ರಾಷ್ಟ್ರೀಯ ಬಸವ ದಳದವರು ಗಾಡಿ ಖರ್ಚು ಕೊಟ್ಟು ಕಳಿಸಿಕೊಡಬೇಕು. ಬುದ್ಧಿ ಜೀವಿಗಳಿಗೂ ಸಾಕಷ್ಟು ಕೆಲಸವಿರುತ್ತದೆ. ಶರಣೆಯರಿಗೂ ಸೇವಾ ಕಾರ್ಯ ಸಾಕಷ್ಟು ಇರುತ್ತದೆ. ಸಮಯವನ್ನು ಒದಗಿಸಿಕೊಂಡು ಬಂದು ಯಾರು ಬೇಕಾದರೂ ಸೇವೆ ಮಾಡಬಹುದು.

ಶರಣ ಮೇಳಕ್ಕೆ ಬಂದ ಶರಣರಿಗೆ ಮಾಡುವ ಉಪಚಾರ,
ಧರ್ಮಗುರು ಬಸವಣ್ಣನವರಿಗೆ ಮಾಡುವ ಉಪಚಾರ,
ಶರಣ ಮೇಳದ ವಿಸ್ತರಣೆಯಲ್ಲಿದೆ
ಬಸವ ಗುರುವಿನ ಕೀರ್ತಿ, ಲಿಂಗಾಯತ ಧರ್ಮದ ಮಹತಿ।

ಎಂಬುದು ತಮ್ಮೆಲ್ಲರಲ್ಲಿ ಅಚ್ಚೊತ್ತಲಿ.

----------*-----*-----*

ಕಲ್ಯಾಣ ಕಿರಣದ ಓದುಗರಿಗೆ ಸೂಚನೆ

ಕೆಲವರಿಗೆ ಕಲ್ಯಾಣ ಕಿರಣ ಎರಡು, ಮೂರು ಪ್ರತಿ ಬರುತ್ತವೆ. ಹಾಗೆ ಬಂದಾಗ ಒಂದನ್ನು ಉಳಿಸಿಕೊಂಡು, ಉಳಿದವನ್ನು ಅದೇ ಕವರ್ ಸಮೇತ ವಾಪಸ್ಸು ಮಾಡಿದರೆ ಕಡಿತ ಮಾಡಲು ಅನುಕೂಲವಾಗುವುದು.

ಇನ್ನು ಕೆಲವರಿಗೆ ಕ್ರಮವಾಗಿ ಬರುತ್ತಲಿಲ್ಲ. ಅಂಥವರು ಒಂದು ಪತ್ರ ಬರೆದು ತಿಳಿಸಬೇಕು. ಶರಣ ಮೇಳದಲ್ಲಿ ಕಲ್ಯಾಣ ಕಿರಣದ ಚಂದಾ ಹಾಗೂ ದೂರು ಸ್ವೀಕರಿಸಲು ಕಾರ್ಯಾಲಯ ತೆರೆದಿರಲಾಗುವುದು. ಆಗ ತಮ್ಮ ಕೊರತೆ ಹೇಳಿಕೊಳ್ಳಬಹುದು. ಕಾರಣಾಂತರದಿಂದ ಬರಲಾಗದವರು ಶರಣ ಮೇಳಕ್ಕೆ ಬರುವವರ ಸಂಗಡ ಹೇಳಿ ಕಳಿಸಬಹುದು.

ಶರಣ ಮೇಳದಲ್ಲಿ ಲಭ್ಯವಾಗಲಿರುವ ಹೊಸ ಸಾಮಗ್ರಿಗಳು

1. 2008ನೆಯ ಇಸವಿಯ ಕ್ಯಾಲೆಂಡರ್

ಬಸವ ಕಿರಣ - ಭಿತ್ತಿಪಟ : 16 ಅಂಗುಲ ಅಗಲ, 25 ಅಂಗುಲ ಉದ್ದ ಅಳತೆಯ ಗೋಡೆ ಕ್ಯಾಲೆಂಡರ್, ಒಂದು ಪ್ರತಿಗೆ 20-00 ರೂ. 2. ಬಸವ ದೀಪ್ತಿ-2008ನೆಯ ಇಸವಿಯ ದಿನದರ್ಶಿ ಬೆಲೆ 8-00ರೂ ಹಾಗೂ ಲಿಂಗಾಯತ ಧರ್ಮದ ಹಬ್ಬ -ಹುಣ್ಣಿಮೆ -ಉತ್ಸವಗಳ ವಿವರ ಹೊಂದಿರುವ ಜೇಬಿನಲ್ಲಿ ಇಟ್ಟುಕೊಳ್ಳಬಹುದಾದ ಚಿಕ್ಕ ಆಕಾರದ ಕಾರ್ಡ್ ಬೆಲೆ 1-00ರೂ ಗೆ ದೊರೆಯುತ್ತದೆ.

2. ವಿಶೇಷ ಕೈಗಡಿಯಾರಗಳು (ಶರಣ ಮೇಳಕ್ಕೆ ವಿಶೇಷ ರಿಯಾಯಿತಿ)

ಶ್ರೀಗುರು ಬಸವಣ್ಣನವರ ಭಾವಚಿತ್ರ ಇರುವ ವಿಶೇಷ ಕೈಗಡಿಯಾರವನ್ನು ಬಸವ ಪಂಚಮಿ ದಿನ ದಿ18-8-2007ರಂದು ಬಿಡುಗಡೆ ಮಾಡಲಾಗಿದ್ದು ಬೆಲೆ 350 ರೂ.

1. ಕೇವಲ ಬಸವಣ್ಣನವರು ಇರುವುದು
2. ಧರ್ಮ ಗುರುವಿನ ಭಾವಚಿತ್ರ ದೊಡನೆ ಪೂಜ್ಯ ಗುರುಗಳ ಭಾವಚಿತ್ರ.
3. ಧರ್ಮ ಗುರುವಿನ ಭಾವಚಿತ್ರದೊಡನೆ ಪೂಜ್ಯ ಮಾತಾಜಿಯವರ ಭಾವಚಿತ್ರ ಇರುವುದು.

ಪುರುಷರು ಮತ್ತು ಮಹಿಳೆಯರು ಉಭಯತರವೂ ಲಭ್ಯವಿರುತ್ತವೆ . ಗ್ಯಾರಂಟಿ ಕಾರ್ಡ್ ಇರುತ್ತದೆ. ಪ್ರತಿಯೊಬ್ಬರು ಖರೀದಿಸಿದ್ದಕ್ಕೆ ರಸೀತಿ ಪಡೆದುಕೊಳ್ಳಲು ಕೋರುತ್ತೇವೆ. ಬೆಲೆ : ಒಂದಕ್ಕೆ 350 ರೂ. ಒಂದು ವೇಳೆ ಕೊರಿಯರ್‌ದಲ್ಲಿ ತರಿಸಿಕೊಳ್ಳುವುದಾದರೆ 400 ರೂಗೆ ಬಸವ ಧರ್ಮ ಪೀಠದ ಹೆಸರಿಗೆ ಡಿ.ಡಿ.ತೆಗೆದು ಬೆಂಗಳೂರು ವಿಳಾಸಕ್ಕೆ ಕಳಿಸಬೇಕು.

3. ಮಾಂಗಲ್ಯಗಳು

ಲಿಂಗಾಯತ ಧರ್ಮದ ಷಟ್ಕೋನ -ಇಷ್ಟಲಿಂಗ ಚಿಹ್ನೆಯುಳ್ಳ ಮಾಂಗಲ್ಯ ಬಹಳ ಸುಂದರವಾಗಿದ್ದು, ಜನಪ್ರಿಯವಾಗುತ್ತಲಿವೆ. ಮನೆಯಲ್ಲಿ ಮದುವೆ ಸಿದ್ಧತೆಯಲ್ಲಿರುವವರು ಮಾತ್ರವಲ್ಲ ಈಗಾಗಲೇ ವಿವಾಹವಾಗಿರುವವರು ಸಹ ಹಳೆಯದನ್ನು ಬದಲಾಯಿಸಿ ಹೊಸದನ್ನು ಧರಿಸುತ್ತಿದ್ದಾರೆ. ಕೆಲವನ್ನು ಸಿದ ಪಡಿಸಿ ಇಟ್ಟಿರಲಾಗುತ್ತದೆ. ಮೂರುವರೆ, ನಾಲ್ಕು ಗ್ರಾಂ ಹೀಗೆಲ್ಲ ಬೇಡಿಕೆಯ ಮೇರೆಗೂ ಮಾಡಿಸಿ ಸಿದ್ಧಪಡಿಸಿ ಇಟ್ಟಿದ್ದೇವೆ. ಹಾಕಿರುವ ಬಂಗಾರದ ಪ್ರಮಾಣ ಅನುಸರಿಸಿ 5500 ರೂ ದಿಂದ 6000ದವರೆಗೂ ಬೆಲೆಯಾಗುತ್ತದೆ. ಬೇಕಾದವರು ಫೋನ್ ಮೂಲಕ ಆರ್ಡರ್ ಕೊಡಬಹುದು.

ಹೆಚ್ಚಿನ ವಿವರಗಳಿಗಾಗಿ ಕೆಳಗಿನ ವಿಳಾಸಕೆ ಸಂಪರ್ಕಿಸಿ :
ಬಸವ ಮಂಟಪ, 2035, 20ನೇ ಮೇನ್
2ನೇ ಬ್ಲಾಕ್, ರಾಜಾಜಿ ನಗರ, ಬೆಂಗಳೂರು -560010
ದೂರವಾಣಿ : 080- 22923736/ 23325335

ಶರಣ ಮೇಳಕ್ಕೆ ಬಂದಾಗ ಖರೀದಿಸಬಹುದು

ಪೂಜ್ಯ ಶ್ರೀ ಬಸವ ಕುಮಾರ ಸ್ವಾಮೀಜಿ
ಬಸವ ಮಂಟಪ, ಬೆಂಗಳೂರು

ಭಾವ ಸಂಗಮ (ವಧು -ವರಾನ್ವೇಷಣ ಕೇಂದ್ರ)

"ಭಾವ ಸಂಗಮ" ಎಂಬ ವಧು-ವರರ ವೇದಿಕೆಯನ್ನು ಬೆಂಗಳೂರು ಬಸವ ಮಂಟಪದಲ್ಲಿ ಈವರೆಗೆ ನಡೆಸಲಾಗುತ್ತಿದ್ದು, ಕಾರಣಾಂತರಗಳಿಂದ ಪ್ರಸ್ತುತ ವಧು-ವರರ ವೇದಿಕೆಯನ್ನು ಈ ಕೆಳಕಂಡ ವಿಳಾಸಕ್ಕೆ ಬದಲಾವಣೆ ಮಾಡಲಾಗಿದ್ದು ಈ ವಿಷಯಕ್ಕೆ ಸಂಬಂಧಿಸಿದ ವ್ಯವಹಾರವನ್ನು ಹೊಸ ವಿಳಾಸದೊಂದಿಗೆ ಮಾಡಬೇಕೆಂದು ಮನವಿ.

ಶರಣು ಶರಣಾರ್ಥಿಗಳೊಂದಿಗೆ

ಶರಣ.ಇಂದುಶೇಖರ್, ಖಜಾಂಚಿ, ರಾಷ್ಟ್ರೀಯ ಬಸವ ದಳ
870, ಮೊದಲನೆಯ ಮಹಡಿ, 2ನೇ ಅಡ್ಡರಸ್ತೆ,
2ನೇ ಮುಖ್ಯರಸ್ತೆ, ಎರಡನೆ ಹಂತ, ರಾಜಾಜಿನಗರ, ಬೆಂಗಳೂರು -10
ದೂ: 23324277/9945684230

ಓಂ ಶ್ರೀ ಗುರುಬಸವಲಿಂಗಾಯ ನಮಃ

866666

ಧರ್ಮಕ್ಷೇತ್ರ ಕೂಡಲಸಂಗಮದಲ್ಲಿ
2008 ರ ಜನವರಿ 11, 12, 13, 14, 15ರಂದು ನಡೆಯಲಿರುವ
ಇಪ್ಪತ್ತೊಂದನೆಯ ಶರಣಮೇಳದ ಅಂಗವಾಗಿ
ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ ಅವರ

ಪ್ರವಾಸ ಕಾರ್ಯಕ್ರಮ

ಆತ್ಮೀಯ ಶರಣ ಬಂಧುಗಳಿಗೆ, ಬಸವ ಸ್ಮರಣಪೂರ್ವಕ ಶುಭ ಹಾರೈಕೆಗಳು.

ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಕರ್ತ ಬಸವಣ್ಣನವರ ಕೃಪೆಯಿಂದ ನಾವಿತ್ತ ಕ್ಷೇಮ. ನಿಮ್ಮ ಕ್ಷೇಮ ಹಾರೈಸುತ್ತೇವೆ. ಶರಣ ಬಂಧುಗಳ ಹಿಗ್ಗಿನ ಉತ್ಸವ, 2008ನೆಯ ಇಸವಿಯ ಜನವರಿ ದಿ. 11ರಿಂದ 15ರವರೆಗೆ ನಡೆಯುವ 21ನೆಯ ಶರಣ ಮೇಳದ ಪ್ರಚಾರಾರ್ಥ ಮತ್ತು ಸಂಘಟನೆ, ಸಂದರ್ಶನದ ದೃಷ್ಟಿಯಿಂದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈಗ ತಮ್ಮ ಊರಿಗೆ ಅವರು ಆಗಮಿಸುವ ದಿನಾಂಕದ ವೇಳಾಪಟ್ಟಿಯನ್ನು ಕಳಿಸಲಾಗಿದೆ. ಈ ದಿನಾಂಕಕ್ಕೆ ಕಾರ್ಯಕ್ರಮ ಏರ್ಪಡಿಸುವ ಬಗ್ಗೆ ತಮ್ಮ ಸಾಧ್ಯಾಸಾಧ್ಯತೆಯನ್ನು ಬೇಗನೆ ನಮಗೆ ದೂರವಾಣಿಯ ಮೂಲಕ ಅಥವಾ ಪತ್ರ ಮುಖೇನ ತಿಳಿಸಬೇಕು. ಬೆಂಗಳೂರು ವಿಳಾಸಕ್ಕೆ ವ್ಯವಹರಿಸಬೇಕು. ಕಾರಣಾಂತರದಿಂದ ನಿಮಗೆ ಕಾರ್ಯಕ್ರಮ ಏರ್ಪಡಿಸಲು ಆಗದೆ ಇದ್ದರೆ ಅಥವಾ ಇನ್ನೂ ಹೆಚ್ಚುವರಿ ದಿನಾಂಕಗಳು ಬೇಕಾಗಿದ್ದರೆ ತಕ್ಷಣ ತಿಳಿಸಿರಿ.

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಸಂದರ್ಶಿಸಲಿರುವ ಈ ಸಮಯವನ್ನು ಸಂಘಟನೆಗಾಗಿ ಬಳಸಿಕೊಳ್ಳುವುದೇ ಅಲ್ಲದೆ ದೀಕ್ಷಾ ಕಾರ್ಯಕ್ರಮವನ್ನು ಏರ್ಪಡಿಸಲೂ ಬಹುದು. ಪ್ರತ್ಯೇಕವಾಗಿ ಪತ್ರ ಬರೆಯಲು ಸಾಧ್ಯವಾಗುತ್ತಿಲ್ಲ. ಸಂಬಂಧಪಟ್ಟವರು ನೀವೇ ಕಾರ್ಯಕ್ರಮ ವ್ಯವಸ್ಥೆ ಮಾಡಿಕೊಳ್ಳಿರಿ. 2008 ನೆಯ ಇಸವಿಯ 21ನೆಯ ಶರಣ ಮೇಳದ ಸರ್ವತೋಮುಖ ಯಶಸ್ಸಿಗೆ ತಾವು ಸಹಕರಿಸುವಿರಾಗಿ ನಂಬಿದ್ದೇವೆ.

ವಾಸ್ತವ್ಯ : ಬೆಂಗಳೂರು

ಪೂಜ್ಯ ಶ್ರೀಮನ್ ನಿರಂಜನ
ಮಹಾ ಜಗದ್ಗುರು ಮಾತೆ ಮಹಾದೇವಿ

ವಿ.ಸೂ : ಕಾರಣಾಂತರದಿಂದ ದಿನಾಂಕಗಳಲ್ಲಿ, ಊರುಗಳಲ್ಲಿ ಬದಲಾವಣೆ ಆಗಬಹುದು. ಅದನ್ನು ತಿಳಿಸಲಾಗುವುದು.

ಕ್ರ.ಸಂ.	ದಿನಾಂಕ	ವಾರ	ಊರಿನ ಹೆಸರು
33.	6-12-2007	ಪ್ರಭು (ಗುರು)ವಾರ	ಹುಬ್ಬಳ್ಳಿ
34.	7-12-2007	ಮಾತೃ (ಶುಕ್ರ)ವಾರ	ಧಾರವಾಡ
35.	8-12-2007	ಶರಣ (ಶನಿ)ವಾರ	,,
36.	9-12-2007	ದೇವ (ಭಾನು)ವಾರ	ಬೈಲಹೊಂಗಲ
37.	10-12-2007	ಶಿವ (ಸೋಮ)ವಾರ	ನೇಸರಗಿ

38.	11-12-2007	ಬಸವ (ಮಂಗಳ)ವಾರ	ಬೆಳಗಾವಿ
39.	12-12-2007	ಚನ್ನ (ಬುಧ)ವಾರ	ಬೆಳಗಾವಿ
40.	13-12-2007	ಪ್ರಭು (ಗುರು)ವಾರ	,,
41.	14-12-2007	ಮಾತೃ (ಶುಕ್ರ)ವಾರ	,,
42.	15-12-2007	ಶರಣ (ಶನಿ)ವಾರ	ಸಂಕೇಶ್ವರ
43.	16-12-2007	ದೇವ (ರವಿ)ವಾರ	ಗಡಿಹಿಂಗ್ಲಾಜ್
44.	17-12-2007	ಶಿವ (ಸೋಮ)ವಾರ	ಗೋಕಾಕ್
45.	18-12-2007	ಬಸವ (ಮಂಗಳ)ವಾರ	,,
46.	19-12-2007	ಚನ್ನ (ಬುಧ)ವಾರ	,,
47.	20-12-2007	ಪ್ರಭು (ಗುರು)ವಾರ	,,
48.	21-12-2007	ಮಾತೃ (ಶುಕ್ರ)ವಾರ	ಶೇಗುಣಸಿ
49.	22-12-2007	ಶರಣ (ಶನಿ)ವಾರ	ಕನಮಡಿ
50.	23-12-2007	ದೇವ (ರವಿ)ವಾರ	ಬಿಜಾಪುರ
51.	24-12-2007	ಶಿವ (ಸೋಮ)ವಾರ	ಭೀಮರಾಯನ ಗುಡಿ
52.	25-12-2007	ಬಸವ (ಮಂಗಳ)ವಾರ	ಗುಲಬರ್ಗಾ
53.	26-12-2007	ಚನ್ನ (ಬುಧ)ವಾರ	,,
54.	27-12-2007	ಪ್ರಭು(ಗುರು)ವಾರ	ಯಲಮಾಮಿಡಿ
55.	28-12-2007	ಮಾತೃ(ಶುಕ್ರ)ವಾರ	ಉದಗೀರ್
56.	29-12-2007	ಶರಣ (ಶನಿ)ವಾರ	ಬೀದರ್
57.	30-12-2007	ದೇವ (ರವಿ)ವಾರ	,,
58.	31-12-2007	ಶಿವ (ಸೋಮ)ವಾರ	ಜಹಿರಾಬಾದ್
59.	01-01-2008	ಬಸವ (ಮಂಗಳ)ವಾರ	ಹೈದ್ರಾಬಾದ್
60.	02-01-2008	ಚನ್ನ (ಬುಧ)ವಾರ	ಹೈದ್ರಾಬಾದ್
61.	03-01-2008	ಪ್ರಭು (ಗುರು)ವಾರ	,,
62.	04-01-2008	ಮಾತೃ (ಶುಕ್ರ)ವಾರ	,,
63.	05-01-2008	ಶರಣ (ಶನಿ)ವಾರ	,,
64.	06-01-2008	ದೇವ (ರವಿ)ವಾರ	,,
65.	07-01-2008	ಶಿವ (ಸೋಮ)ವಾರ	,,
67.	08-01-2008	ಬಸವ (ಮಂಗಳ)ವಾರ	,,
67.	09-01-2008	ಚನ್ನ (ಬುಧ)ವಾರ	,,
68.	10-01-2008	ಪ್ರಭು(ಗುರು)ವಾರ	ಕೂಡಲ ಸಂಗಮಕ್ಕೆ ಪ್ರಯಾಣ

2008ನೇ ಇಸವಿಯಲ್ಲಿ ಬರುವ ಲಿಂಗಾಯತ ಧರ್ಮೀಯರ ಹಬ್ಬ - ಹುಣ್ಣಿಮೆ -ಉತ್ಸವಗಳು

ಜನವರಿ	:	ಕೂಡಲ ಸಂಗಮದಲ್ಲಿ ಶರಣ ಮೇಳ	- 11-15ರವರೆಗೆ
		ಬಸವ ಧರ್ಮ ಸಂಸ್ಥಾಪನಾ ದಿನ- ಶರಣ ಸಮಾಗಮ	- 14
		ಸಿದ್ಧರಾಮೇಶ್ವರ ಜಯಂತಿ ★	- 15
ಫೆಬ್ರವರಿ	:	ಶರಣ. ಹರ್ಡೇಕರ್ ಮಂಜಪ್ಪನವರ ಜಯಂತಿ	- 18
		ಚನ್ನ ಹುಣ್ಣಿಮೆ (ಉಳಿವೆಯಲ್ಲಿ ರಥೋತ್ಸವ)	- 21
		ಗಣಭೋಜನ	- 21
ಮಾರ್ಚ್	:	ಸರ್ವ ಶರಣರ ದಿನಾಚರಣೆ (ಗಣಮೇಳ)★	- 05
		ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ 63ನೆಯ ವರ್ಧಂತಿ	- 13
ಎಪ್ರಿಲ್	:	ಮಹಾರಾಷ್ಟ್ರದ ಅಲ್ಲಮ ಗಿರಿಯಲ್ಲಿ ಲಿಂಗಾಯತ ಗಣಮೇಳ	- 6,7, 8
		ಅಲ್ಲಮ ಪ್ರಭು ಜಯಂತಿ	- 07
		ಅಕ್ಕಮಹಾದೇವಿ ಜಯಂತಿ	- 20
		ಹರಳಯ್ಯನವರ ಜಯಂತಿ	- 20
ಮೇ	:	ಕಾಯಕ ದಿನಾಚರಣೆ	- 01
		ಮಡಿವಾಳ ಮಾಚಿದೇವ ಜಯಂತಿ	- 01
		ಬಸವ ಜಯಂತಿ ★	- 07
		ಲಿಂಗಾಯತರ ಹೊಸ ವರ್ಷ ಆರಂಭ ★	- 07
		ಹಡಪದ ಅಪ್ಪಣ್ಣ ಪೌರ್ಣಿಮೆ	- 19
ಜೂನ್	:	ಪೂಜ್ಯ ಶ್ರೀ ಜಗದ್ಗುರು ಲಿಂಗಾನಂದ ಸ್ವಾಮಿಗಳ 13ನೇ ವರ್ಷದ ಲಿಂಗೈಕ್ಯ ಸಂಸ್ಮರಣೆ	- 30
ಜುಲೈ	:	ಶರಣ. ಫ. ಗು. ಹಳಕಟ್ಟಿ ಜಯಂತಿ	- 02
		ಅಲ್ಲಮಪ್ರಭು ಪೌರ್ಣಿಮೆ	- 18
ಆಗಸ್ಟ್	:	ಬಸವ ಪಂಚಮಿ (ಲಿಂಗೈಕ್ಯ ಸಂಸ್ಮರಣೆ)	- 06
		ನೀಲಮ್ಮ ಷಷ್ಠಿ	- 07
		ನೀಲಾಂಬಿಕಾ ಪೌರ್ಣಿಮೆ	- 26
ಸೆಪ್ಟೆಂಬರ್	:	ಪೂಜ್ಯ ಲಿಂಗಾನಂದ ಸ್ವಾಮೀಜಿಯವರ 77ನೇ ಜಯಂತಿ	- 03
		ರಾಷ್ಟ್ರೀಯ ಬಸವ ದಳದ ಹುಟ್ಟು ಹಬ್ಬ	- 03
		ಪೂಜ್ಯ ಗಂಗಾದೇವಿಯವರ 51ನೇ ವರ್ಧಂತಿ	- 03
		ಮಾಚಿದೇವ ಪೌರ್ಣಿಮೆ	- 15
		ಕಲ್ಯಾಣ ಕ್ರಾಂತಿ ಸಂಸ್ಮರಣೋತ್ಸವ ಆರಂಭ	- 30
ಅಕ್ಟೋಬರ್	:	ಬಸವ ಕಲ್ಯಾಣದಲ್ಲಿ ಕಲ್ಯಾಣ ಪರ್ವ	- 7, 8, 9
		ಹರಳಯ್ಯ - ಮಧುವರಸರ ಸಂಸ್ಮರಣೆ	- 08
		ಬಸವ ಧರ್ಮ ವಿಜಯೋತ್ಸವ	- 09
		ನಾಗಲಾಂಬಿಕಾ ಪೌರ್ಣಿಮೆ	- 14
		ಚನ್ನ ಬಸವಣ್ಣನವರ ಜಯಂತಿ	- 29
ನವೆಂಬರ್	:	ಚನ್ನ ಬಸವಣ್ಣನವರ ಲಿಂಗೈಕ್ಯ ದಿನ	- 13
		ವಚನ ಪೌರ್ಣಿಮೆ	- 13
ಡಿಸೆಂಬರ್	:	ಶರಣ ಪೌರ್ಣಿಮೆ	- 12

CPMG/KA/BGW-50/2006-2008 WPP(W)-17 R.No.19980/70

